ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 30 ಗುರುವಾರ 2026

ಸಂಪುಟ: 47 | ಸಂಚಿಕೆ: 15 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*





ಮಾದಕ ವಸ್ತುಗಳ ಕಾರ್ಯಾಚರಣೆ ನಡುವೆ ಈಗ ಫೀಲ್ಡ್‌ಗಿಳಿದಿರುವ ಅಬಕಾರಿ ಪೊಲೀಸರು

● ಅನುಮಾನಾಸ್ಪದ ಸ್ಥಳಗಳಲ್ಲಿ ತಪಾಸಣೆ ● ನಕಲಿ ಮದ್ಯ, ಅಕ್ರಮ ಮದ್ಯ ಸಂಗ್ರಹದ ವಿರುದ್ಧ ಸಮರ

ಮೈಸೂರು, ಏ.29(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಮಾದಕ ವಸ್ತುಗಳ ಬಳಕೆ, ಮಾರಾಟ ಮತ್ತು ಉತ್ಪಾದನೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ನಗರ ಪೊಲೀಸರ ನಿರಂತರ ಕಾರ್ಯಾಚರಣೆ ನಡುವೆ ಮಾದಕದ ಜಾಡು ಹಿಡಿದು ಮೈಸೂರಿಗೆ ಬಂದ ಮಹಾರಾಷ್ಟ್ರ, ಗೋವಾ ಮತ್ತು ನವ ದೆಹಲಿಯ ಪೊಲೀಸರು ಮೂರು ಅಕ್ರಮ ಮಾದಕ ವಸ್ತು ತಯಾರಿಕಾ ಘಟಕಗಳನ್ನು ಪತ್ತೆ ಹಚ್ಚಿದ್ದರು. ಬಳಿಕ ಎಚ್ಚೆತ್ತು ಕಾರ್ಯಾಚರಣೆಗಿಳಿದಿರುವ ಅಬಕಾರಿ ಪೊಲೀಸರು, ಬುಧವಾರ ಬೆಳ್ಳಂಬೆಳಗ್ಗೆ ವ್ಯಾಪಕ ಶೋಧ ಕಾರ್ಯ ನಡೆಸಿದ್ದಾರೆ.

ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತರ(ಜಾರಿ ಮತ್ತು ತನಿಖೆ) ನಿರ್ದೇಶನದ ಮೇರೆಗೆ ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷ ಹೆಚ್.ಕೆ. ರಮೇಶ್ ನೇತೃತ್ವದಲ್ಲಿ ಕಾರ್ಯಾಚರಣೆಗಿಳಿದ 30ಕ್ಕೂ ಹೆಚ್ಚು ಮಂದಿ ಅಬಕಾರಿ ಪೊಲೀಸರು, ಅನುಮಾನಾಸ್ಪದ ಸ್ಥಳಗಳಲ್ಲಿ ಏಕಾಏಕಿ ದಾಳಿ ನಡೆಸಿ, ಅಬಕಾರಿ ಮತ್ತು ಮಾದಕ ವಸ್ತುಗಳ ಜಾಲಾಡಿದ್ದಾರೆ.



ಮೈಸೂರು ನಗರದ ವಿವಿಧೆಡೆ ಬುಧವಾರ ಬೆಳಗ್ಗೆ ಏಕಾಏಕಿ ದಾಳಿ ನಡೆಸಿದ ಅಬಕಾರಿ ಪೊಲೀಸರು, ಶೋಧ ಕಾರ್ಯ ನಡೆಸಿದರು

ಬೆಳಗ್ಗೆ 7.30ರಿಂದ 10.30ರವರೆಗೆ ಶೋಧ ಕಾರ್ಯ ನಡೆಸಿದ ಅಬಕಾರಿ ಪೊಲೀಸರು, ಬನ್ನಿಮಂಟಪ ಬಡಾವಣೆ, ರಾಡಿಕೋ ಡಿಸ್ಟಿಲರಿ ಸುತ್ತಮುತ್ತ, ಎನ್.ಆರ್ ಮೊಹಲ್ಲಾದಲ್ಲಿನ ಗೋಡೌನ್‌ಗಳು, ಗುಜರಿ ಅಂಗಡಿಗಳು ಹಾಗೂ ಇನ್ನಿತರೆ ಅನುಮಾನಾಸ್ಪದ ಸ್ಥಳಗಳಲ್ಲಿ ಪರಿಶೀಲಿಸಿದ್ದಾರೆ. ಕಾರ್ಯಾಚರಣೆಯ ಸಮಯದಲ್ಲಿ ಯಾವುದೇ ಅಕ್ರಮ ಅಬಕಾರಿ ಮತ್ತು ಮಾದಕ ವಸ್ತುಗಳು ಪತ್ತೆಯಾಗಿಲ್ಲ. ಆದಾಗ್ಯೂ, ಗೋಡೌನ್ ಮಾಲೀಕರು ಮತ್ತು ಅಲ್ಲಿನ ಕೆಲಸಗಾರರಿಗೆ ತ್ಯಾಜ್ಯ ಸಂಸ್ಕರಣೆ ಅಥವಾ ರಾಸಾಯನಿಕ ನಿರ್ವಹಣೆಯ ನೆಪದಲ್ಲಿ ಯಾವುದೇ ಮಾದಕ ವಸ್ತುಗಳ ಬಳಕೆ, ಅಕ್ರಮ ದಾಸ್ತಾನು ಮತ್ತು ತಯಾರಿಕೆಯಂತಹ ಕಾನೂನುಬಾಹಿರ ಚಟುವಟಿಕೆಗಳು ಕಂಡುಬಂದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಏಕಾಏಕಿ ದಾಳಿ ನಡೆಸಿದ್ದು, ಪರಿಶೀಲನೆ ನಡೆಸಿದ ಸ್ಥಳಗಳಲ್ಲಿ ಯಾವುದೇ ಮಾದಕ ವಸ್ತುಗಳು ಪತ್ತೆಯಾಗಿಲ್ಲ. ಆದರೂ ಈ ಪ್ರದೇಶಗಳಲ್ಲಿ ಆಗಾಗ ಪರಿಶೀಲಿಸುವಂತೆ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗೆ ಸೂಚಿಸಲಾಗಿದೆ. ಮೈಸೂರನ್ನು ಮಾದಕ ವಸ್ತುಗಳ ಮುಕ್ತ ನಗರವನ್ನಾಗಿಸುವ ನಿಟ್ಟಿನಲ್ಲಿ ಅಬಕಾರಿ ಇಲಾಖೆಯಿಂದ ಶೋಧ ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

> “ಮೈಸೂರು ವಿಭಾಗದ ಜಂಟಿ ಆಯುಕ್ತರ ಸೂಚನೆ ಮೇರೆಗೆ ದಾಳಿ ನಡೆಸಲಾಗಿದೆ. ಅಬಕಾರಿ ಸರಕುಗಳ ಅಕ್ರಮ ಸಂಗ್ರಹಣೆಯನ್ನು ಪರಿಶೀಲಿಸುವುದು ಮತ್ತು ನಗರದಲ್ಲಿ ನಡೆಯುತ್ತಿರುವ ಮಾದಕ ದ್ರವ್ಯ ವಿರೋಧಿ ಅಭಿಯಾನವನ್ನು ಬೆಂಬಲಿಸುವುದು ಈ ಶೋಧ ಕಾರ್ಯಾಚರಣೆ ಉದ್ದೇಶವಾಗಿತ್ತು
> –ಹೆಚ್.ಕೆ.ರಮೇಶ್, ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ

ಎಸ್‌ಎಸ್‌ಎಲ್‌ಸಿಯಲ್ಲಿ ಡಿಜಿಟಿಎಂ ಶಾಲೆಗೆ ಶೇ.100 ಫಲಿತಾಂಶ



ಪೂರ್ವಿತ ಆಶ್ರಿತ ಅರ್ಪಿತಾ ಪರಮೇಶ್ ಶ್ರುತಿ



ಸ್ಫೂರ್ತಿ ಯಶಸ್

ಮೈಸೂರು,ಏ.29–ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಡಿ.ಜಿ. ತಿರುವೆಂಗಡ ಮೊದಲಿಯಾರ್ ವಿದ್ಯಾಸಂಸ್ಥೆಗೆ ಶೇ. 100 ಫಲಿತಾಂಶ ಬಂದಿದೆ. 18 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ ಏಳು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, ಉಳಿದ ಎಲ್ಲಾ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ. ಸಂಸ್ಥೆಯ ಕಾರ್ಯದರ್ಶಿ ಎಂ.ವಿ.ತ್ಯಾಗರಾಜ, ಸಂಸ್ಥೆ ಅಧ್ಯಕ್ಷ ಎಸ್.ಎನ್.ನರೇಂದ್ರ ಬಾಬು, ಟ್ರಸ್ಟಿಗಳಾದ ಕೆ.ಎಸ್.ಶಿವಕುಮಾರ್, ಖಜಾಂಚಿ ಶರವಣ ಡಿ.ಎಸ್. ಹಾಗೂ ಶಿವಪ್ರಕಾಶ್ ಶಿಕ್ಷಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಸಪ್ತಸ್ವರ ಪ್ರೌಢಶಾಲೆಗೆ ಶೇ.100 ಫಲಿತಾಂಶ



ವಿಶಾಲಿನಿ ಅಪ್ಸಾಶಾಮೀದಲಿ ಪಲ್ಲವಿ ಕೆ ಪಲ್ಲವಿ ಪಿ. ಮೌಲ್ಯಶ್ರೀ



ಭೂಮಿಕಾ ಯಶಸ್ವಿನಿ ರಾಫಿಯಾ ಮುಲ್ಲಾ ಸೈಯದ್ ಸದ್ದಾಂ ಚೈತ್ರಶ್ರೀ

ಮೈಸೂರು,ಏ.29–ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಪ್ತಸ್ವರ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ಶೇ.100 ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾಗಿದ್ದ 49 ವಿದ್ಯಾರ್ಥಿಗಳಲ್ಲಿ ಎಸ್.ವಿಶಾಲಿನಿ 625ಕ್ಕೆ 612 ಅಂಕ ಗಳಿಸಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಹಾಗೆಯೇ 10 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 29 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 6 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ, 4 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅಪ್ಸಶಾಮೀದಲಿ–594, ಪಲ್ಲವಿ ಕೆ.–578, ಪಿ.ಪಲ್ಲವಿ–569, ಮೌಲ್ಯಶ್ರೀ ಎನ್.–566, ಭೂಮಿಕ ಎಸ್.–561, ಯಶಸ್ವಿನಿ ಎಂ.–546, ರಾಫಿಯಾ ಮುಲ್ಲಾ–545, ಸೈಯದ್ ಸದ್ದಾಂ–540 ಅಂಕ ಗಳಿಸಿದ್ದಾರೆ.

ಎಂ.ಬಿ.ಶ್ರಾವ್ಯಗೆ 616 ಅಂಕ



ಮೈಸೂರು: ಮೈಸೂರಿನ ಭಾರತೀಯ ವಿದ್ಯಾ ಭವನದ ವಿದ್ಯಾರ್ಥಿನಿ ಶ್ರಾವ್ಯ ಎಂ.ಬಿ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 616 ಶೇ.98.56 ರಷ್ಟು ಅಂಕ ಪಡೆದು ಸಾಧನೆ ಮಾಡಿದ್ದಾರೆ. ಈಕೆ ಕನ್ನಡ–125, ಇಂಗ್ಲಿಷ್–100, ಹಿಂದಿ–100, ಗಣಿತ–97, ವಿಜ್ಞಾನ–95, ಸಮಾಜ ವಿಜ್ಞಾನ–99 ಅಂಕ ಗಳಿಸಿದ್ದಾರೆ. ಈಕೆ ಮಂಚೇಗೌಡನಕೊಪ್ಪಲಿನ ನಿವಾಸಿ ಶ್ರೀಮತಿ ಕಮಲಮ್ಮ ಹಾಗೂ ಚೆಲುವರಾಜ್ ಅವರ ಮೊಮ್ಮಗಳು. ಈಕೆಯ ಸಾಧನೆಗೆ ಶಾಲೆಯ ಆಡಳಿತ ಮಂಡಳಿ ಹಾಗೂ ಮಂಚೇಗೌಡನಕೊಪ್ಪಲಿನ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಕೆ.ಎಸ್.ಜಾನಕಿಗೆ 601 ಅಂಕ



ಮೈಸೂರು,ಏ.29–ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನಂತಗೀತಾ ಪ್ರೌಢಶಾಲೆ ವಿದ್ಯಾರ್ಥಿನಿ ಕೆ.ಎಸ್.ಜಾನಕಿ 601 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ–124, ಇಂಗ್ಲಿಷ್–96, ಹಿಂದಿ–98, ಗಣಿತ–92, ವಿಜ್ಞಾನ–93, ಸಮಾಜ ವಿಜ್ಞಾನ–98 ಅಂಕ ಪಡೆದಿದ್ದಾಳೆ. ಈಕೆ ಕೆ.ಎಸ್.ಶಿವಮೂರ್ತಿ ಮತ್ತು ಸರಸ್ವತಮ್ಮ ದಂಪತಿ ಪುತ್ರಿ

ರಿಷಿಕಾಗೆ 595 ಅಂಕ



ಮೈಸೂರು: ಮೈಸೂರಿನ ವಿ.ವಿ. ಮೊಹಲ್ಲಾದಲ್ಲಿರುವ ನಿರ್ಮಲ ಹೈಸ್ಕೂಲ್ ವಿದ್ಯಾರ್ಥಿನಿ ರಿಷಿಕಾ ಆರ್. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 595 ಶೇ.95.2 ರಷ್ಟು ಅಂಕ ಪಡೆದಿದ್ದಾಳೆ. ಈಕೆ ಕನ್ನಡ–125, ಇಂಗ್ಲಿಷ್–100, ಹಿಂದಿ–99, ಗಣಿತ–84, ವಿಜ್ಞಾನ–89, ಸಮಾಜ ವಿಜ್ಞಾನ–98 ಅಂಕಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾಳೆ. ಈಕೆ ಪಡುವಾರಹಳ್ಳಿಯ ನಿವಾಸಿ ರಾಘವೇಂದ್ರ ಸಿ.ಎಸ್. ಹಾಗೂ ತೇಜಸ್ವಿನಿ ಕೆ. ಪುತ್ರಿ

ಕೆ.ಕೀರ್ತನಾಗೆ 563 ಅಂಕ



ಮೈಸೂರು, ಏ. 29– ಮೈಸೂರಿನ ಬೃಂದಾವನ ಬಡಾವಣೆಯ ರೋಟರಿ ಬೃಂದಾವನ ಶಾಲೆ ವಿದ್ಯಾರ್ಥಿನಿ ಕೆ. ಕೀರ್ತನಾ 563 ಅಂಕ ಗಳಿಸುವ ಮೂಲಕ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ ವಿಷಯದಲ್ಲಿ 118, ಇಂಗ್ಲಿಷ್–89, ಹಿಂದಿ–91, ಗಣಿತ–94, ವಿಜ್ಞಾನ–79, ಸಮಾಜ ವಿಜ್ಞಾನ–92 ಅಂಕ ಪಡೆದಿದ್ದಾಳೆ.

ಭುವನ್‌ಗೆ 548 ಅಂಕ



ಮೈಸೂರು: ವಿಜಯನಗರ 1ನೇ ಹಂತದ ಭಾರತೀಯ ವಿದ್ಯಾ ಭವನ ಶಾಲೆಯ ವಿದ್ಯಾರ್ಥಿ ಎಂ.ಭುವನ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 548 ಅಂಕ ಗಳಿಸಿದ್ದಾನೆ. ಕನ್ನಡ 116, ಇಂಗ್ಲಿಷ್ 93, ಹಿಂದಿ 93, ಗಣಿತ 82, ವಿಜ್ಞಾನ 84, ಸಮಾಜ ವಿಜ್ಞಾನ 80 ಅಂಕ ಪಡೆದಿದ್ದಾನೆ. ಈತ ಅಶೋಕಪುರಂನ ಮಧು ಹಾಗೂ ಹೇಮ ದಂಪತಿ ಪುತ್ರ

ಲಯನ್ಸ್ ಎಜುಕೇಷನ್ ಸೊಸೈಟಿಗೆ ಉತ್ತಮ ಫಲಿತಾಂಶ



ವೈಷ್ಣವಿ ಕಲ್ಪನಾ ಅಮಿತಾ ವಿಶಾಲಾಕ್ಷಿ ಪಲ್ಲವಿ




ಸುಶ್ಮಿತಾ ದೀಕ್ಷಿತಾ ತ್ರಿಪುರಾಂಬ ಯಶಸ್ವಿನಿ ನೀತುಶ್ರೀ

ಮೈಸೂರು, ಏ. 29– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಲಯನ್ಸ್ ಎಜುಕೇಷನ್ ಸೊಸೈಟಿಗೆ ಉತ್ತಮ ಫಲಿತಾಂಶ ಬಂದಿದೆ. ಎಂ.ಎಸ್.ವೈಷ್ಣವಿ–608, ಕಲ್ಪನಾ–580, ಅಮಿತಾ–571, ವಿಶಾಲಾಕ್ಷಿ–563, ಬಿ.ವಿ.ಪಲ್ಲವಿ–548, ಎಂ.ಸುಶ್ಮಿತಾ–541, ಕೆ.ಆರ್.ದೀಕ್ಷಿತಾ–530, ಜಿ.ಎಸ್.ತ್ರಿಪುರಾಂಬ–523, ಜಿ.ಎಸ್.ಯಶಸ್ವಿನಿ–522, ನೀತುಶ್ರೀ ಎಂ.ಹೆಚ್.–497 ಅಂಕ ಗಳಿಸಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಮಕ್ಕಳ ಆರೋಗ್ಯ ಬೇಸಿಗೆ ಶಿಬಿರ, ಸ್ಮರಣ ಶಕ್ತಿ ಯೋಗದ ಪರಿಚಯ ಕಾರ್ಯಕ್ರಮ

ಮೈಸೂರು, ಏ. 29 – ಮೈಸೂರಿನ ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್ ವತಿಯಿಂದ ಮಕ್ಕಳ ಆರೋಗ್ಯ ಬೇಸಿಗೆ ಶಿಬಿರ ಮತ್ತು ಸ್ಮರಣ ಶಕ್ತಿ ಯೋಗದ ಪರಿಚಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳ ಸ್ಮರಣಶಕ್ತಿ ಯೋಗ ಶಿಬಿರದ ಪರಿಚಯ ಕಾರ್ಯಕ್ರಮ ಮೇ 5 ರಂದು ಬೆಳಗ್ಗೆ 10 ಗಂಟೆಗೆ ಕುವೆಂಪು ನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ನಡೆಯಲಿದೆ. ನೋಂದಣಿಗಾಗಿ ಹೆಚ್.ಎಸ್. ರಮೇಶ್‌ಚಂದ್ರ– 94484 58050, ಪಿ.ಎ. ಮನೋಹರ್‌ರಾವ್–86187 62110 ಸಂಪರ್ಕಿಸಲು ಕೋರಲಾಗಿದೆ.

ಶಾಸಕ ಜಿ.ಟಿ.ದೇವೇಗೌಡರಿಗೆ ದೇವಗಹಳ್ಳಿ ಗ್ರಾಮಸ್ಥರಿಂದ ಸನ್ಮಾನ...



ಮೈಸೂರು ತಾಲೂಕು ಜಯಪುರ ಹೋಬಳಿಯ ದೇವಗಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಹುಚ್ಚಮ್ಮತಾಯಿ ದೇವಾಲಯ ಉದ್ಘಾಟಿಸಿದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಈ ವೇಳೆ ಗೋಪಾಲಪುರ ಗ್ರಾಪಂ ಮಾಜಿ ಅಧ್ಯಕ್ಷ ಜಿ.ಕೆ ಬಸವೇಗೌಡ, ಮಾಜಿ ಸದಸ್ಯ ಸಿದ್ದಯ್ಯ, ಗ್ರಾಮಸ್ಥರಾದ ಶಿವಕುಮಾರ್, ವೆಂಕಟೇಶ್, ಶಿವಣ್ಣ, ವಿರಾಜಪ್ಪ, ಬಸವಣ್ಣ, ಮಹದೇವಸ್ವಾಮಿ, ರಾಜು, ಶ್ರೀನಿವಾಸಮೂರ್ತಿ, ಕೆಂಪಣ್ಣ, ಶಿವರಾಜು, ಪ್ರಸಾದ್, ನಾಗೇಶ್, ರಾಮಚಂದ್ರ, ಗುರುರಾಜು, ಮಹೇಶ್, ಸುರೇಶ್, ಕೆಂಪಯ್ಯ, ಮಾಧು, ಶಶಿಧರ, ಬಸಪ್ಪ, ಮರಿಕೆಂಚಯ್ಯ ಉಪಸ್ಥಿತರಿದ್ದರು.

ನಾಳೆ ಎಸ್.ಎಂ.ಕೃಷ್ಣ ಸ್ಮರಣೆ



ಮೈಸೂರು, ಏ.29 (ಜಿಎ)–ಮೈಸೂರಿನ ಹೆಬ್ಬಾಳು ಫೌಂಡೇಷನ್ ಹಾಗೂ ಎಸ್.ಎಂ. ಕೃಷ್ಣ ಅಭಿಮಾನಿಗಳ ಬಳಗದ ವತಿಯಿಂದ ಮೇ 1ರಂದು ಬೆಳಗ್ಗೆ 9.30ಕ್ಕೆ ಗೋಕುಲಂ 2ನೇ ಹಂತ ಇಂಟರ್ ನ್ಯಾಷನಲ್ ಯೂತ್ ಹಾಸ್ಟೆಲ್‌ನಲ್ಲಿ ಎಸ್.ಎಂ.ಕೃಷ್ಣ ಅವರ 94ನೇ ಜನ್ಮ ದಿನಾಚರಣಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷ ಕೆ.ಎಂ.ಬಸವೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅಧ್ಯಕ್ಷತೆ ವಹಿಸುವರು. ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ನಾಡು ಕಂಡ ಧೀಮಂತ ರಾಜಕಾರಣಿಗಳಲ್ಲಿ ದಿ.ಎಸ್.ಎಂ.ಕೃಷ್ಣ ಒಬ್ಬರಾಗಿದ್ದಾರೆ. ತಮ್ಮ 50– 60 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅನೇಕ ಹುದ್ದೆ ಅಲಂಕರಿಸಿದ್ದರು, ರಾಜ್ಯ ಹಾಗೂ ಕೇಂದ್ರದ ನಾಲ್ಕೂ ಸದನಗಳಲ್ಲಿ ಸದಸ್ಯರಾಗಿದ್ದ ಕೆಲವೇ ಮಂದಿಯಲ್ಲಿ ಇವರೂ ಒಬ್ಬರು. ವಿರೋಧ, ಆಡಳಿತ ಪಕ್ಷಗಳಲ್ಲಿಯೂ ಇದ್ದುದಲ್ಲದೆ, ಡಿಸಿಎಂ, ಸಿಎಂ ಆಗಿ ರಾಜ್ಯ ರಾಜಕಾರಣವನ್ನು ಎತ್ತರಕ್ಕೆ ಕೊಂಡೊಯ್ದರು. ಬೆಂಗಳೂರ ಸಿಲಿಕಾನ್ ಸಿಟಿ ಎಂಬ ಮಾದರಿ ನಗರವಾಗಿ ರೂಪುಗೊಳ್ಳಲು ಕಾರಣರಾದರು. ಹೀಗಾಗಿ ಸ್ಮರಣೆ ಹಿನ್ನೆಲೆಯಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಬೆಳಗೊಳ ಸುಬ್ರಹ್ಮಣ್ಯ, ಲಿಂಗರಾಜೇಗೌಡ, ವೆಂಕಟಸುಬ್ಬಯ್ಯ ಉಪಸ್ಥಿತರಿದ್ದರು.

ಮೈಸೂರು–ಮಾನಂದವಾಡಿ ರಸ್ತೆ ವೈಟ್ ಟಾಪಿಂಗ್; ವಿವಿಧ ಇಲಾಖೆ ಅಧಿಕಾರಿಗಳಿಂದ ಪರಿಶೀಲನೆ



ವೈಟ್ ಟಾಪಿಂಗ್ ಕಾಮಗಾರಿ ಸಂಬಂಧ ವಿವಿಧ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಮೈಸೂರು, ಏ.29(ಎಸ್‌ಪಿಎನ್)– ಮೈಸೂರಿನ ಮಾನಂದವಾಡಿ ರಸ್ತೆ (1.4 ಕಿ.ಮೀ)ಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಸಂಬಂಧ ಮೈಸೂರು ಪಾಲಿಕೆ, ಸೆಸ್ಕಾಂ, ಪಿಡಬ್ಲ್ಯೂಡಿ ಅಧಿಕಾರಿಗಳು ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದರು.

ವೈಟ್ ಟಾಪಿಂಗ್ ಸಂಬಂಧ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ನೇತೃತ್ವದಲ್ಲಿ ಏ.27ರಂದು ಕರೆದಿದ್ದ ಸಭೆಯಲ್ಲಿ ಎಲ್ಲಾ ಇಲಾಖೆ ಅಧಿಕಾರಿಗಳು ಖುದ್ದು ಭೇಟಿ ನೀಡಿ, ಸಮಸ್ಯೆಗಳಿದ್ದಲ್ಲಿ ಬಗೆಹರಿಸುವಂತೆ ಸೂಚನೆ ನೀಡಿದ ಬೆನ್ನಲ್ಲೇ ಮೈಸೂರು–ಮಾನಂದವಾಡಿ ರಸ್ತೆಯ ನಾಚನಹಳ್ಳಿ ಪಾಳ್ಯ ಸಮೀಪ ವಿದ್ಯುತ್ ಫೀಡರ್ ಲೈನ್(ಯುಜಿ ಕೇಬಲ್) ಅಳವಡಿಕೆ ಸಂಬಂಧ ಸೆಸ್ಕಾಂ, ನಗರ ಪಾಲಿಕೆ ಹಾಗೂ ಪಿಡಬ್ಲ್ಯೂಡಿ ಅಧಿಕಾರಿಗಳು ಸ್ಥಳದಲ್ಲಿ ಖುದ್ದು ಹಾಜರಿದ್ದು, ಸ್ಥಳ ಪರಿಶೀಲನೆ ನಡೆಸಲಾಗಿದೆ ಎಂದು ಪಿಡಬ್ಲ್ಯೂಡಿ ಎಇಇ ಮಹದೇವಸ್ವಾಮಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.


ಈಗಾಗಲೇ ಮೈಸೂರು–ಮಾನಂದವಾಡಿ ರಸ್ತೆಯ 6.4 ಕಿ.ಮೀ ರಸ್ತೆಗೆ ವೈಟ್ ಟಾಪಿಂಗ್ ರಸ್ತೆ ಕಾಮಗಾರಿ ಆರಂಭವಾಗಿದೆ. ಈಗ 1.4 ಕಿ.ಮೀ ವ್ಯಾಪ್ತಿಯಲ್ಲಿ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿಗೆ ನೀರು ಪೂರೈಕೆ, ಯುಜಿ ಕೇಬಲ್ ಅಳವಡಿಕೆ ಸಂಬಂಧ ಏನಾದರು ತೊಂದರೆಗಳಿದ್ದಲ್ಲಿ ಬಗೆಹರಿಸುವ ಸಂಬಂಧ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಯಿತು ಎಂದು ಮಾಹಿತಿ ನೀಡಿದರು.

ಬಿಇಓಗೆ ಅಭಿನಂದನೆ



ಹುಣಸೂರು ತಾಲೂಕಿನ ಶಾಲಾ ಶಿಕ್ಷಣ ಇಲಾಖೆ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಕಾಳನಾಯಕ ಅವರನ್ನು ಹೆಚ್.ಡಿ. ಕೋಟೆ ತಾಲೂಕಿನ ಶಿಕ್ಷಕರ ಸಂಘ, ಉಪಾಧ್ಯಾಯ ಸಹಕಾರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಉಭಯ ಸಂಘದ ಅಧ್ಯಕ್ಷರಾದ ಲಿಂಗರಾಜು, ಕೆಂಪರಾಜು, ನಿರ್ದೇಶಕರಾದ ಯಶ್ವಂತಕುಮಾರ್, ಆನಂದ್, ಧನಂಜಯ ದೊರೆಸ್ವಾಮಿ, ನಿಂಗೇಗೌಡ, ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.4.2026 ಗುರುವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಚರ್ಮ, ಬೆನ್ನುಮೂಳೆ ಮತ್ತು ಕೀಲು ನೋವು ಸಮಸ್ಯೆ, ಮಂದ ದೃಷ್ಟಿ, ಕಣ್ಣಿನ ನೋವು, ಕಣ್ಣಿನಲ್ಲಿ ನೀರು ಬರುವುದು, ಕೊಲೆಸ್ಟ್ರಾಲ್, ಬೊಜ್ಜು ನಿವಾರಣಾ ಚಿಕಿತ್ಸೆ, ಕುತ್ತಿಗೆ ನೋವು, ಭುಜದ ನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ:** ಚಾಂದ್ರಮಾನ ನರಸಿಂಹ ಜಯಂತಿ ಹಾಗೂ ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಅಂದು ಬೆಳಿಗ್ಗೆ 8.30ಕ್ಕೆ ಸಂಕಲ್ಪ, 9.30ಕ್ಕೆ ಅಭಿಷೇಕ, 11ಕ್ಕೆ ಅಲಂಕಾರ, 12ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಶ್ರೀ ಯದುಗಿರಿ ಯತಿರಾಜ ಮಠ, ಕಾಳಿದಾಸ ರಸ್ತೆ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಸುಂಯೋಗ್ ಆಸ್ಪತ್ರೆ :** ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಂಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10ರಿಂದ.

■ **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ** : ಅಷ್ಟಮ ವರ್ಷದ ವಾರ್ಷಿಕೋತ್ಸವ, ಶ್ರೀ ಉತ್ತರಾದಿ ಮಠಾಧೀಶರಾದ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು, ಬೆಳಗ್ಗೆ ನರಸಿಂಹ ಹೋಮ, ಸಂಜೆ 6 ರಿಂದ ಪಂಡಿತ್ ಶ್ರೀ ಆದ್ಯಗೋವಿಂದಾಚಾರ್ಯ ಅವರಿಂದ ಕೂರ್ಮಾವತಾರ ಮಹಿಮೆ ಪ್ರವಚನ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀ ಉತ್ತರಾದಿ ಮಠ, ಶ್ರೀರಾಂಪುರ.

■ **ದಲಿತ ಸಂಘರ್ಷ ಸಮಿತಿ :** ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜಯಂತ್ಯೋತ್ಸವದ ಅಂಗವಾಗಿ ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಬಡ ಮಕ್ಕಳ ಶಿಕ್ಷಣ ಕಸಿಯುತ್ತಿರುವ ಸರ್ಕಾರ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ಪ್ರಾಸ್ತಾವಿಕ ನುಡಿ: ಸಂಶೋಧಕ ಕಾರ್ತಿಕ್, ಮುಖ್ಯ ಅತಿಥಿಗಳು: ಪ್ರೊ.ಆನಂದ, ಚಂದ್ರಕಲಾ, ಹೆಚ್.ಪಿ.ವಿಶ್ವಪ್ರಸಾದ್, ಕೆ.ವಿ.ದೇವೇಂದ್ರ, ಯಡದೊರೆ ಮಹದೇವಯ್ಯ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ:** ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂರವರ ಜನ್ಮ ದಿನಾಚರಣೆ, ಉದ್ಘಾಟನೆ: ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಆಯುಕ್ತ ಕೆ.ಹರೀಶ್‌ಕುಮಾರ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಬಿ.ಶಿವಸ್ವಾಮಿ, ಪ್ರಧಾನ ಭಾಷಣ: ಚಿಂತಕ ವಿಕಾಸ್ ಆರ್.ಮೌರ್ಯ, ಮುಖ್ಯ ಅತಿಥಿಗಳು: ಹಿರಿಯ ಕೆಎಎಸ್ ಅಧಿಕಾರಿ ಡಾ.ಪಿ.ಶಿವರಾಜು, ಆರ್.ಮಹದೇವ, ಅಹಿಂದ ಜವರಪ್ಪ, ಮಹೇಶ್ ಸೋಸಲೆ, ನಟರಾಜ್ ಶಿವಣ್ಣ, ಜೀರಹಳ್ಳಿ ರಮೇಶ್‌ಗೌಡ, ಸ್ಥಳ: ವಿಜ್ಞಾನ ಭವನ, ಮೈಸೂರು ವಿವಿ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಡಾ. ಪಿ. ಬೋರೇಗೌಡ ಅಭಿಮಾನಿಗಳ ಬಳಗ, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಕಾವಾ ಹಿರಿಯ ವಿದ್ಯಾರ್ಥಿಗಳ ಸಂಘ, ಕುಂಚಕಾವ್ಯ ಸಾಂಸ್ಕೃತಿಕ ಸಮಿತಿ:** ದಿವಂಗತ ಡಾ.ಪಿ. ಬೋರೇಗೌಡರವರ ನುಡಿನಮನ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ, ಪುಸ್ತಕ ಬಿಡುಗಡೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪುಸ್ತಕ ಪರಿಚಯ : ಹಿರಿಯ ರಂಗಕರ್ಮಿ ಪ್ರಸನ್ನ, ನುಡಿನಮನ : ನಿವೃತ್ತ ಅಧಿಕಾರಿ ಎಚ್.ಎಸ್. ಅಶೋಕಾನಂದ್, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ಕಾವಾ ಪ್ರಭಾರ ಡೀನ್ ದೇವರಾಜ್, ನಿವೃತ್ತ ಅಧಿಕಾರಿ ಮಾ.ಸ. ಲೋಕೇಶ್, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಸಿದ್ಧಾರ್ಥನಗರ, ಮಧ್ಯಾಹ್ನ 1ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಮಕ್ಕಳ ಲೋಕ:** ಸಾಲುಮರದ ತಿಮ್ಮಕ್ಕ ನೆನಪಿನ ಮಕ್ಕಳ ಹಬ್ಬ ಸಮಾರೋಪ ಸಮಾರಂಭ, ಉದ್ಘಾಟನೆ: ಪತ್ರಕರ್ತೆ ರಶ್ಮಿ ಕೋಟಿ, ಮುಖ್ಯ ಅತಿಥಿಗಳು: ರಂಗ ನಿರ್ದೇಶಕ ಮೈಮ್ ರಮೇಶ್, ಧ್ವನ್ಯಲೋಕ ಮುಖ್ಯಸ್ಥರಾದ ಪ್ರೊ.ಜಯಶ್ರೀ ಸಂಜಯ್, ಅಧ್ಯಕ್ಷತೆ: ಹಿರಿಯ ರಂಗ ನಿರ್ದೇಶಕ ಹೆಚ್.ಜನಾರ್ಧನ್, ಉಪಸ್ಥಿತರು: ರಂಗ ನಿರ್ದೇಶಕರಾದ ಸುಮತಿ ಕೆ.ಆರ್., ರೂಬೆನ್ ಸಂಜಯ್, ವಿದುಷಿ ಹರಿಣಾಕ್ಷಿ ಜಿ.ಎಸ್., ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ.ಕುಲದೀಪ್.ಎನ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಮತ್ತು ಸಂಜೆ 5.30– ಚೂಟಿ ಚೂಟಿ ಚುಟುಕ್ ಗುಳುಂ ಗುಟಕ್–ಶಿಶು ಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ಹೇರಂಭ ಕೆ.ಎಸ್. ಹಾಗೂ ಹೇಮಂತ್ ಕೆ.ಎಸ್– ಯುಗಳ ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸುತ್ತಮುತ್ತ: ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ .ಸಿ ಹಾಗೂ ಅರ್ಚನಾ. ಪಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಹಣ್ಣು ಹೊನ್ನು–ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ಕೀಟ ಸಮೀಕ್ಷೆ ಮತ್ತು ನಿರ್ವಹಣೆಗೆ ಮೋಹಕ ಮತ್ತು ಬೆಳಕಿನ ಬಲೆಗಳು ಕುರಿತು ಸಂವಾದ, ಭಾಗವಹಿಸುತ್ತಾರೆ ಮೈಸೂರು ತಾಲೂಕು, ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ರಾಮೇಗೌಡ ಹಾಗೂ ತುಮಕೂರಿನ ಕೆಂಪ್‌ಮನ್, ಬಯೋ ಆಗ್ರೋ ಸಂಸ್ಥೆಯ ವಿಜೇತ್ ಆರ್ಯ, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಟಿ. ಎಂ. ತ್ಯಾಗರಾಜನ್ – ಹಾಡುಗಾರಿಕೆ, 10.00 ನಾಟಕ–ಅಮೋಘವರ್ಷ ನೃಪತುಂಗ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 30 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 15 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾವಣೆ ಅನಿವಾರ್ಯವಾದರೆ ದಲಿತ ಸಿಎಂ ಕೂಗು

ಡಾ. ಯತೀಂದ್ರ ಮತ್ತೊಂದು ವರಸೆ



ಬೆಂಗಳೂರು, ಏ.29(ಕೆಎಂಶಿ)– ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾಯಿಸುವ ಸಂದರ್ಭ ಎದುರಾದರೆ ದಲಿತ ಮುಖ್ಯಮಂತ್ರಿ ಕೂಗು ಏಳಲಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ತಿಳಿಸಿದ್ದಾರೆ.

ನಮ್ಮ ಅಪ್ಪನೇ ಐದು ವರ್ಷಗಳ ಪೂರ್ಣಾವಧಿಗೆ ಮುಖ್ಯಮಂತ್ರಿ ಎಂಬುದಾಗಿ ಪದೇ ಪದೇ ಹೇಳುತ್ತಿದ್ದ ಯತೀಂದ್ರ ವರಸೆ ಬದಲಿಸಿದ್ದಾರೆ.

ನಮ್ಮ ತಂದೆಯವರೇ ಈಗಲೂ ಮುಖ್ಯಮಂತ್ರಿ, ವರಿಷ್ಠರು ನಾಯಕತ್ವ ಬದಲಾವಣೆಗೆ ಮುಂದಾದರೆ ಅಂತಹ ಸಂದರ್ಭದಲ್ಲಿ ದಲಿತ ಮುಖ್ಯಮಂತ್ರಿ ಕೂಗು ಸಹಜ ಎಂದರು. ಸಿದ್ದರಾಮಯ್ಯ ಅವರ ಸ್ಥಾನಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ತರಬೇಕೆಂಬ ಕೂಗು ಕೇಳಿಬರುತ್ತಿದೆಯಲ್ಲಾ ಎಂಬ ಸುದ್ದಿಗಾರರ ಪ್ರಶ್ನೆಗೆ, ಅದು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದರು.

ತ್ವರಿತ ರಾಜಕೀಯ ಬೆಳವಣಿಗೆ ಹಿನ್ನೆಲೆ; ಗುಪ್ತಚರ ಮುಖ್ಯಸ್ಥರ ಬದಲಾವಣೆ!

ಬೆಂಗಳೂರು, ಏ.29(ಕೆಎಂಶಿ)– ಅಧಿಕಾರ ಹಸ್ತಾಂತರ ಒತ್ತಡ ಹೆಚ್ಚಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಪ್ತಚರ ವಿಭಾಗದ ಮುಖ್ಯಸ್ಥ, ಹಿರಿಯ ಪೊಲೀಸ್ ಅಧಿಕಾರಿ ಎಸ್. ರವಿ ಅವರನ್ನು ರಾತ್ರೋರಾತ್ರಿ ವರ್ಗಾವಣೆ ಮಾಡಿ ಲಾಬೂರಾಮ್ ಅವರನ್ನು ನೇಮಿಸಿದ್ದಾರೆ.

ಕಳೆದ ಒಂದು ವರ್ಷದಲ್ಲಿ ಈ ಸ್ಥಾನಕ್ಕೆ ನಾಲ್ಕು ಅಧಿಕಾರಿಗಳನ್ನು ಮುಖ್ಯಮಂತ್ರಿ ಬದಲಾವಣೆ ಮಾಡುವ ಮೂಲಕ ದಾಖಲೆಯನ್ನೇ ನಿರ್ಮಿಸಿದ್ದಾರೆ. ಸಿದ್ದರಾಮಯ್ಯ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಹಿರಿಯ ಪೊಲೀಸ್ ಅಧಿಕಾರಿ ಡಾ.ಶರತ್‌ಚಂದ್ರ ಅವರನ್ನು ನೇಮಕ ಮಾಡಿಕೊಂಡಿದ್ದರು. ■ 6ನೇ ಪುಟಕ್ಕೆ

ಬೆಂಗಳೂರಲ್ಲಿ ಭಾರೀ ಮಳೆಗೆ ಘೋರ ದುರಂತ

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು 7 ಮಂದಿ ಸಾವು





ಬೆಂಗಳೂರು ಶಿವಾಜಿನಗರದಲ್ಲಿನ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದಿರುವ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಏ.29– ಬೆಂಗಳೂರಲ್ಲಿ ಇಂದು ಸುರಿದ ಭಾರೀ ಮಳೆಗೆ ಘೋರ ದುರಂತವೊಂದು ನಡೆದು ಹೋಗಿದೆ. ಭಾರೀ ಗಾಳಿಯೊಂದಿಗಿನ ಆಲಿಕಲ್ಲು ಮಳೆಯಿಂದಾಗಿ ಶಿವಾಜಿನಗರದಲ್ಲಿನ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ಬಿದ್ದು, ಇಬ್ಬರು ಮಕ್ಕಳು ಸೇರಿ 7 ಮಂದಿ ಮೃತಪಟ್ಟಿದ್ದಾರೆ. ಇನ್ನು 7 ಮಂದಿ ಗಾಯಗೊಂಡಿದ್ದಾರೆ.

ಕಾಂಪೌಂಡ್ ಪಕ್ಕದಲ್ಲಿ ವ್ಯಾಪಾರ ಮಾಡುತ್ತಿದ್ದ ಬಡಪಾಯಿಗಳು ಹಾಗೂ ಮಳೆಯಿಂದ ರಕ್ಷಣೆ ಪಡೆಯಲು ನಿಂತಿದ್ದವರು ಏಕಾಏಕಿ ಕಾಂಪೌಂಡ್ ಕುಸಿದಾಗ ಅದರಡಿ ಸಿಲುಕಿ ಸಾವಿಗೀಡಾಗಿದ್ದಾರೆ. ಇವರಲ್ಲಿ ಇಬ್ಬರು ಮಕ್ಕಳೂ ಸೇರಿದ್ದಾರೆ. ಮೃತಪಟ್ಟವರನ್ನು ತಬೀನ್ ತಾಜ್ (4), ಮುಬೀನ್ ತಾಜ್ (4), ಮಾಯಾ (51), ಸಾಜಿದ್ (20), ಅಜಗರ್ (85), ಪ್ರೀತಿ(51), ಹಾಗೂ ಸಿಜಿ(47) ಎಂದು ಗುರುತಿಸಲಾಗಿದೆ.

ಸಿಎಂ ಭೇಟಿ: ವಿಷಯ ತಿಳಿದ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಅಲ್ಲದೇ ಅಧಿಕಾರಿಗಳಿಗೆ ಕ್ಲಾಸ್ ತೆಗೆದುಕೊಂಡರು. ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದರೆ ಇಂತಹ ದುರಂತ ಸಂಭವಿಸುತ್ತಿರಲಿಲ್ಲ ಎಂದು ಗರಂ ಆಗಿದ್ದಾರೆ.

ಐದು ಲಕ್ಷ ಪರಿಹಾರ: ಈ ದುರಂತದಲ್ಲಿ ಸಾವಿಗೀಡಾದವರ ಕುಟುಂಬಗಳಿಗೆ ತಲಾ 5 ಲಕ್ಷ ರೂ. ■ 6ನೇ ಪುಟಕ್ಕೆ

ಬೌರಿಂಗ್ ಆಸ್ಪತ್ರೆ ದುರಂತ ಮೈಸೂರಲ್ಲಿ ಮರುಕಳಿಸದಿರಲಿ

ನಿದ್ರಾವಸ್ಥೆಯಲ್ಲಿರುವ ಸ್ಥಳೀಯ ಆಡಳಿತ ಎಚ್ಚರಗೊಳ್ಳಲಿ

ಮೈಸೂರು, ಏ.29(ಪಿಎಂ)– ಬೆಂಗಳೂರು ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಏಕಾಏಕಿ ಕುಸಿದು ಬಿದ್ದ ಪರಿಣಾಮ ಏಳು ಮಂದಿ ಅಮಾಯಕರು ಜೀವ ಕಳೆದುಕೊಂಡಿದ್ದಾರೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲೂ ಮಹಾರಾಜರು, ಬ್ರಿಟಿಷರ ಕಾಲದ ಹಳೆಯ ಪಾರಂಪರಿಕ ಕಟ್ಟಡಗಳಿದ್ದು, ಅವುಗಳ ಸ್ಥಿತಿಗತಿ ಅವಲೋಕಿಸುವುದನ್ನು ಸ್ಥಳೀಯ ಆಡಳಿತ ಗಂಭೀರವಾಗಿ ಪರಿಗಣಿಸಬೇಕು.

ಆ ಮೂಲಕ ಬೆಂಗಳೂರು ಬೌರಿಂಗ್ ಆಸ್ಪತ್ರೆ ದುರಂತ ಮೈಸೂರಲ್ಲಿ ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕಿದೆ. 2012ರಲ್ಲಿ ಲ್ಯಾನ್ಸ್‌ಡೌನ್ ಕಟ್ಟಡದ ಒಂದು ಭಾಗ ಕುಸಿದು ನಾಲ್ವರು ಮೃತಪಟ್ಟಿದ್ದರು. ಅದೇ ರೀತಿ ■ 6ನೇ ಪುಟಕ್ಕೆ

ಎಕ್ಸಿಟ್ ಪೋಲ್ ಸಮೀಕ್ಷಾ ವರದಿ

ಅಸ್ಸಾಂ, ಬಂಗಾಳದಲ್ಲಿ ಬಿಜೆಪಿಗೆ ಭರ್ಜರಿ ಜಯ; ಕೇರಳ, ತಮಿಳುನಾಡಿನಲ್ಲಿ ಕಾಂಗ್ರೆಸ್ ಮೈತ್ರಿಗೆ ಗೆಲುವು



ನವದೆಹಲಿ, ಏ.29– ಈಗಾಗಲೇ ಅಸ್ಸಾಂ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಮತ್ತು ಪುದುಚೇರಿಯಲ್ಲಿ ವಿಧಾನಸಭಾ ಚುನಾವಣೆ ಅಂತ್ಯಗೊಂಡಿದೆ. ಮೇ 4ರಂದು ಮತ ಎಣಿಕೆ ನಡೆಯಲಿದ್ದು, ಅದೇ ದಿನ ಚುನಾವಣಾ ಫಲಿತಾಂಶ ಪ್ರಕಟವಾಗಲಿದೆ. ಇದೀಗ ಎಕ್ಸಿಟ್ ಪೋಲ್ ಫಲಿತಾಂಶ ಪ್ರಕಟವಾಗಿವೆ.

ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಬಿಜೆಪಿ ಗೆಲುವಿನ ನಗೆ ಬೀರಲಿದೆ. ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ಮೈತ್ರಿಕೂಟ ಅಧಿಕಾರಕ್ಕೆ ಬರಲಿದ್ದು, ಕೇರಳದಲ್ಲೂ ಕಾಂಗ್ರೆಸ್ ಬೆಂಬಲಿತ ಯುಡಿಎಫ್ ಬಹುಮತ ಪಡೆಯಲಿದೆ. ಇಲ್ಲಿ ಬಿಜೆಪಿ ಹೀನಾಯ ಸೋಲನ್ನು ಅನುಭವಿಸಲಿದೆ. ಪುದುಚೇರಿಯಲ್ಲಿ ಬಿಜೆಪಿ ಮತ್ತೊಮ್ಮೆ ಸರ್ಕಾರ ರಚಿಸುವ ಸಾಧ್ಯತೆ ಇದೆ ಎಂದು ಸಮೀಕ್ಷಾ ವರದಿಗಳು ತಿಳಿಸಿವೆ.

ಕೇರಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ಏಪ್ರಿಲ್ 9ರಂದು ಮತದಾನ ನಡೆದರೆ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದ ಮೊದಲ ಹಂತದಲ್ಲಿ ಏಪ್ರಿಲ್ 23ರಂದು ಮತದಾನ ನಡೆಯಿತು. ಇಂದು ಪಶ್ಚಿಮ ಬಂಗಾಳದ 2ನೇ ಮತ್ತು ಕೊನೆಯ ಹಂತದ ಮತದಾನ ನಡೆದಿದೆ. ನಿಖರವಾದ ಫಲಿತಾಂಶ ಮೇ 4ರಂದು ಪ್ರಕಟವಾಗಲಿದೆ. ಕೇರಳದಲ್ಲಿ ಬಿಜೆಪಿ 10ರಿಂದ 14 ಸ್ಥಾನಗಳನ್ನು ಗಳಿಸಲಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ 146 ರಿಂದ 161 ಸ್ಥಾನಗಳನ್ನು ಪಡೆಯಲಿದೆ. ತಮಿಳುನಾಡಿನಲ್ಲಿ ■ 6ನೇ ಪುಟಕ್ಕೆ



ಮಮತಾ ಶರ್ಮಾ ಪಿಣರಾಯ್ ರಂಗಸ್ವಾಮಿ ಸ್ಟಾಲಿನ್

ತಮಿಳುನಾಡಲ್ಲಿ ಮತ್ತೆ ಡಿಎಂಕೆ?

ಎಕ್ಸಿಸ್ ಮೈ ಇಂಡಿಯಾ: ಟಿವಿಕೆ : 98–120.. ಡಿಎಂಕೆ: 92–110.. ಎಐಎಡಿಎಂಕೆ: 22–32
ಚಾಣಕ್ಯ ಸ್ಟ್ರಾಟಜಿ: ಡಿಎಂಕೆ 145–160. ಎಐಎಡಿಎಂಕೆ 50–65.. ಇತರೆ 18–26..
ಪಿ–ಮಾರ್ಕ್: ಡಿಎಂಕೆ: 125–145. ಎಐಎಡಿಎಂಕೆ :65–85.. ಟಿವಿಕೆ: 16–26.. ಇತರೆ: 1–6
ಸ್ಮಾರ್ಟ್ ಪೋಲ್: ಡಿಎಂಕೆ :180. ಎಐಎಡಿಎಂಕೆ : 28.. ಟಿವಿಕೆ : 26.. ಇತರೆ : 00
ಟೈಮ್ಸ್ ನೌ: ಡಿಎಂಕೆ 75–95. ಎಐಎಡಿಎಂಕೆ 128 –147.. ಟಿವಿಕೆ 8–15.. ಇತರೆ 00
ಮ್ಯಾಟ್ರಿಜ್: ನಡಿಎಂಕೆ: 122–132. ಎನ್‌ಡಿಎ: 87–100.. ಟಿವಿಕೆ : 10–12..ಇತರೆ: 0–6
ಪೀಪಲ್ಸ್ ಪಲ್ಸ್: ಡಿಎಂಕೆ: 125–145. ಎಐಎಡಿಎಂಕೆ: 65–80.. ಟಿವಿಕೆ 18–24.. ಇತರೆ 02–06
ಪೋಲ್ ಆಫ್ ಪೋಲ್ಸ್: ಡಿಎಂಕೆ: 137. ಎಐಎಡಿಎಂಕೆ: 75. ಟಿವಿಕೆ: 17. ಇತರೆ: 8


ಪಂಚರಾಜ್ಯಗಳ ಫಲಿತಾಂಶ ಬಂದ ತಕ್ಷಣ ಕರ್ನಾಟಕ ಕಾಂಗ್ರೆಸ್ ಗೊಂದಲ ಪರಿಹಾರ

▶ ರಾಜ್ಯ ನಾಯಕರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭರವಸೆ ▶ ಮೇ 1ಕ್ಕೆ ವಿದೇಶಿ ಪ್ರವಾಸದಿಂದ ರಾಹುಲ್ ಗಾಂಧಿ ವಾಪಸ್ ▶ ಡಾ. ಮಹದೇವಪ್ಪ, ಮುನಿಯಪ್ಪ, ಸತೀಶ್ ಜಾರಕಿ ಹೊಳಿಗೆ ಸಂದೇಶ

ಬೆಂಗಳೂರು, ಏ.29(ಕೆಎಂಶಿ)– ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟಗೊಂಡ ಮರುದಿನವೇ ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲ ಪರಿಹಾರವಾಗಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾವಣೆ ಸಾಧ್ಯತೆ ಸುಳಿವು ಹಿನ್ನೆಲೆಯಲ್ಲಿ, ಅವರನ್ನೇ ಮುಂದುವರೆಸುವಂತೆ ಮನವಿ ಮಾಡಲು ದಲಿತ ಸಮುದಾಯದ ಸಚಿವರು ದೆಹಲಿಯಲ್ಲಿ ಖರ್ಗೆ ಭೇಟಿ ಮಾಡಿದ ಸಂದರ್ಭದಲ್ಲಿ ಈ ಸಂದೇಶ ನೀಡಿದ್ದಾರೆ.

ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಪ್ರವಾಸದ ನಂತರ ಶುಕ್ರವಾರ ದೆಹಲಿಗೆ ಹಿಂತಿರುಗಲಿದ್ದು, ಕರ್ನಾಟಕ ಕಾಂಗ್ರೆಸ್ ಬಗ್ಗೆ ಚರ್ಚಿಸುತ್ತೇವೆ.



ಮಲ್ಲಿಕಾರ್ಜುನ ಖರ್ಗೆ

ಮೇ 4ರ ನಂತರ ಹೈಕಮಾಂಡ್ ನಿರ್ಧಾರ ಪ್ರಕಟಿಸುವುದಾಗಿ ಖರ್ಗೆ ತಮ್ಮನ್ನು ಭೇಟಿ ಮಾಡಿದ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಕೆ.ಎಚ್.ಮುನಿಯಪ್ಪ ಅವರಿಗೆ ತಿಳಿಸಿದ್ದಾರೆ.

ನೀವೇ ಜವಾಬ್ದಾರಿ ವಹಿಸಿಕೊಳ್ಳಿ: ಸಿದ್ದರಾಮಯ್ಯ ಬದಲಾವಣೆ ನಿಶ್ಚಿತ ಎಂದಾದರೆ, ನೀವು ರಾಜ್ಯದ ಉಸ್ತುವಾರಿ ವಹಿಸಿಕೊಳ್ಳಿ ಎಂದು ಮತ್ತೆ ಆಹ್ವಾನ ನೀಡಿದ್ದಾರೆ. ದಲಿತರೊಬ್ಬರಿಗೆ ಮುಖ್ಯಮಂತ್ರಿ ಸ್ಥಾನ ದೊರೆತರೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಕಾರಾತ್ಮಕ ಸಂದೇಶ ರವಾನೆ ಆಗುವುದಲ್ಲದೆ, ಕಾಂಗ್ರೆಸ್ ಮತ್ತಷ್ಟು ಬಲಗೊಳ್ಳುತ್ತದೆ. ನಾಯಕತ್ವ ಬದಲಾವಣೆ ಆಗುವುದೇ ಆದರೆ, ನೀವು ಅಥವಾ ಇನ್ನೊಬ್ಬ ದಲಿತ ನಾಯಕರನ್ನೇ ಆರಿಸಿ ಎಂದಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದಲ್ಲಿ, ಸರ್ಕಾರ ಮತ್ತು ಪಕ್ಷದ ಮಟ್ಟದಲ್ಲಿ ■ 6ನೇ ಪುಟಕ್ಕೆ

ಮೈಸೂರಲ್ಲಿ ಕೆಲಕಾಲ ಗುಡುಗು–ಮಿಂಚು ಸಹಿತ ಭಾರಿ ಗಾಳಿ–ಮಳೆ



ಮೈಸೂರು, ಏ.29(ಪಿಎಂ)– ಬುಧವಾರ ರಾತ್ರಿ ಮೈಸೂರು ನಗರದಲ್ಲಿ ಗುಡುಗು–ಮಿಂಚು ಒಳಗೊಂಡಂತೆ ಭಾರೀ ಗಾಳಿಯೊಂದಿಗೆ ಜೋರು ಮಳೆ ಸುರಿದಿದ್ದು, ಕೆಲವೆಡೆ ಮರದ ಕೊಂಬೆಗಳು ಮುರಿದು ಬಿದ್ದವು. ಗಾಳಿಯೊಂದಿಗೆ ರಾತ್ರಿ ಸುಮಾರು 9ರ ವೇಳೆಗೆ ಮಳೆ ಆರಂಭಗೊಂಡಿತು. ಅರ್ಧ ತಾಸಿಗೂ ಹೆಚ್ಚು ಕಾಲ ಜೋರಾಗಿಯೇ ಸುರಿಯಿತು. ಆ ಬಳಿಕವೂ ತುಂತುರು ಹನಿಗಳು ಬೀಳುತ್ತಲೇ ಇದ್ದವು.

ಮೈಸೂರಿನ ಕೆಆರ್ ವೃತ್ತ, ಚಾಮರಾಜ ವೃತ್ತ, ಸಯ್ಯಾಜಿರಾವ್ ರಸ್ತೆ ಸೇರಿದಂತೆ ನಗರದ ಹೃದಯ ಭಾಗದ ರಸ್ತೆಗಳು ಹಾಗೂ ವಿವಿಧ ಬಡಾವಣೆಗಳ ರಸ್ತೆಗಳಲ್ಲಿ ತಗ್ಗು ಪ್ರದೇಶಗಳು ಮಳೆ ನೀರಿನಿಂದ ಜಲಾವೃತಗೊಂಡಿದ್ದವು. ಅಲ್ಲದೆ, ತಗ್ಗು ಪ್ರದೇಶದಲ್ಲಿ ಕೆಲ ಮನೆಗಳ ಆವರಣಕ್ಕೂ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು.

ಗಾಳಿ ಪರಿಣಾಮ ಕೆಲವೆಡೆ ಮರದ ಕೊಂಬೆಗಳು ಮುರಿದು ಬಿದ್ದಿದ್ದವು. ಅಲ್ಲದೆ, ಮೈಸೂರಿನ ರಿಂಗ್ ರಸ್ತೆಯ ನಾರಾಯಣ ಹೃದಯಾಲಯ ಆಸ್ಪತ್ರೆ ಸಮೀಪ ಹಾಗೂ ಕುಂಬಾರಕೊಪ್ಪಲಿನ ಮಹದೇಶ್ವರ ದೇವಾಲಯದ ಸಮೀಪದಲ್ಲಿ ತುಸು ದೊಡ್ಡದಾದ ಮರದ ಕೊಂಬೆಗಳು ನೆಲಕ್ಕುರುಳಿದ್ದವು. ಮೈಸೂರು ಮಹಾನಗರ ಪಾಲಿಕೆ ಅಭಯ ತಂಡ ಕಾರ್ಯಾಚರಣೆ ನಡೆಸಿ, ಅವುಗಳನ್ನು ತೆರವುಗೊಳಿಸಿತು. ಆದರೆ, ಕುಂಬಾರಕೊಪ್ಪಲು ಮಹದೇಶ್ವರ ದೇವಸ್ಥಾನದ ಬಳಿ ಮನೆ ಮೇಲೆ ತೆಂಗಿನಮರ ಬುಡಸಹಿತ ಉರುಳಿಬಿದ್ದಿದ್ದು, ಅದನ್ನು ಕ್ರೇನ್ ಮೂಲಕ ತೆರವುಗೊಳಿಸಬೇಕಾಗಿರುವುದರಿಂದ ಅಭಯ ಪಡೆ ಆ ಕಾರ್ಯಾಚರಣೆಯನ್ನು ನಾಳೆ (ಏ.30)ಗೆ ನಿಗದಿಪಡಿಸಿದೆ. ಈ ಮಧ್ಯೆ ಕೆಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು.

ವಿಶ್ವವಿಖ್ಯಾತ ಮೈಸೂರು ಅರಮನೆಗೆ ನೂತನ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್ ವ್ಯವಸ್ಥೆ

13 ಕೋಟಿಯ ಸಮಗ್ರ ಯೋಜನಾ ವರದಿ ಸಿದ್ಧ; ಲೋಕೋಪಯೋಗಿ ಇಲಾಖೆ ಪರಿಶೀಲನೆಗೆ ಡಿಪಿಆರ್ ರವಾನೆ

- ಈಗಿನ ಸೌಂಡ್ ಅಂಡ್ ಲೈಟ್ ವ್ಯವಸ್ಥೆ 2017ರಲ್ಲಿ ರೂಪಿಸಲಾಗಿತ್ತು
- ಗೋಲ್ಕೊಂಡಾ ಕೋಟೆ ಮಾದರಿ ಧ್ವನಿ ಮತ್ತು ಬೆಳಕು ಅಳವಡಿಕೆಗೆ ನಿರ್ಣಯ
- ಹೊಸ ವಿನ್ಯಾಸ, ವರ್ಣರಂಜಿತ ಬೆಳಕಿನಲ್ಲಿ ಮೈಸೂರಿನ ಇತಿಹಾಸ ಅನಾವರಣ
- ದೇಶ–ವಿದೇಶದ ಮತ್ತಷ್ಟು ಪ್ರವಾಸಿಗರನ್ನು ಆಕರ್ಷಿಸಲು ಹೊಸ ಪ್ರಯೋಗ



ಮೈಸೂರು, ಏ.29(ಬಿಎಲ್‌ಯು)– ಹೈದರಾಬಾದ್‌ನ 16ನೇ ಶತಮಾನದ ಶ್ರೀಮಂತ ಭವ್ಯ ಪರಂಪರೆಯ ಸಂಕೇತವಾದ ಗೋಲ್ಕೊಂಡ ಕೋಟೆಯ ಸೌಂಡ್ ಅಂಡ್ ಲೈಟ್ ಮಾದರಿಯಲ್ಲಿ ವಿಶ್ವವಿಖ್ಯಾತ ಮೈಸೂರು ಅರಮನೆಗೂ ಅತ್ಯಾಧುನಿಕ ತಂತ್ರಜ್ಞಾನದ ಕ್ರಿಯಾತ್ಮಕ 3ಡಿ ಮ್ಯಾಪಿಂಗ್ ಪ್ರೊಜೆಕ್ಷನ್‌ನ ಸೌಂಡ್ ಲೈಟ್ ಅನ್ನು ಅಳವಡಿಸಲು ಮೈಸೂರು ಅರಮನೆ ಮಂಡಳಿ ತೀರ್ಮಾನಿಸಿದೆ. ಈ ಸಂಬಂಧ 13 ಕೋಟಿ ರೂ.ಗಳ ಡಿಪಿಆರ್ (ಸಮಗ್ರ ಯೋಜನಾ ವರದಿ) ಕೂಡ ಸಿದ್ಧಪಡಿಸಲಾಗಿದೆ.

ವಿಶ್ವವಿಖ್ಯಾತ ಮೈಸೂರು ಅರಮನೆ ಶತಮಾನೋತ್ಸವ ಸಂಭ್ರಮ ಕಂಡಿದ್ದು, ಇದಕ್ಕೆ ನೂರು ವರ್ಷದ ಪ್ರಾಯವಾದರೂ ಇಲ್ಲಿ ಆಳ್ವಿಕೆ ನಡೆಸಿದ ಯದುವಂಶಸ್ಥರಿಗೆ 400 ವರ್ಷಕ್ಕೂ ಮೀರಿದ ಇತಿಹಾಸವಿದೆ. ಮೈಸೂರು ಮಹಾರಾಜರ ಗತಕಾಲದ ವೈಭವ, ಭವ್ಯ ಪರಂಪರೆಯ ಇತಿಹಾಸ, ವಿಶ್ವವೇ ಮೆಚ್ಚುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರವಾಸಿಗರಿಗೆ ತಿಳಿಸಲು ಮೈಸೂರು ಅರಮನೆಯಲ್ಲಿ 2017 ರಲ್ಲಿ ಸೌಂಡ್ ಅಂಡ್ ಲೈಟ್ ಪರಿಚಯಿಸಲಾಯಿತು.

ಸೂರ್ಯಾಸ್ತಮಾನವಾಗಿ ಕತ್ತಲೆ ಆವರಿಸುತ್ತಿದ್ದಂತೆ ಬಣ್ಣ ಬಣ್ಣದ ಬೆಳಕಿನಲ್ಲಿ ಧ್ವನಿ ಮತ್ತು ಬೆಳಕಿನ ಮೂಲಕ ಮೈಸೂರು ಅರಮನೆಯಲ್ಲಿ ವರ್ಣರಂಜಿತ ಇತಿಹಾಸದ ಪುಟ ತೆರೆದುಕೊಳ್ಳುತ್ತದೆ. ಯದುವಂಶಸ್ಥರ ಆಳ್ವಿಕೆಯ ಆರಂಭ, ಆಕಸ್ಮಿಕ ಬೆಂಕಿಯಲ್ಲಿ ಅಗ್ನಿಗಾಹುತಿಯಾದ ಮರದ ಅರಮನೆಯಿಂದ ಈಗ ನಿರ್ಮಾಣವಾದ ಅಂಬಾವಿಲಾಸ ಅರಮನೆವರೆಗೆ ನೀಡುವ ವಿವರಣೆ ಪ್ರವಾಸಿಗರನ್ನು ಇತಿಹಾಸದೆಡೆಗೆ ಕರೆದೊಯ್ಯುತ್ತದೆ. ಮೈಸೂರು ಸಾಮ್ರಾಜ್ಯದ ಭವ್ಯ ಪರಂಪರೆಯ ಅನಾವರಣ ಗತಕಾಲಕ್ಕೆ ಒಂದು ದ್ವಾರದ ಮೂಲಕ ಹಾದು ಹೋಗುವಂತೆ ಭಾಸವಾಗುತ್ತದೆ. ಇಂತಹ ವರ್ಣರಂಜಿತ ಇತಿಹಾಸ ಬಿಂಬಿಸುವ ಸೌಂಡ್ ಅಂಡ್ ಲೈಟ್ 2017ರಿಂದ ಪ್ರವಾಸಿಗರನ್ನು ಅತ್ಯಾಕರ್ಷಿಸುತ್ತಿದೆ. ಆದರೆ ಈಗಿನ ಸೌಂಡ್ ಲೈಟ್ ■ 6ನೇ ಪುಟಕ್ಕೆ

ಹೊಸ ಆವೃತ್ತಿಯ ಸೌಂಡ್ ಅಂಡ್ ಲೈಟ್ ಒಮ್ಮೆಗೆ ಎರಡು ಸಾವಿರ ಜನರ ರಂಜಿಸಲಿದೆ

ಮೈಸೂರು: ವಿಶ್ವವಿಖ್ಯಾತ ಮೈಸೂರು ಅರಮನೆಗೆ ನೂತನವಾಗಿ ಅಳವಡಿಸುತ್ತಿರುವ ಅತ್ಯಾಧುನಿಕ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್ ಎರಡು ಸಾವಿರಕ್ಕೂ ಹೆಚ್ಚು ಜನರನ್ನು ಅತ್ಯಾಕರ್ಷಿಸಲಿದೆ ಎಂದು ಅರಮನೆ ಮಂಡಳಿ ಉಪ ನಿರ್ದೇಶಕರಾದ ಟಿ.ಎಸ್.ಸುಬ್ರಹ್ಮಣ್ಯ ತಿಳಿಸಿದರು.

ಮೈಸೂರು ಅರಮನೆಗೆ 2017 ರಲ್ಲಿ ಸೌಂಡ್ ಅಂಡ್ ಲೈಟ್ ಅಳವಡಿಸಲಾಯಿತು. ಆದರೆ, ಇದು ಹಳೆಯ ಆವೃತ್ತಿಯಾಗಿರುವ ಹಿನ್ನೆಲೆಯಲ್ಲಿ ನೂತನ ತಂತ್ರಜ್ಞಾನದ ಲೇಟೆಸ್ಟ್ ವರ್ಷನ್ (ಇತ್ತೀಚಿನ ಆವೃತ್ತಿ) ಧ್ವನಿ ಮತ್ತು ಬೆಳಕು ಅಳವಡಿಸಲು ಅರಮನೆ ಮಂಡಳಿಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಈ ಸಂಬಂಧ ಸಲ್ಲಿಸಿರುವ ಡಿಪಿಆರ್ ಪರಿಶೀಲನೆಗೆ ಲೋಕೋಪಯೋಗಿ ಇಲಾಖೆಗೆ ರವಾನೆ ಮಾಡಲಾಗಿದೆ. ಅವರು ನೀಡುವ ವರದಿ ಆಧರಿಸಿ ಮಂಡಳಿಯಲ್ಲಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು.



ನೂತನ ತಂತ್ರಜ್ಞಾನದ ಧ್ವನಿ ಮತ್ತು ಬೆಳಕು ಅಳವಡಿಸುವ ಸಂಬಂಧ ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಅವರೊಡನೆ ಕೂಡ ಸಮಾಲೋಚನೆ ಮಾಡಲಾಗುವುದು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅನುಷ್ಠಾನ ಮಾಡಲಾಗುವುದು. ನೂತನ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್‌ನಲ್ಲಿ ನಾಲ್ಕು ಪ್ರೊಜೆಕ್ಟರ್‌ಗಳು ಸಾಕೆ ಅಥವಾ ಮೂರು ಪ್ರೊಜೆಕ್ಟರ್‌ಗಳು ಬೇಕೋ ಎಂಬ ಬಗ್ಗೆ ನಿರ್ಧಾರ ಮಾಡಲಾಗುವುದು. ಈ ಬಗ್ಗೆ ಅಂತಿನ ತೀರ್ಮಾನವಾದರೆ ಧ್ವನಿ ಮತ್ತು ಬೆಳಕು ಅಳವಡಿಸಲು ಟೆಂಡರ್ ಕರೆಯಲಾಗುವುದು.

ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಗುತ್ತಿಗೆ ಪಡೆಯುವ ಕಂಪನಿ ಮೂರು ತಿಂಗಳಲ್ಲಿ ನೂತನ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್ ಅಳವಡಿಸಲಿದೆ. ಪ್ರಾಯಶಃ ಈ ಬಾರಿಯ ದಸರಾ ವೇಳೆಗೆ ಹೊಸ ತಂತ್ರ ಜ್ಞಾನದ ಧ್ವನಿ ಮತ್ತು ಬೆಳಕು ಮೈಸೂರು ಅರಮನೆಯಲ್ಲಿ ಅನಾವರಣಗೊಳ್ಳಲಿದೆ ಎಂದು ಸುಬ್ರಹ್ಮಣ್ಯ ಅವರು ತಿಳಿಸಿದರು.

ಈ ಬಾರಿಯ ಮೈಸೂರು ದಸರಾ ವೇಳೆಗೆ ಹೊಸ ಮಾದರಿಯ ಧ್ವನಿ–ಬೆಳಕು

ನೂತನ ತಂತ್ರಜ್ಞಾನವುಳ್ಳ ಸೌಂಡ್ ಅಂಡ್ ಲೈಟ್ ಈ ಬಾರಿಯ ದಸರಾ ಮಹೋತ್ಸವದ ವೇಳೆಗೆ ವಿಶ್ವವಿಖ್ಯಾತ ಮೈಸೂರು ಅರಮನೆಯಲ್ಲಿ ಅನಾವರಣಗೊಳ್ಳುವ ಸಾಧ್ಯತೆ ಇದೆ. ಈಗಿನ ಸೌಂಡ್ ಅಂಡ್ ಲೈಟ್‌ಗಿಂತಲೂ ವಿಭಿನ್ನವಾಗಿರುವ ನೂತನ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್ 400 ವರ್ಷಗಳ ಮೈಸೂರು ಸಾಮ್ರಾಜ್ಯದ ಗತವೈಭವ ಹಾಗೂ ಇತಿಹಾಸವನ್ನು ನೈಜ್ಯವಾಗಿ ಪರಿಚಯಿಸಲಿದೆ.

ಗೋಲ್ಕೊಂಡಾ ಕೋಟೆ, ಆಗ್ರಾ ಕೋಟೆ, ಗುಜರಾತ್‌ನ ವಡ್ನಗರದ ಹಟಕೇಶ್ವರ ಮಹಾದೇವ ದೇವಸ್ಥಾನ, ಭಾರತದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ನೆನಪಿಸುವ ಸೆಲ್ಯುಲಾರ್ ಜೈಲಿ (ಅಂಡಮಾನ್) ನಲ್ಲಿರುವ ಅತ್ಯಾಧುನಿಕ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್ ಮೈಸೂರು ಅರಮನೆಯಲ್ಲೂ ಅನಾವರಣಗೊಳ್ಳಲಿದೆ. ಮೈಸೂರಿಗೆ ಪ್ರತಿದಿನ ದೇಶ–ವಿದೇಶದ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಮೈಸೂರು ಅರಮನೆ, ಜಗನ್ಮೋಹನ ಅರಮನೆ, ಚಾಮುಂಡಿಬೆಟ್ಟ, ಚಾಮರಾಜೇಂದ್ರ ಮೃಗಾಲಯ ನೋಡಿ ರಾತ್ರಿ ಕೆಆರ್‌ಎಸ್‌ಗೆ ಹೋಗುತ್ತಿದ್ದರು. ಆದರೆ ಈಗ ನೂತನ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್ ಮೂಲಕ ರಾತ್ರಿ ಕೂಡ ಪ್ರವಾಸಿಗರನ್ನೆ ಮೈಸೂರಿನಲ್ಲೇ ಹಿಡಿದಿಡುವ ಪ್ರಯತ್ನವೂ ಈ ಯೋಜನೆಯಲ್ಲಿ ಅಡಗಿದೆ.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನಿಮ್ಮ ಗಾಯಕ್ಕೆ 10 ಹೊಲಿಗೆಯನ್ನಾದರೂ ಹಾಕಬೇಕಾಗುತ್ತದೆ.

ರೋಗಿ : ಆದರೆ ಹೊಲಿಗೆಯ ವಿನ್ಯಾಸ ಚೆನ್ನಾಗಿರಬೇಕು.

ಮೈಸೂರು ಮಿತ್ರ

ಗುರುವಾರ, ಏಪ್ರಿಲ್ 30, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕಡೆಗಣಿಸುವವರ ಎದುರು ವಾದ ಮಾಡುವುದೇ ಬೇಡ. ಮೌನ ವಹಿಸು. ಸಾಧಿಸುವುದು ಬಹಳಷ್ಟಿದೆ. ನಿನ್ನ ಗಮನ ಆ ದಿಕ್ಕಿನಲ್ಲಿ ಹರಿಸು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಾಲಿಗೆ ಹುಳಿ ಹಿಂಡಿದರೆ ಮೊಸರು, ಮಣ್ಣಿಗೆ ನೀರು ಹಾಕಿದರೆ ಕೆಸರು.

ನಿಮ್ಮ ಪತ್ರಗಳು

ಶಿಶು ಮರಣ: ಜಿಲ್ಲಾ, ತಾಲೂಕು ಆಸ್ಪತ್ರೆಗಳ ಸೌಲಭ್ಯ ಹೆಚ್ಚಲಿ

ಮಾನ್ಯರೆ,

ರಾಜ್ಯದ ಖ್ಯಾತ ಚೆಲುವಾಂಬ ಆಸ್ಪತ್ರೆಯಲ್ಲಿ ಎನ್‌ಐಸಿಯು ಮತ್ತು ಎಸ್‌ಎನ್‌ಸಿಯುಗಳಲ್ಲಿ 8.3 ವರ್ಷಗಳಲ್ಲಿ ಒಟ್ಟು 4566 ಮಕ್ಕಳು ಸಾವನ್ನಪ್ಪಿರುವುದು ವಿಷಾದನೀಯ. ಆಸ್ಪತ್ರೆ ಅಧಿಕಾರಿಗಳು ಹೇಳುವಂತೆ ಚೆಲುವಾಂಬ ಆಸ್ಪತ್ರೆಗೆ ಕ್ರಿಟಿಕಲ್ ಆಗಿರುವ ಮಕ್ಕಳು, ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಿಂದ ರೆಫರ್ ಆಗಿ ಬರುತ್ತವೆ. ಮೊದಲೇ ತೀವ್ರ ಅಸ್ವಸ್ಥ ಸ್ಥಿತಿಯಲ್ಲಿ ಇರುವುದರಿಂದ ಅವುಗಳನ್ನು ಉಳಿಸಿಕೊಳ್ಳುವುದು ಕಷ್ಟವೇ ಸರಿ ಎನ್ನುವುದನ್ನು ಒಪ್ಪಬಹುದು. ಆದರೆ ಸಿಬ್ಬಂದಿಗಳು ಇದನ್ನೇ ನೆಪವಾಗಿ ಮಾಡಿಕೊಳ್ಳಬಾರದು.

ಸರ್ಕಾರ ಜಿಲ್ಲಾ, ತಾಲೂಕು ಮಟ್ಟದ ಹೆರಿಗೆ ಆಸ್ಪತ್ರೆ ಹಾಗೂ ಸಮುದಾಯ ಅರೋಗ್ಯ ಕೇಂದ್ರಗಳನ್ನು ಬಲಪಡಿಸಬೇಕು. ಚೆಲುವಾಂಬ ಆಸ್ಪತ್ರೆಯ ಎನ್‌ಐಸಿಯುನಲ್ಲಿ ಮಗು ಇರುವೆ ಕಚ್ಚಿ ಸಾವಿಗೀಡಾದ ಪ್ರಕರಣಕ್ಕೆ ಡೀನ್ ಡಾ.ದಾಕ್ಷಾಯಿಣಿಯವರು ವಿಷಾದ ವ್ಯಕ್ತಪಡಿಸಿದ್ದಾರೆ. ಆದರೆ ಈ ಹಿಂದೆ ಕೂಡ ಇಂತಹ ಪ್ರಕರಣ ವರದಿಯಾಗಿತ್ತು. ಆದರೂ ಆಸ್ಪತ್ರೆ ಅಧಿಕಾರಿ, ಸಿಬ್ಬಂದಿಗಳು ಎಚ್ಚೆತ್ತುಕೊಂಡಿಲ್ಲದಿರುವುದು ವಿಷಾದನೀಯ.

1924ರಲ್ಲಿ ಮಹಾರಾಜ ನಾಲ್ಕನೇ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪನೆಯಾದ ಕರ್ನಾಟಕದ ಮೊದಲ ವೈದ್ಯಕೀಯ ಕಾಲೇಜಿನ ಶತಮಾನೋತ್ಸವ ಸಂಬಂಧ ಇಡೀ ಎಂಎಂಸಿಅರ್‌ಐನ ನವೀಕರಣಕ್ಕಾಗಿ ಕಳೆದ ಬಿಜೆಪಿ ಸರ್ಕಾರ ಬಜೆಟ್‌ನಲ್ಲಿ (ಎಂಎಂಸಿಆರ್‌ಐ, ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ಪಿಕೆಟಿಬಿ ಆಸ್ಪತ್ರೆಗಳ ನವೀಕರಣಕ್ಕಾಗಿ) 89 ಕೋಟಿಗಳನ್ನು ನೀಡಿದ್ದರು. ಆದರೆ ಅದನ್ನು ಬಳಸಿದ್ದು ಈಗಿನ ಸರ್ಕಾರ. ಆದರೆ ಅಲ್ಪ ಸ್ವಲ್ಪ ಕೆರೆದು ತೇಪೆ ಹಾಕಿ ಬಣ್ಣ ಬಳಿದುದ್ದು ಬಿಟ್ಟರೆ ಆಸ್ಪತ್ರೆಗಳು, ಕಟ್ಟಡಗಳ ನಿಜವಾದ ನವೀಕರಣವಾಗಲೇ ಇಲ್ಲ! ಏಕೆಂದರೆ ಇದು ಸರ್ಕಾರಿ ಟೆಂಡರ್, ಕಾಮಗಾರಿ ಎನ್ನುವುದೇ ಎಲ್ಲವನ್ನೂ ಹೇಳುತ್ತವೆ. ನವೀಕರಣವಾಗಿದ್ದರೆ ಸುಸಜ್ಜಿತವಾದ ಎನ್‌ಐಸಿಯು ಇರುವೆಗಳ ವಾಸಸ್ಥಾನವಾಗಲು ಸಾಧ್ಯವಾಗುತ್ತಿರಲಿಲ್ಲ ಅಲ್ಲವೆ? ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ವೈದ್ಯಕೀಯ ಕಾಲೇಜು ಕಟ್ಟಡಗಳನ್ನು ಯಾರಾದರೂ ಪರಿಶೀಲಿಸಿದರೆ ಇಷ್ಟೊಂದು ಹಣ ಹೇಗೆ ಬಳಕೆಯಾಗಿದೆ ಎನ್ನುವುದು ಯಾರಿಗಾದರೂ ತಿಳಿಯುತ್ತದೆ.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

ರಾಮಕೃಷ್ಣನಗರ ಇ ಮತ್ತು ಎಫ್ ಬ್ಲಾಕ್‌ನಲ್ಲಿ ಒಳಚರಂಡಿ ದುರಸ್ತಿಗೊಳಿಸಿ

ಮಾನ್ಯರೆ,



ರಾಮಕೃಷ್ಣನಗರ ಇ ಮತ್ತು ಎಫ್ ಬ್ಲಾಕ್‌ನಲ್ಲಿ ಬಹಳ ದಿನಗಳಿಂದ ಒಳ ಚರಂಡಿ ಸಮಸ್ಯೆಯಾಗಿದ್ದು, ಸಾಕಷ್ಟು ಬಾರಿ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಮೈಸೂರು ಸಿಟಿ ಕಾರ್ಪೊರೇಶನ್ ಕಿವುಡಾಗಿದ್ದು ಯಾವುದೇ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ನಿವಾಸಿಗಳು ಮೂಗು, ಬಾಯಿ ಮುಚ್ಚಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಯಾವುದೇ ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ವ್ಯವಸ್ಥಿತ ಒಳಚರಂಡಿ, ರಸ್ತೆ, ಉದ್ಯಾನವನಗಳ ನಿರ್ವಹಣೆಗೆ ದುಡ್ಡುಕೊಟ್ಟು ಕೆಲಸ ಮಾಡಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಯೋಗ ಪಾರ್ಕ್‌ನಿಂದ ವಾಸು ಲೇಔಟ್ ಕಡೆಗೆ ಹೋಗುವ ರಸ್ತೆಯಲ್ಲಿ ಯಾವಾಗಲೂ ಒಳಚರಂಡಿ ನೀರು ರಸ್ತೆಯಲ್ಲಿ ಹರಿಯುತ್ತಿರುತ್ತದೆ. ರಾಮಕೃಷ್ಣ ಶಾಲಾ ಪಕ್ಕದಲ್ಲೇ ದೊಡ್ಡ ರಾಜಕಾಲುವೆ ಇದ್ದು ಇದನ್ನು ಶುದ್ಧೀಕರಣ ಮಾಡುವ ಕೆಲಸ ಆಗುತ್ತಿಲ್ಲ. ಮುಖ್ಯ ರಸ್ತೆ ದುರಸ್ತಿ ಆರಂಭಿಸಿ ವರುಷವಾಗುತ್ತಿದ್ದರೂ ರಸ್ತೆ ರಿಪೇರಿ ಕೆಲಸ ಮುಗಿದಿಲ್ಲ. ಯೋಗ ಪಾರ್ಕ್ ಸಂಪೂರ್ಣ ಹಾಳಾಗಿದೆ. ಮನೆಗಳಿಗೆ ಒಳಚರಂಡಿ ನೀರು ನುಗ್ಗುತ್ತಿದೆ. ಅಧಿಕಾರಿಗಳ ನಿರ್ಲಕ್ಷ್ಯದ ಮನೋಭಾವದಿಂದ ಸಾರ್ವಜನಿಕರು ಬೇಸತ್ತು ಹೋಗಿದ್ದಾರೆ. ಸಂಬಂಧಪಟ್ಟವರು ಈ ಸಮಸ್ಯೆಯನ್ನು ಈಗಲಾದರೂ ಸರಿಪಡಿಸಿದರೆ ತುಂಬಾ ಅನುಕೂಲವಾಗುತ್ತದೆ.

–ಜಿ.ಪ್ರಸನ್ನಮೂರ್ತಿ, ರಾಮಕೃಷ್ಣನಗರ ಇ ಮತ್ತು ಎಫ್ ಬ್ಲಾಕ್, ಮೈಸೂರು

ಚೇತನ್ ಅಹಿಂಸಾ ಹೇಳಿಕೆ ಖಂಡನೀಯ

ಮಾನ್ಯರೆ,

ಆರು ಕೋಟಿ ಕನ್ನಡಿಗರ ಆರಾಧ್ಯ ದೈವ ಪದ್ಮಭೂಷಣ ಡಾ.ರಾಜ್‌ಕುಮಾರ್ ಅವರ ಸ್ಮಾರಕದ ವಿಚಾರವಾಗಿ ಚೇತನ್ ಅಹಿಂಸಾ ನೀಡಿರುವ ಹೇಳಿಕೆ ಅತ್ಯಂತ ಖಂಡನೀಯವಾಗಿದೆ. ಕನ್ನಡಿಗರ ಆಸ್ತಿಯಾಗಿದ್ದ ಡಾ.ರಾಜ್ ಕುಮಾರ್ ಓರ್ವ ವ್ಯಕ್ತಿಯಾಗಿರದೆ ಸಮಸ್ತ ಕನ್ನಡಿಗರ ಅಖಂಡ ಶಕ್ತಿಯಾಗಿದ್ದರು. ನಾಡು, ನುಡಿಗಾಗಿ ಅವರು ಸಲ್ಲಿಸಿರುವ ದೀರ್ಘಕಾಲಿಕ ಸೇವೆ ಅನುಪಮ ಮತ್ತು ಅನುಕರಣೀಯವಾಗಿದೆ. ಇಂತಹ ನಟ ಶ್ರೇಷ್ಠರಿಗೆ ರಾಜ್ಯ ಸರ್ಕಾರ ನಿರ್ಮಿಸಿದ್ದ ಸ್ಮಾರಕದ ಜಾಗವನ್ನು ವಿವಾದಕ್ಕೀಡು ಮಾಡಿರುವ ಅಹಿಂಸಾ ಚೇತನ್ ವಿನಾಕಾರಣ ತಾವಾಗಿಯೇ ವಿವಾದವನ್ನು ತಮ್ಮ ಮೈಮೇಲೆ ಎಳೆದುಕೊಂಡು ಜನರ ಆಕ್ರೋಶಕ್ಕೆ ತುತ್ತಾಗಿದ್ದಾರೆ. ಇನ್ನು ಮುಂದಾದರೂ ಇಂತಹ ಅವಿವೇಕತನದ ಹೇಳಿಕೆಯನ್ನು ನೀಡದಿರಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಪುಂಡರು, ಪುಡಿ ರೌಡಿಗಳ ಹತ್ತಿಕ್ಕಲಾಗದೆ?

ಮಾನ್ಯರೆ,

ಬುಧವಾರ (ಏ. 29) ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಕಾಳಿದಾಸ ರಸ್ತೆಯಲ್ಲಿ ನನ್ನ ಕಾರಲ್ಲಿ ವಿಜಯನಗರ ಕಡೆಯಿಂದ ಕುಟುಂಬದೊಂದಿಗೆ ಬರುವಾಗ ರಾಘವೇಂದ್ರ ಮಠದತ್ತ ತಿರುವು ಪಡೆಯಬೇಕಾಗಿ ಬಂತು. ಈ ವೇಳೆ ಪಂಚವಟಿ ಕಡೆಯಿಂದ ಬರುತ್ತಿದ್ದ ಸ್ವಿಫ್ಟ್ ಕಾರು ಇನ್ನು ಅನತಿ ದೂರದಲ್ಲಿತ್ತು. ಆದರೂ ನಾನು ನನ್ನ ಕಾರನ್ನು ತಿರುವು ಪಡೆಯುವ ನಿಟ್ಟಿನಲ್ಲಿ ರಸ್ತೆ ಮಧ್ಯದಲ್ಲೇ ಇಂಡಿಕೇಟರ್ ಹಾಕಿ ನಿಲ್ಲಿಸಿದೆ. ಈ ವೇಳೆ ಸ್ವಿಫ್ಟ್ ಕಾರಿನಲ್ಲಿದ್ದ ವ್ಯಕ್ತಿ ಅನಾಗರಿಕ, ಅಯೋಗ್ಯನ ರೀತಿ ಅರಚುತ್ತಾ ಹೊರಟು ಹೋದ. ಆತನ ಕಾರಿನ ನಂಬರ್ ನೋಡಲಾಗಲಿಲ್ಲ. ಇಂತಹ ಪುಂಡ–ಪೋಕರಿಗಳಿಗೆ ತಕ್ಕಶಾಸ್ತಿ ಆಗದೇ ಇದ್ದರೆ ಅಮಾಯಕರು ನಿಂದನೆ, ಮಾನಸಿಕ ಆಘಾತಕ್ಕೊಳಗಾಗಬೇಕಾಗುತ್ತದೆ. ಇಂತಹ ಪ್ರಕರಣಗಳ ಬಗ್ಗೆ ಪೊಲೀಸರು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳದೇ ಇದ್ದರೆ ಪುಂಡ–ಪೋಕರಿಗಳ ಹಾವಳಿ ಮೈಸೂರಲ್ಲಿ ವ್ಯಾಪಕವಾಗಲಿದೆ.

– ನೊಂದ ನಾಗರಿಕ, ವಿಜಯನಗರ, ಮೈಸೂರು.

ಈ ಜೀವನ



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ತಾಳಿದವನು ಬಾಳಿಯಾನು....

ಮಾನವನ ಜೀವನವು ಸವಾಲುಗಳು, ಸಂಕಷ್ಟಗಳು ಮತ್ತು ಪರೀಕ್ಷೆಗಳ ಸಂಕಲನವಾಗಿದೆ. ಈ ಲೋಕದಲ್ಲಿ ಯಾರು ಕೂಡ ಸಮಸ್ಯೆಗಳಿಲ್ಲದೆ ಬದುಕುವುದಿಲ್ಲ. ಆದರೆ, ಜೀವನದ ಈ ಕಠಿಣ ಸಂದರ್ಭಗಳಲ್ಲಿ ತಾಳ್ಮೆಯನ್ನು ಕಾಪಾಡಿಕೊಳ್ಳುವವನೇ ನಿಜವಾದ ಯಶಸ್ಸನ್ನು ಸಾಧಿಸುತ್ತಾನೆ. ತಾಳಿದವನು ಬಾಳಿಯಾನು ಎಂಬ ನುಡಿ ನಮ್ಮ ಪೂರ್ವಜರ ಅನುಭವದ ಸಾರವಾಗಿದ್ದು, ತಾಳ್ಮೆಯ ಮಹತ್ವವನ್ನು ಮನದಟ್ಟಾಗಿಸುತ್ತದೆ.

ತಾಳ್ಮೆ ಎನ್ನುವುದು ಮಾನವನ ಮಹತ್ವದ ಗುಣಗಳಲ್ಲಿ ಒಂದಾಗಿದೆ. ಅದು ಕೇವಲ ಕಷ್ಟವನ್ನು ಸಹಿಸುವ ಶಕ್ತಿಯಲ್ಲ, ಬದಲಾಗಿ ಸಂಕಷ್ಟದ ಸಂದರ್ಭಗಳಲ್ಲಿ ಮನಸ್ಸನ್ನು ಸ್ಥಿರವಾಗಿರಿಸಿ, ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವಾಗಿದೆ. ಇಂದಿನ ವೇಗದ ಜೀವನದಲ್ಲಿ ಜನರು ತಕ್ಷಣದ ಫಲಿತಾಂಶವನ್ನು ನಿರೀಕ್ಷಿಸುತ್ತಾರೆ. ಆದರೆ ಜೀವನದಲ್ಲಿ ಶಾಶ್ವತವಾದ ಯಶಸ್ಸು ತಾಳ್ಮೆ ಮತ್ತು ಧೈರ್ಯದಿಂದ ಮಾತ್ರ ಸಾಧ್ಯ. ಸಹನೆ, ತಾಳ್ಮೆ ಬೇರೆಯವರಿಗೆ ಹೇಗೆ ಗೋಚರವಾದರೂ ಕೂಡ ಅವು ಅಗಾಧವಾದ ಪರಿಣಾಮವನ್ನುಂಟು ಮಾಡಬಲ್ಲ ಸಾಧನಗಳು.ಇದನ್ನು ಅರಿತುಕೊಂಡೆ ನಮ್ಮ ಹಿರಿಯರು ತಾಳಿದವನು ಬಾಳಿಯಾನು ಎಂಬ ಗಾದೆ ಮಾತನ್ನು ನಮಗೆ ಬಳುವಳಿಯಾಗಿ ಕೊಟ್ಟಿದ್ದಾರೆ.

ಗಾದೆಗಳು ನಮ್ಮ ಪೂರ್ವಿಕರ ಅನುಭವದ ಮಾತುಗಳು. ಒಂದು ವೇಳೆ ವೇದಗಳು ಸುಳ್ಳಾದರೂ ಗಾದೆಗಳು ಸುಳ್ಳಾಗುವುದಿಲ್ಲವೆಂಬ ಮಾತು ಗಾದೆಗಳಿಗಿರುವ ಮಹತ್ವವನ್ನು ತಿಳಿಸುತ್ತದೆ. ಪ್ರಸ್ತುತ ದಿನಗಳಲ್ಲಿ ತಾಳ್ಮೆ ಕಳೆದುಕೊಂಡಿರುವ ಮನಸ್ಸುಗಳಿಗೆ, ಎಲ್ಲವೂ ಕ್ಷಣಮಾತ್ರದಲ್ಲಿಯೇ ದೊರಕಬೇಕೆಂಬ ಮನೋಭಾವ ಉಳ್ಳವರಿಗೆ, ಹೇಗಾದರೂ ಸರಿ ಹಣ ಮಾಡಬೇಕೆಂದು ಅಡ್ಡದಾರಿ ಹಿಡಿಯ ಹೊರಟವರಿಗೆ ತಾಳ್ಮೆಯ ಮಹತ್ವದ ಅರಿವಾಗಬೇಕಿದೆ.

ಆಕರ್ಷಣೆಗಳೇ ಬದುಕಲ್ಲ

ಕಾಲ ಬದಲಾದಂತೆ ನಾವು ಬದಲಾಗುವುದು ಸಹಜವಾದ ಪ್ರಕ್ರಿಯೆ. ಬದಲಾದ ಕಾಲಕ್ಕೆ ತಕ್ಕಂತೆ ನಡೆಯದೆ ನಿಂತುಕೊಂಡರೆ ಕೂಪಮಂಡೂಕಗಳಾಗಿ,ದ್ವೀಪಜೀವಿಗಳಾಗಿ ಜೀವಿಸಬೇಕಾಗುತ್ತದೆ. ಪ್ರಸ್ತುತ ದಿನಗಳಲ್ಲಿ ಅಲ್ಪ ಕಾಲದಲ್ಲಿ ಯಶಸ್ಸನ್ನು ಪಡೆಯಬೇಕು, ಎಲ್ಲರೂ ನಮ್ಮನ್ನು ಗುರುತಿಸಬೇಕು, ಅದಕ್ಕಾಗಿ ಹೇಗಾದರೂ ಸರಿ ಏನಾದರೂ ಮಾಡಿ ಸುದ್ದಿಯಲ್ಲಿರಬೇಕೆಂಬ ಹುಚ್ಚು ಮನೋಭಾವ ಬಹುತೇಕರಲ್ಲಿ ಮನೆ ಮಾಡಿದೆ. ಆಕರ್ಷಣೆಯನ್ನು ಉಂಟುಮಾಡಬಲ್ಲ ವಿಷಯಗಳು ಕೇವಲ ಆಕರ್ಷಕವಾಗಿಯೇ ಇರುತ್ತವೆ ವಿನಃ ಅವು ಬದುಕಾಗಿರುವುದಿಲ್ಲ. ಈ ಸತ್ಯವನ್ನು ಅರಿತುಕೊಳ್ಳದೆ ಮತ್ತೊಬ್ಬರಂತೆ ನಾವಾಗಬೇಕು, ಎಲ್ಲರೂ ನಮ್ಮನ್ನು ಗುರುತಿಸಬೇಕು ಎಂಬ ಅತಿರೇಕದಿಂದ ಆಕರ್ಷಣೆಗೆ ಮರುಳಾಗಿ ಜೀವಿಸುವುದನ್ನು ಕಲಿತರೆ ಬದುಕು ದುಸ್ತರವಾಗುತ್ತದೆ. ಹದಿಹರೆಯದವರಲ್ಲಿ ಆಕರ್ಷಣೆಗಳು ತುಸು ಹೆಚ್ಚಾಗಿಯೇ ಕಂಡುಬರುತ್ತಿದೆ. ನಾಲ್ಕು ಜನ ನಮ್ಮನ್ನು ಗುರುತಿಸಬೇಕೆಂಬ ಆಸೆಯಿಂದ ಯಾವುದು ಸರಿ–ತಪ್ಪುಗಳೆಂಬ ವಿವೇಚನೆ ಇಲ್ಲದೆ ವರ್ತಿಸಿ, ಈ ವರ್ತನೆಗೆ ಯಾರಾದರೂ ಕೊಂಕನ್ನಾಡಿದರೆ ತಕ್ಷಣವೇ ಅವರನ್ನು ನಿಂದಿಸುವ,ಕೋಪಗೊಳ್ಳುವ ಮೂಲಕ ತಾಳ್ಮೆ ಎಂಬ ಆಯುಧವನ್ನು ಕೆಳಗಿಟ್ಟು ಯಾರ ಮಾತನ್ನು ಕೇಳಿಸಿಕೊಳ್ಳದ ವ್ಯಕ್ತಿತ್ವಯುಳ್ಳವರಾಗಿ ವರ್ತಿಸುತ್ತಾರೆ. ಆಕರ್ಷಣೆಗಳು ಕ್ಷಣಿಕವಾದವು, ಬದುಕು ವಿಸ್ತಾರವಾದುದು ಈ ಸತ್ಯ ಪರಿಚಯವಾದ ದಿನ ತಾಳ್ಮೆಯ ಮಹತ್ವದ ಅರಿವಾಗುತ್ತದೆ.

ಅಡ್ಡದಾರಿಗಳು ಎಂದಿಗೂ ಫಲ ನೀಡುವುದಿಲ್ಲ

ಬೀಜ ಬಿತ್ತಿ ಅದು ಚಿಗುರೊಡೆದು ಸಸಿಯಾಗಿ, ಮರವಾಗಿ, ಹೆಮ್ಮರವಾಗಿ ಬೆಳೆಯಲು ವರ್ಷಗಳೇ ಬೇಕು. ವ್ಯವಸಾಯವನ್ನು ಮಾಡಿ ಅದರ ಫಲವನ್ನು ಅನುಭವಿಸಲು ಕೂಡ ವರ್ಷಗಳೇ ಬೇಕು. ಆದರೆ ನಮ್ಮಲ್ಲಿ ಯಾವುದಕ್ಕೂ ಕಾಯುವ ತಾಳ್ಮೆ ಇಲ್ಲವೇ ಇಲ್ಲ. ಹೇಗಾದರೂ ಸರಿ ಹಣ ಮಾಡಬೇಕು, ಆಸ್ತಿ ಮಾಡಬೇಕು, ಸಮಾಜದಲ್ಲೊಂದು ಗೌರವ ಪಡೆಯಬೇಕೆಂಬ ಉನ್ಮತ್ತಕ್ಕಿಳಿದು ಅದನ್ನು ಅಡ್ಡದಾರಿಯಲ್ಲಿಯೇ ಪಡೆಯಲು ಯತ್ನಿಸುವವರು ಕಂಡುಬರುತ್ತಿದ್ದಾರೆ.

ಎಲ್ಲದಕ್ಕೂ ಸಮಯ ಬರಬೇಕು, ನಾವು ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ, ಶ್ರದ್ಧೆಯಿಟ್ಟು ಕೆಲಸ ಮಾಡುವವರೆ ಕಣ್ಮರೆಯಾಗುತ್ತಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಓದಬೇಕು, ಓದಿದ ಕೂಡಲೇ ಕೆಲಸ ಅದು ಸರ್ಕಾರಿ ಕೆಲಸ ಅಥವಾ ಲಕ್ಷ ರೂಪಾಯಿ ಬರುವ ಕೆಲಸವೇ ಸಿಗಬೇಕು, 25/30 ವರ್ಷದೊಳಗೆ ಸ್ವಂತ ಮನೆ, ನಿವೇಶನ, ಹಣ ಎಲ್ಲ ಸಿಗಬೇಕೆಂಬ ತುಡಿತ, ಹಣವನ್ನು ದುಪ್ಪಟ್ಟು ಮಾಡಬೇಕೆಂಬ ಅತಿಯಾಸೆಯಿಂದ ಹೇಗಾದರೂ ಸರಿ ಅಡ್ಡದಾರಿಯಲ್ಲಿ ಹೋದರೂ ಸರಿಯೇ ನಮ್ಮ ಗುರಿಯನ್ನು ತಲುಪಬೇಕೆಂಬ ಮನೋಭಾವ ಹೆಚ್ಚಾಗುತ್ತಿರುವುದರಿಂದಲೇ ಸಮಸ್ಯೆಗಳು ಹೆಚ್ಚಾಗುತ್ತಿವೆ.

ಅಡ್ಡದಾರಿಗಳು ಕ್ಷಣಿಕವಾಗಿ ಫಲ ನೀಡಿದರೂ ಕೂಡ ಅದು



> ಜೀವನದಲ್ಲಿ ಯಾವ ಅಡೆತಡೆಗಳೇ ಬಂದರೂ ಮನಸ್ಸನ್ನು ಕುಗ್ಗಿಸಿಕೊಳ್ಳದೆ, ಶಾಂತವಾಗಿ, ದೃಢವಾಗಿ ಮುಂದೆ ಸಾಗಬೇಕು. ತಾಳ್ಮೆ ಮತ್ತು ಆತ್ಮವಿಶ್ವಾಸವನ್ನು ನಮ್ಮ ಜೀವನದ ಅಸ್ತ್ರಗಳನ್ನಾಗಿ ಮಾಡಿಕೊಂಡಾಗ ಮಾತ್ರ ನಿಜವಾದ ಸಾಧನೆ ಸಾಧ್ಯವಾಗುತ್ತದೆ. ಆದ್ದರಿಂದ ತಾಳ್ಮೆಯನ್ನು ಜೀವನದ ಅವಿಭಾಜ್ಯ ಭಾಗವನ್ನಾಗಿ ಮಾಡಿಕೊಂಡು ಸಾಗುವವನೇ ನಿಜವಾದ ಅರ್ಥದಲ್ಲಿ ಬಾಳಬಲ್ಲವನಾಗುತ್ತಾನೆ.

ನೀರ ಮೇಲಿನ ಗುಳ್ಳೆಯಂತೆ ಯಾವಾಗ ಬೇಕಾದರೂ ಮರೆಯಾಗಬಹುದು. ಕಾದು ತಿಂದ ಹಣ್ಣು ಬಲು ರುಚಿ ಎಂಬ ಹಿರಿಯರ ಮಾತಿನಂತೆ ತಡವಾಗಿಯಾದರೂ ಪ್ರಾಮಾಣಿಕತೆಯಿಂದ, ನೇರವಾದ ಮಾರ್ಗದಲ್ಲಿಯೇ ಸಾಗಿ ನಮ್ಮ ಗುರಿ ತಲುಪಬೇಕು. ಇದಕ್ಕೆ ತಾಳ್ಮೆ ಅತ್ಯಾವಶ್ಯಕವಾದ ಸಾಧನವಾಗಿದೆ.

ಕ್ಷಣಿಕ ಯಶಸ್ಸು ಅಲ್ಪಕಾಲದಲ್ಲಿಯೇ ಮರೆಯಾಗುವವು

ಕೆಲವೊಮ್ಮೆ ಕೆಲವರಿಗೆ ತುಂಬಾ ಅಲ್ಪಕಾಲದಲ್ಲಿಯೇ ಯಶಸ್ಸು ದೊರಕಬಹುದು. ಅವರು ನಿರೀಕ್ಷೆ ಮಾಡಿದಕ್ಕಿಂತ ಹೆಚ್ಚಾಗಿ ಹಣದ ಬೆಂಬಲದಿಂದಲೋ, ಶಿಫಾರಸ್ಸಿನ ಬೆಂಬಲದಿಂದಲೋ, ಶ್ರೀಮಂತ ಮನೆತನದ ಕಾರಣದಿಂದಲೋ ಯಶಸ್ಸು ಎಂಬುದು ತುಂಬಾ ವೇಗವಾಗಿ ಬರಬಹುದು. ಆದರೆ ಕ್ಷಣಿಕವಾಗಿ ಸಿಕ್ಕ ಯಶಸ್ಸು ಅಲ್ಪ ಕಾಲದಲ್ಲಿಯೇ ಮರೆಯಾಗುವುದು ಅಷ್ಟೇ ಖಚಿತವಾಗಿದೆ. ಉದಾಹರಣೆಗೆ ಹೇಳುವುದಾದರೆ ಪ್ರಸಿದ್ಧ ಸಿನಿಮಾ ತಾರೆಯರ ಮಕ್ಕಳು ತಮ್ಮ ತಂದೆಯಷ್ಟೇ ಪ್ರಸಿದ್ಧರಾಗಿ ಉಳಿದಿರುವುದು ಅಥವಾ ಪ್ರಸಿದ್ಧ ರಾಜಕಾರಣಿಗಳ ಮಕ್ಕಳು ನಮ್ಮ ತಂದೆಯಂತೆ ಪ್ರಸಿದ್ಧರಾಗಿ ಉಳಿದಿರುವುದು ಎಲ್ಲೋ ಬೆರಳಣಿಕೆಯಷ್ಟು ಮಾತ್ರ.

ಪ್ರತಿಭೆ ಇದ್ದವರು ಮಾತ್ರ ತಡವಾದರೂ ಸರಿಯೇ ಯಶಸ್ಸನ್ನು ಪಡೆಯುತ್ತಾರೆ. ಈ ಯಶಸ್ಸನ್ನು ಪಡೆಯುವಾಗ ಸೋಲು ಎದುರಾಗುವುದು ಸಹಜ. ಸೋಲಿಗೆ ಅಂಜದೆ ಗೆಲುವನ್ನು ಪಡೆದೆ ತೀರುವೆನೆಂಬ ಹಠವುಳ್ಳವರಿಗೆ ಮಾತ್ರ ತಾಳ್ಮೆಯ ಮಹತ್ವ ತಿಳಿದಿರುತ್ತದೆ, ಅಂತವರು ಯಶಸ್ವಿಯಾಗಿ ಜನಮಾನಸದಲ್ಲಿ ಉಳಿದಿರುತ್ತಾರೆ. ಹೇಗಾದರೂ ಮಾಡಿ ಜನರ ಮನಸ್ಸನ್ನು ಸೆಳೆಯಬಹುದೆಂಬ ಉದ್ದೇಶದಿಂದ ಯಶಸ್ಸನ್ನು ಪಡೆಯಲು ಪ್ರಯತ್ನಿಸುವ ಯುವ ಸಮೂಹ ತಾಳ್ಮೆಯ ಸದುದ್ದೇಶವನ್ನು ಅರಿಯಬೇಕಾಗಿದೆ. ಕ್ಷಣಿಕವಾಗಿ ಬಂದ ಯಶಸ್ಸು ಎಂದಿಗೂ ಶಾಶ್ವತವಾಗಿ ಉಳಿಯಲಾರದೆಂಬ ಸತ್ಯವನ್ನು ಮನಗಾಣಬೇಕಾಗಿದೆ.

ತಾಳ್ಮೆ, ಸಹನೆ ಕಷ್ಟ ಸಾಧ್ಯವಾದರೂ ಅಸಾಧ್ಯ ಪರಿಣಾಮವನ್ನುಂಟು ಮಾಡಬಲ್ಲವು

ಯಾರು ಎಷ್ಟೇ ಹೇಳಿದರೂ ಕೂಡ ತಾಳ್ಮೆ, ಸಹನೆ ನಮ್ಮಲ್ಲಿ ಉಳಿಯಲು ಸಾಧ್ಯವಾಗುವುದಿಲ್ಲ. ನಮ್ಮ ಬಗ್ಗೆ ಯಾರು ಮಾತನಾಡಬಾರದು, ಅದು ಮುಂದೆಯಾದರೂ ಸರಿ ನಮ್ಮ ಬೆನ್ನ ಹಿಂದೆಯಾದರೂ ಸರಿ, ನಾವು ಪ್ರಶ್ನಾತೀತರು, ನಮಗೆ ಬುದ್ಧಿ ಹೇಳಲು ಅವರು ಯಾರು, ಅವರ ಮಾತನ್ನು ನಾವು ಯಾಕೆ ಕೇಳಬೇಕೆಂಬ ಮನೋಭಾವಗಳು ನಮ್ಮನ್ನು ನೈತಿಕವಾಗಿ ಅಧಃಪತನಕ್ಕೀಳಿಯುವಂತೆ ಮಾಡುತ್ತಿದೆ.

ಹಿರಿಯರ ಮಾತುಗಳನ್ನು ಕೇಳುವ, ಕೇಳಿಸಿಕೊಳ್ಳುವಷ್ಟು ವ್ಯವಧಾನ ಇಲ್ಲದರ ಮಟ್ಟಿಗೆ ನಾವಿಂದು ತಲುಪಿದ್ದೇವೆ.ನಮ್ಮ ದಾರಿಯಲ್ಲಿ ನಮಗಿಷ್ಟ ಬಂದಂತೆ ಬದುಕುವ ಸ್ವಾತಂತ್ರ್ಯ ನಮಗಿದೆ ಎಂಬ ಸ್ವೇಚ್ಛಾಚಾರದಲ್ಲಿ ಮನಬಂದಂತೆ ವರ್ತಿಸುತ್ತಾ ಕಾಲ ಕಳೆಯುತ್ತಿದ್ದೇವೆ.

ತಾಳ್ಮೆ, ಸಹನೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡು ಜೀವಿಸಲು ಕಷ್ಟವಾದರೂ ಅದನ್ನು ಸಾಧಿಸಿದರೆ ಅವು ಅಗಾಧವಾದ ಪರಿಣಾಮವನ್ನುಂಟು ಮಾಡಬಲ್ಲದು. ಸಾಮಾಜಿಕ ಜಾಲತಾಣಗಳನ್ನೊಮ್ಮೆ ಪರಿಶೀಲಿಸಿದರೆ ಸಾಕು ಇಲ್ಲಸಲ್ಲದ ಮಾತುಗಳನ್ನಾಡಿ ಒಬ್ಬರ ಮೇಲೆ ಮತ್ತೊಬ್ಬರು ಮುಗಿಬಿದ್ದು ಜಗಳವಾಡುವ, ಮನಸ್ಸಿಗೆ ಘಾಸಿಯನ್ನುಂಟು ಮಾಡುವಂತೆ ಪರಸ್ಪರ ನಿಂದಿಸುವ ಕೆಲಸಗಳನ್ನು ನೋಡಿದರೆ ತಾಳ್ಮೆಯ ಪಾಠದ ಅವಶ್ಯಕತೆ ಇಂದು ಎಷ್ಟರ ಮಟ್ಟಿಗಿದೆ ಎಂಬುದರ ಅರಿವಾಗುತ್ತದೆ.

ತಾಳ್ಮೆಯಿಂದಾಗುವ ಪ್ರಯೋಜನಗಳು

ಇಡೀ ಪ್ರಪಂಚದಲ್ಲಿ ಪರಿಪೂರ್ಣರೆಂಬುವವರು ಯಾರು ಇಲ್ಲ, ಪ್ರತಿಯೊಬ್ಬರಲ್ಲಿಯೂ ನ್ಯೂನತೆಗಳಿರುವುದು ಸಹಜ. ಅವುಗಳನ್ನು ತಿಳಿದುಕೊಂಡು ನಮ್ಮ ತಪ್ಪುಗಳನ್ನು ಸರಿಪಡಿಸಿಕೊಂಡು ಬಾಳಲು ತಾಳ್ಮೆ ಅತ್ಯಂತ ಸಹಕಾರಿ. ತಾಳ್ಮೆಯಿಲ್ಲದಿರುವುದರಿಂದಲೇ ಸಾವು–ನೋವುಗಳು ಹೆಚ್ಚಾಗುತ್ತಿವೆ. ತೀರಾ ಇತ್ತೀಚೆಗೆ ದಿನಪತ್ರಿಕೆಯಲ್ಲಿ ಓದಿದ ಒಂದು ವಿಚಾರ ಇಲ್ಲಿ ಉಲ್ಲೇಖಾರ್ಹ ಎನಿಸುತ್ತದೆ. ವರ್ಷಕ್ಕೆ 80 ಲಕ್ಷ ವೇತನವನ್ನು ಪಡೆಯುತ್ತಿದ್ದ ಟೆಕ್ಕಿಯೊಬ್ಬರು ಕೃತಕ ಬುದ್ಧಿಮತ್ತೆಯ (ಎ.ಐ) ಕಾರಣದಿಂದ ಕೆಲಸವನ್ನು ಕಳೆದುಕೊಂಡು ಆ ಬೇಸರದಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಅದರೊಂದಿಗೆ ಅವರ ಮಡದಿಯೂ ಆತ್ಮಹತ್ಯೆ ಮಾಡಿಕೊಂಡ ಸುದ್ದಿಯನ್ನು ಓದಿ ಬೇಸರವಾಯಿತು. ವರ್ಷಕ್ಕೆ 80 ಲಕ್ಷ ವೇತನವನ್ನು ಪಡೆಯುತ್ತಿದ್ದರು ಎಂದ ಮೇಲೆ ಅವರಲ್ಲಿ ಪ್ರತಿಭೆ, ಪಾಂಡಿತ್ಯ, ಸಾಮರ್ಥ್ಯ ಇದ್ದದ್ದು ನಿಜ. ಒಂದು ಕೆಲಸ ಹೋದರೇನು ಮತ್ತೊಂದು ಕೆಲಸವನ್ನು ಹುಡುಕಿಕೊಳ್ಳಬಹುದಿತ್ತು. ಮೊದಲು ಪಡೆಯುತ್ತಿದ್ದ ವೇತನಕ್ಕಿಂತ ಕಡಿಮೆ ವೇತನ ಪಡೆಯುವ ಸಾಧ್ಯತೆ ಇತ್ತು. ಸ್ವಲ್ಪ ತಾಳ್ಮೆ ವಹಿಸಿದ್ದರೆ ಅದಕ್ಕಿಂತಲೂ ಹೆಚ್ಚಿನ ವೇತನವನ್ನು ಪಡೆಯುವ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬಹುದಿತ್ತು. ದೈಹಿಕವಾಗಿ ಅಂಗವಿಕಲರಾದವರೇ ಬೆರಗುಗೊಳಿಸುವಷ್ಟು ಸಾಧನೆಯನ್ನು ಮಾಡುತ್ತಿರುವ ಈ ಸಂದರ್ಭದಲ್ಲಿ ಜೀವವನ್ನು ಕಳೆದುಕೊಂಡದ್ದು ನಿಜಕ್ಕೂ ಬೇಸರದ ಸಂಗತಿ. ಸ್ವಲ್ಪ ತಾಳ್ಮೆ ವಹಿಸಿದ್ದರೆ ಖಂಡಿತವಾಗಿಯೂ ಬದುಕು ಸುಂದರವಾಗಿ ರೂಪಗೊಳ್ಳುತ್ತಿತ್ತು ಎಂದೆನಿಸುತ್ತದೆ.

ಎಲ್ಲರೂ ಸಂತೋಷವಾಗಿದ್ದಾರೆ, ಜೀವನವನ್ನು ಸಂತೃಪ್ತಿ ಯಿಂದ ಬದುಕುತ್ತಿದ್ದಾರೆ ಎಂಬ ಕಾಣದ ಮರೀಚಿಕೆಯಲ್ಲಿ ಕಳೆದುಹೋಗುವ ನಮಗೆ ವಾಸ್ತವದ ಚಿತ್ರಣ ನೆನಪಾಗುವುದೇ ಇಲ್ಲ. ಬದುಕು ಎಂದರೆ ಸ್ಟೇಟಸ್‌ನಲ್ಲಿ ಕಾಣಿಸುವಷ್ಟು ಸುಂದರವು ಅಲ್ಲ, ಬದುಕಲಾರದಷ್ಟು ಕಷ್ಟವೂ ಅಲ್ಲ.ಈ ಸತ್ಯದ ಅರಿವಾಗಬೇಕಾದರೆ ಕಾದು ನೋಡುವ ಗುಣ ನಮ್ಮದಾಗಬೇಕು, ಅದಕ್ಕೆ ತಾಳ್ಮೆಯಂತು ಬೇಕೆಬೇಕು.

ಸಿಗುವ ಕಾಲಕ್ಕೆ ಸರಿಯಾದ ಸಮಯಕ್ಕೆ ಪ್ರತಿಯೊಬ್ಬರಿಗೂ ಅವಕಾಶಗಳು ಬಂದೇ ಬರುತ್ತದೆ. ಅವಕಾಶಗಳು ಬಂದಾಗ ಅವುಗಳನ್ನು ಸದಾವಕಾಶಗಳಾಗಿ ಪರಿವರ್ತಿಸಿಕೊಂಡಿದ್ದಲ್ಲಿ ಶಾಶ್ವತವಾದ ಯಶಸ್ಸು ದೊರಕುತ್ತದೆ. ಇದಕ್ಕೆ ತಾಳ್ಮೆ ಬಹುಮುಖ್ಯ ಸಾಧನವಾಗಿದೆ.

ನಾವು ಹೇಗಿದ್ದರೂ ಮಾತನಾಡಿಕೊಳ್ಳುವವರು ಆಡಿಕೊಳ್ಳುವವರು ಇದ್ದೇ ಇರುತ್ತಾರೆ. ಅವರ ಮಾತುಗಳಿಗೆ ಕಿವಿಯಾಗುವ ಮುನ್ನ ಅವರನ್ನು, ಅವರ ಮಾತುಗಳನ್ನು ನಿರ್ಲಕ್ಷ್ಯ ಮಾಡಿ, ನಮ್ಮ ಕೆಲಸಗಳನ್ನು ಮತ್ತಷ್ಟು, ಮಗದಷ್ಟು ಶ್ರದ್ಧೆಯಿಂದ ಮಾಡುತ್ತಾ ಮುನ್ನುಗ್ಗಿದರೆ ನಮ್ಮ ಗುರಿಯನ್ನು ತಲುಪಲು ಸಾಧ್ಯ. ಈ ಗುರಿ ಸಾಧನೆಗೆ ತಾಳ್ಮೆಯ ಹಾದಿಯಲ್ಲಿ ಕ್ರಮಿಸುವುದು ಅಗತ್ಯ. ಬದುಕು ಸುಂದರವಾದುದು ಅದನ್ನು ಸದ್ಬಳಕೆಯನ್ನು ಮಾಡಿಕೊಂಡು ಮುನ್ನುಗ್ಗಬೇಕಾದರೆ ಸಹನೆ, ತಾಳ್ಮೆಯೆಂಬ ದಾರಿಗಳು ಅಗತ್ಯ, ಅನಿವಾರ್ಯ.

ಹೇಳುವುದು ಸುಲಭ, ಆಚರಣೆಗೆ ತರುವುದು ಕಷ್ಟ ಎಂಬ ವಾಸ್ತವದ ಅರಿವು ನನಗಿದ್ದರೂ ತಾಳ್ಮೆಯ ಮನೋಭಾವ ನಮ್ಮನ್ನು ಉನ್ನತ ಸ್ಥಾನಕ್ಕೆ ಕರೆದೊಯ್ಯಬಲ್ಲದು ಎಂಬ ಸದುದ್ದೇಶದಿಂದ ತಾಳ್ಮೆಯ ಮಹತ್ವವನ್ನು ಕುರಿತು ತಾಳಿದವನು ಖಂಡಿತವಾಗಿಯೂ ಬಾಳಿ ಬದುಕುತ್ತಾನೆ ಎಂಬ ಗಾದೆಯ ಮಹತ್ವವನ್ನು ಅರಿತವನ್ನಾಗಿಯೂ ಆಗಿ ಲೇಖನವನ್ನು ಮುಂದಿಡುವ ಪ್ರಯತ್ನ ಮಾಡಿದ್ದೇನೆ. ನೋಡಿ ಪ್ರಯತ್ನಿಸಿ ನಾವು ತಾಳ್ಮೆಯನ್ನು ಆಯ್ಕೆ ಮಾಡುತ್ತೇವೆಯೇ, ಅಥವಾ ಕ್ಷಣಿಕ ಆಕರ್ಷಣೆಗೆ ಮರುಳಾಗುತ್ತೇವೆಯೇ? ಆಯ್ಕೆ ನಿಮ್ಮ ಕಣ್ಮುಂದೆಯೇ ಇದೆ.

ತಾಳಿದವನು ಬಾಳಿಯಾನು ಎಂಬ ಮಾತು ಜೀವನದ ಮಹತ್ತರ ಸತ್ಯವನ್ನು ನಮಗೆ ತಿಳಿಸುತ್ತದೆ. ಜೀವನದಲ್ಲಿ ಎದುರಾಗುವ ಸಂಕಷ್ಟಗಳು, ನೋವುಗಳು ಮತ್ತು ವಿಫಲತೆಗಳು ನಮ್ಮನ್ನು ದುರ್ಬಲಗೊಳಿಸಲು ಅಲ್ಲ, ಬಲಿಷ್ಠರನ್ನಾಗಿಸಲು ಬರುತ್ತವೆ. ಅವನ್ನು ಧೈರ್ಯದಿಂದ ತಾಳುವವರು ಮಾತ್ರ ಯಶಸ್ಸಿನ ಸಿಹಿಯನ್ನು ಅನುಭವಿಸುತ್ತಾರೆ. ಸಹನೆಯು ಮಾನವನಿಗೆ ಶಕ್ತಿ ನೀಡುವ ಮಹತ್ವದ ಗುಣವಾಗಿದ್ದು, ಅದು ವ್ಯಕ್ತಿಯನ್ನು ಉತ್ತುಂಗದತ್ತ ಕೊಂಡೊಯ್ಯುತ್ತದೆ.

ಹೀಗಾಗಿ, ಜೀವನದಲ್ಲಿ ಯಾವ ಅಡೆತಡೆಗಳೇ ಬಂದರೂ ಮನಸ್ಸನ್ನು ಕುಗ್ಗಿಸಿಕೊಳ್ಳದೆ, ಶಾಂತವಾಗಿ, ದೃಢವಾಗಿ ಮುಂದೆ ಸಾಗಬೇಕು. ತಾಳ್ಮೆ ಮತ್ತು ಆತ್ಮವಿಶ್ವಾಸವನ್ನು ನಮ್ಮ ಜೀವನದ ಅಸ್ತ್ರಗಳನ್ನಾಗಿ ಮಾಡಿಕೊಂಡಾಗ ಮಾತ್ರ ನಿಜವಾದ ಸಾಧನೆ ಸಾಧ್ಯವಾಗುತ್ತದೆ. ಆದ್ದರಿಂದ ತಾಳ್ಮೆಯನ್ನು ಜೀವನದ ಅವಿಭಾಜ್ಯ ಭಾಗವನ್ನಾಗಿ ಮಾಡಿಕೊಂಡು ಸಾಗುವವನೇ ನಿಜವಾದ ಅರ್ಥದಲ್ಲಿ ಬಾಳಬಲ್ಲವನಾಗುತ್ತಾನೆ.

ಮಾಜಿ ಕೇಂದ್ರ ಸಚಿವ ವಿ.ಶ್ರೀನಿವಾಸಪ್ರಸಾದ್ ಅವರ ಎರಡನೇ ವರ್ಷದ ಪುಣ್ಯಸ್ಮರಣೆ...



ಮಾಜಿ ಕೇಂದ್ರ ಸಚಿವ ವಿ.ಶ್ರೀನಿವಾಸ ಪ್ರಸಾದ್ ಅವರ ಎರಡನೇ ವರ್ಷದ ಪುಣ್ಯ ಸ್ಮರಣೆಯ ದಿನದಂದು ಸಮಾಧಿಯ ಸ್ಥಳದಲ್ಲಿ ಅವರ ಕುಟುಂಬವರ್ಗದವರು ಪೂಜೆ ಸಲ್ಲಿಸಿದರು. ಕಲ್ಯಾಣಸಿರಿ ಭಂತೇಜಿ ಅವರು ಬುದ್ಧ ವಂದನೆ ಸಲ್ಲಿಸಿದರು. ಈ ವೇಳೆ ಶ್ರೀನಿವಾಸ್ ಪ್ರಸಾದ್ ಅವರ ಪತ್ನಿ ಡಿ.ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್, ಮಕ್ಕಳಾದ ಪ್ರತಿಮಾ ಪ್ರಸಾದ್, ಪೂರ್ಣಿಮಾ ಪ್ರಸಾದ್, ಪೂನಂ ಪ್ರಸಾದ್, ಅಳಿಯಂದಿರಾದ ಪಿ.ದೇವರಾಜ್, ಬಿ.ಹರ್ಷವರ್ಧನ್, ಮೊಮ್ಮಕ್ಕಳಾದ ದೇಶ್ನ ದೇವರಾಜ್, ದಾರ್ಯ ಹರ್ಷವರ್ಧನ್, ಸಾಂಚಿ ದೇವರಾಜ್, ದಿತಿ.ಎಂ ಪ್ರಸಾದ್, ದೀತ್ಯ.ಎಂ ಪ್ರಸಾದ್, ಪ್ರಸಾದ್ ಅವರ ಹಿರಿಯ ಆಪ್ತ ಸಹಾಯಕ ಹೆಚ್.ಜಿ.ರಮೇಶ್ ಹಾಜರಿದ್ದರು.

ಉಚಿತ ರೈತರ ಶಿಬಿರ

ಮೈಸೂರು,ಏ.29–ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಜೆಎಸ್‌ಎಸ್ ಮಹಾವಿದ್ಯಾಪೀಠ ಸಂಯುಕ್ತಾಶ್ರಯದಲ್ಲಿ ಮೇ 1ರಿಂದ 3ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ರೈತರ ಶಿಬಿರವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯಾಶೀರ್ವಾದದೊಂದಿಗೆ ಆಯೋಜಿಸಲಾಗಿದೆ. ಕರ್ನಾಟಕ ಕೃಷಿ ಬೆಲೆ ಆಯೋಗ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಅಶೋಕ್ ದಳವಾಯಿ ಶಿಬಿರವನ್ನು ಉದ್ಘಾಟಿಸಲಿದ್ದು, ಬೆಂಗಳೂರಿನ ಕೃಷಿ ವಿವಿ ಕುಲಪತಿ ಡಾ.ಎಸ್.ವಿ. ಸುರೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆ ಅಧ್ಯಕ್ಷ ಡಾ.ಎಬಿ. ಪಾಟೀಲ್ ಮುಖ್ಯ ಅತಿಥಿ ಗಳಾಗಿ ಭಾಗವಹಿಸುವರು. ಭಾರತೀಯ ಕೃಷಿ ಮತ್ತು ಸಂಸ್ಕೃತಿ, ಸಮಗ್ರ ಸಾವಯವ ಮತ್ತು ನೈಸರ್ಗಿಕ ಕೃಷಿ, ಕೃಷಿ ವ್ಯವಹಾರ ನಿರ್ವಹಣೆ ಹಾಗೂ ಮಾರುಕಟ್ಟೆ, ಬೆಳೆ ವೈವಿಧ್ಯತೆ ಮತ್ತು ಮಿಶ್ರ ಬೆಳೆ ಪದ್ಧತಿ, ಕೃಷಿ ಉತ್ಪನ್ನಗಳ ರಫ್ತು– ಈ ವಿಷಯಗಳನ್ನು ಕುರಿತು ಅನುಕ್ರಮವಾಗಿ ಚನ್ನಪ್ಪ ಅಂಗಡಿ, ಡಾ.ವಿಠ್ಠಲ್ ಬೆಣಗಿ, ಡಾ.ಬಿಂದು, ಡಾ.ನಾಗರಾಜಪ್ಪ ಅಡಿವಪ್ಪರ್, ಹೆಚ್.ನಾಗೇಂದ್ರಕುಮಾರ್ ಇವರಿಂದ ಉಪನ್ಯಾಸ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಪ್ರತಿದಿನ ಸಾಮೂಹಿಕ ಪ್ರಾರ್ಥನೆ, ಯೋಗ ಮತ್ತು ಧ್ಯಾನ, ದೇಸಿ ಆಟಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮಹಾತ್ಮರನ್ನ ಒಂದೇ ಜಾತಿಗೆ ಸೀಮಿತಗೊಳಿಸುತ್ತಿರುವುದು ವಿಷಾದದ ಸಂಗತಿ

●ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅಭಿಮತ ●ಡಾ.ಬಿ.ಆರ್.ಅಂಬೇಡ್ಕರ್ ಭಾರತದ ಅಂತಃಕರಣ, ಉಸಿರಾಗಿದ್ದಾರೆ

ಮೈಸೂರು, ಏ.29(ಎಂಟಿವೈ)– ಜಾತ್ಯಾತೀತ ರಾಷ್ಟ್ರವಾದ ಭಾರತದಲ್ಲಿ ದೇಶ ಕಟ್ಟಿದ ಮಹನೀಯರನ್ನು ಜಾತಿಗೆ ಸೀಮಿತಗೊಳಿಸಿರುವುದು ಖಂಡನೀಯ. ಇಂತಹ ಮಹಾತ್ಮರನ್ನು ಜಾತಿ ಸಂಕೋಲೆಯಿಂದ ಬಿಡುಗಡೆ ಮಾಡುವ ಮೂಲಕ ಜಾತ್ಯಾತೀತ ರಾಷ್ಟ್ರದ ಸಂದೇಶ ಸಾರುವ ಅವಶ್ಯಕತೆ ಇದೆ ಎಂದು ಉರಿಲಿಂಗಿಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಸವಣ್ಣನವರು 'ಇವ ನಮ್ಮವ ಇವ ನಮ್ಮವ' ಎಂದರೂ ಒಂದು ಜಾತಿಗೆ, ಕುಲವನ್ನು ಪ್ರಶ್ನೆ ಮಾಡಿದ ಕನಕದಾಸರನ್ನು ಮತ್ತೊಂದು ಜಾತಿಗೆ, ವಿಶ್ವಮಾನವ ಸಂದೇಶ ಕೊಟ್ಟ ಕುವೆಂಪು ಅವರನ್ನು ಮಗದೊಂದು ಜಾತಿಗೆ ಸೀಮಿತ ಮಾಡುವುದು ಚರಿತ್ರೆಗೆ ಮಾಡುವ ಅವಮಾನ ಮತ್ತು ಅದು ದ್ರೋಹದ ಕೆಲಸ. ಭಾರತದ ಪ್ರಥಮ ಪ್ರಜೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಬೇಡ್ಕರ್ ನನಗೆ ದೇವರ ಸಮಾನ, ರಾಷ್ಟ್ರಪತಿಯಾಗಲು ಅಂಬೇಡ್ಕರ್ ಕಾರಣ ಎಂದಿದ್ದಾರೆ. ನೋಟು ಮತ್ತು ಓಟಿನ ಹಕ್ಕು ಕೊಟ್ಟ ಬಾಬಾ ಸಾಹೇಬರು ಪ್ರತಿ ಭಾರತೀಯನ ಹೃದಯದಲ್ಲಿರಬೇಕು. ಅಂಬೇಡ್ಕರ್ ಭಾರತದ ಅಂತಃಕರಣ ಮತ್ತು ಉಸಿರು ಎಂದು ಬಣ್ಣಿಸಿದರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಬುಧವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಶಾಸಕ ಕೆ.ಹರೀಶ್‌ಗೌಡ, ಮಾಜಿ ಮೇಯರ್ ಪುರುಷೋತ್ತಮ್, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹಾಗೂ ಇನ್ನಿತರರು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.


ಭಾರತದ ಮಹಾರಾಜರು ಶಸ್ತ್ರಗಳನ್ನು ಬಳಸಿದರೂ ದೇಶದ ಚರಿತ್ರೆ ಬದಲಾಗಲಿಲ್ಲ. ಅಂಬೇಡ್ಕರ್ ಪೆನ್ನಿನ ಮೂಲಕ ಭಾರತದ ಚರಿತ್ರೆಯನ್ನು ಬದಲಿಸಿದರು. ಶೋಷಿತರಿಗೆ ಶಿಕ್ಷಣ, ಎಲ್ಲ ಜಾತಿ, ಧರ್ಮದವರಿಗೆ ಸಮಾನವಾದ ಹಕ್ಕು ನೀಡಿದರು. ಭಾರತದ ಅಖಂಡತೆ ಎತ್ತಿ ಹಿಡಿದ ಮಹಾನ್ ಜ್ಞಾನಿ ಅಂಬೇಡ್ಕರ್ ಅವರಿಗೆ ಜಗತ್ತಿನ 198 ದೇಶಗಳು ಸೆಲ್ಯೂಟ್ ಹೊಡೆಯುತ್ತವೆ. ಈ ದೇಶದಲ್ಲಿ ಹೆಣ್ಣು ಮಕ್ಕಳು ಬರೀ ಹೆರಿಗೆ ಯಂತ್ರವಾಗಿದ್ದರು. ಅಡುಗೆ ಮನೆಗೆ ಸೀಮಿತ ಮಾಡಲಾಗಿತ್ತು. ಅವರನ್ನು ಈ ದೇಶದ ರಾಷ್ಟ್ರಪತಿಯನ್ನಾಗಿ ಮಾಡಿದ್ದು ಅಂಬೇಡ್ಕರ್ ಸಂವಿಧಾನ. ಮಹಿಳೆಯರಿಗೆ ಸಮಾನ ವೇತನ, ಹೆರಿಗೆ ರಜೆಯನ್ನು ಕೊಟ್ಟ ಅಂಬೇಡ್ಕರ್ ಅವರನ್ನು ದೇಶದ ಎಲ್ಲ ಮಹಿಳೆಯರು ನೆನೆಯಬೇಕು ಎಂದರು.

ಡಾ. ಅಂಬೇಡ್ಕರ್ ಎಲ್ಲರಿಗಾಗಿ ಶ್ರಮಿಸಿದರು: ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಒಂದು ವರ್ಗಕ್ಕೆ ಸೀಮಿತವಾಗಿದ್ದ ಶಿಕ್ಷಣವನ್ನು ಎಲ್ಲ ವರ್ಗಗಳಿಗೂ ಸಿಗುವಂತೆ ಮಾಡಿದ ಮಹಾನ್ ನಾಯಕ ಡಾ.ಅಂಬೇಡ್ಕರ್. ಅಸಮಾನತೆ, ಶೋಷಣೆ, ದಬ್ಬಾಳಿಕೆ ಮತ್ತು ಅಸ್ಪೃಶ್ಯತೆಯ ಸಾಮಾಜಿಕ ವ್ಯವಸ್ಥೆಯನ್ನು ಮೆಟ್ಟಿನಿಂತ ನಾಯಕ ಅಂಬೇಡ್ಕರ್. ಅಂಬೇಡ್ಕರ್ ಸ್ವಾರ್ಥಕ್ಕಾಗಿ 32 ಡಿಗ್ರಿಗಳನ್ನು ಪಡೆಯಲಿಲ್ಲ. ದೇಶದ ಉದ್ಧಾರಕ್ಕಾಗಿ ಶೋಷಿತರ ವಿಮೋಚನೆಗಾಗಿ ವಿದೇಶದಲ್ಲಿ ಶಿಕ್ಷಣ ಪಡೆದರು. ಅವರನ್ನು ಜಾತಿಯಿಂದ ನೋಡುವುದು ಅಪಾಯಕಾರಿ. ಈಗಲೂ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಚಾರ ಮಾಡುತ್ತಿರುವುದು ದುರಂತ ಎಂದರು.

ಸಂವಿಧಾನ ಉಳಿಯಬೇಕು: ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ತ್ರೇತಾಯುಗ, ದ್ವಾಪರ ಯುಗದಲ್ಲಿ ಬೇರೆ ಬೇರೆ ಗ್ರಂಥಗಳಿದ್ದವು. ಈಗ ಇರುವುದು ಒಂದೇ ಮಹಾನ್ ಗ್ರಂಥ ಸಂವಿಧಾನ. ಸಂವಿಧಾನದ ಆಶಯ ಈಡೇರಿಸುವಲ್ಲಿ ಹಿಂದೆ ಇದ್ದೇವೆ. ಸಂವಿಧಾನ ತಿರುಚುವ ಪ್ರಯತ್ನಗಳು ನಡೆಯುತ್ತಿವೆ. ನಮ್ಮಂತೆಯೇ ಭವಿಷ್ಯದ ಜನರು ನಿರ್ಭಯವಾಗಿ ಬದುಕಬೇಕಾದರೆ ಸಂವಿಧಾನ ಉಳಿಸಬೇಕು. ಸಂವಿಧಾನ ಉಳಿಸುವ ಪ್ರಯತ್ನಕ್ಕೆ ಕಿಂಚಿತ್ತು ಹಿಂಜರಿಕೆ ಇರಬಾರದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ವಹಿಸಿದ್ದರು. ಕುಲಸಚಿವ ಪ್ರೊ.ನವೀನ್‌ಕುಮಾರ್ ಎಸ್.ಕೆ. ಸ್ವಾಗತಿಸಿದರು. ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ಅಧ್ಯಕ್ಷ ಡಾ.ಶಿವಕುಮಾರಸ್ವಾಮಿ, ರಾಮಚಂದ್ರನಾಯ್ಡು, ಡಾ.ಚಂದ್ರೇಗೌಡ, ನಿರಂಜನರಾಜ್, ಡಾ.ಆನಂದಕುಮಾರ್ ಮುಂತಾದವರಿದ್ದರು. ದೇವನಾಂದ ವರಪ್ರಸಾದ್ ಮತ್ತು ತಂಡದವರು ಭೀಮಗೀತೆ ಹಾಡಿದರು. ಸಮಾರಂಭದ ಬಳಿಕ ಹಿರಿಯ ರಂಗಕರ್ಮಿ ಜನಾರ್ಧನ (ಜನ್ನಿ) ತಂಡ ಡಾ.ಬಿ.ಆರ್.ಅಂಬೇಡ್ಕರ್ ಗೀತ ಗಾಯನ ಮತ್ತು ನಾಟಕ ಪ್ರದರ್ಶಿಸಿದರು.

ಇಂದು ಚಾಂದ್ರಮಾನ ನರಸಿಂಹ ಜಯಂತಿ; ವಿಶೇಷ ಸ್ವಾತಿ ಪೂಜೆ



ಮೈಸೂರು, ಏ.29–ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಏ.30 ರಂದು ಗುರುವಾರ ಚಾಂದ್ರಮಾನ ನರಸಿಂಹ ಜಯಂತಿ ಹಾಗೂ ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 8.30ಕ್ಕೆ ಸಂಕಲ್ಪ, 9.30ಕ್ಕೆ ಅಭಿಷೇಕ, 11ಕ್ಕೆ ಅಲಂಕಾರ, 12ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 8ಕ್ಕೆ ಪ್ರಾಕಾರೋತ್ಸವ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ವಿದ್ವಾನ್ ಕೆಆರ್. ಯೋಗಾನರಸಿಂಹನ್ (ಮುರಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊ.9342188323, 7598832271 ಸಂಪರ್ಕಿಸಬಹುದು.

ತಂಬಾಕು ಹರಾಜು ಕಾರ್ಯ ವಿಧಾನದಲ್ಲಿ ಸುಧಾರಣೆ; ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್‌ರಲ್ಲಿ ಸಂಸದ ಯದುವೀರ್ ಮನವಿ

ಮೈಸೂರು, ಏ.29(ಎಂಕೆ)– ತಂಬಾಕು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹರಾಜು ಕಾರ್ಯ ವಿಧಾನದಲ್ಲಿ ಸುಧಾರಣೆ ತರುವಂತೆ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಅವರು, ತಂಬಾಕು ಬೆಳೆಗಾರರಿಗೆ ಪಾರದರ್ಶಕತೆ ಮತ್ತು ನ್ಯಾಯಯುತ ಬೆಲೆ ನಿಗದಿಯಾಗಬೇಕಿದೆ. ಬೆಲೆ ಆವಿಷ್ಕಾರ ಮತ್ತು ಸಂಗ್ರಹಣೆಯಲ್ಲಿ ಸ್ಥಿರತೆ ಖಚಿತಪಡಿಸಿಕೊಳ್ಳಲು ಹರಾಜು ಕಾರ್ಯವಿಧಾನಗಳಲ್ಲಿ ಸುಧಾರಣೆಗೆ ಆದ್ಯತೆ ನೀಡಬೇಕು ಎಂದು ಕೋರಿದ್ದಾರೆ.



ನವದೆಹಲಿಯಲ್ಲಿ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್‌ರನ್ನು ಭೇಟಿಯಾದ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತಂಬಾಕು ಬೆಳೆಗಾರರ ಸಮಸ್ಯೆ ಕುರಿತು ಚರ್ಚಿಸಿದರು.

ಹರಾಜು ಪ್ರಕ್ರಿಯೆಯಲ್ಲಿ ವಿದೇಶಿ ಖರೀದಿದಾರರಿಗೆ ಅವಕಾಶ ನೀಡಬೇಕು. ರೈತರು, ಉದ್ಯಮದ ಪಾಲುದಾರರನ್ನು ರಕ್ಷಿಸುವ ನಿಟ್ಟಿನಲ್ಲಿ ಅಕ್ರಮ ಸಿಗರೇಟ್ ಉತ್ಪಾದನೆ ಮತ್ತು ಮಾರಾಟಕ್ಕೆ ಕಡಿವಾಣ ಹಾಕಬೇಕು. ಹಾಗೆಯೇ ರೈತರಿಗೆ ಸ್ಥಿರ ಆದಾಯ ಖಚಿತಪಡಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ಕೊಡಗು ಕಾಫಿ ಮಂಡಳಿ ಸಮಸ್ಯೆ ನಿವಾರಣೆಗೂ ಮನವಿ: ಕೊಡಗು ಕಾಫಿ ಸಹಕಾರಿ ಸಂಘ ಮತ್ತು ಕಾಫಿ ಮಂಡಳಿ ನಡುವಿನ ಸಮಸ್ಯೆ ಕುರಿತು ಚರ್ಚಿಸಿದ ಅವರು, 2015ರಿಂದಲೂ ಸಮಸ್ಯೆ ಇದೆ. ನ್ಯಾಯಾಲಯದ ನಿರ್ದೇಶನ ಇರುವುದರಿಂದ ಈ ವಿಷಯದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. ಸಮಸ್ಯೆ ಬಗೆಹರಿದರೆ, ಕೊಡಗು ಕಾಫಿ ಬ್ರ್ಯಾಂಡ್ ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಅನುಕೂಲವಾಗುತ್ತದೆ ಮತ್ತು ಸಹಕಾರಿ ಸಂಸ್ಥೆಯನ್ನು ಬೆಂಬಲಿಸಿದಂತಾಗುತ್ತದೆ ಎಂದು ಮನವಿ ಮಾಡಿರುವುದಾಗಿ ಸಂಸದ ಯದುವೀರ್ ಒಡೆಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಡಿಜೆ ಗೋಲ್ಡ್ ಕಂಪನಿಯಿಂದ ವಂಚನೆ ಆರೋಪ; ಪೊಲೀಸ್ ಆಯುಕ್ತರ ಕಚೇರಿ ಮುಂದೆ ಗ್ರಾಹಕರ ಪ್ರತಿಭಟನೆ



ಪೊಲೀಸ್ ಆಯುಕ್ತರ ಕಚೇರಿ ಎದುರು ನೊಂದ ಗ್ರಾಹಕರಿಂದ ಪ್ರತಿಭಟನೆ.

ಮೈಸೂರು, ಏ.29(ಎಂಕೆ)– ಎಸ್‌ಡಿಜೆ ಗೋಲ್ಡ್ ಕಂಪನಿಯಿಂದ ಅಡಮಾನವಿಟ್ಟ ಚಿನ್ನದಲ್ಲಿ ಮೋಸ ಮಾಡಲಾಗಿದೆ ಎಂದು ಆರೋಪಿಸಿ ನೊಂದ ಗ್ರಾಹಕರು ನಗರ ಪೊಲೀಸ್ ಆಯುಕ್ತರ ಕಚೇರಿ ಎದುರು ದಿಢೀರ್ ಪ್ರತಿಭಟನೆ ನಡೆಸಿದ ಘಟನೆ ಬುಧವಾರ ನಡೆಯಿತು.

ಅಡವಿಟ್ಟ ಚಿನ್ನ ಬಿಡಿಸಿಕೊಡುವುದಾಗಿ ಹೇಳಿ ಎಸ್‌ಡಿಜೆ ಗೋಲ್ಡ್ ಕಂಪನಿ ಮಾಲೀಕ ಚಿನ್ನತಂಬಿ ಮೋಸ ಮಾಡುತ್ತಿದ್ದಾರೆ. ಕೇಳಿದರೆ ಏಕಾಏಕಿ ನಮ್ಮ ಮೇಲೆಯೇ ಹಲ್ಲೆ ನಡಸುತ್ತಾರೆ. ಕೂಡಲೇ ಆತನನ್ನು ಕರೆಸಿ, ನ್ಯಾಯ ದೊರಕಿಸಿ ಕೊಡುವಂತೆ ಪಟ್ಟು ಹಿಡಿದರು.

ಗಿರವಿಗೆ ಇಟ್ಟಿರುವ ಚಿನ್ನ ಕರಗಿಸಿ ಮಾರಾಟ ಮಾಡುತ್ತಿದ್ದು, ಇತ್ತ ಚಿನ್ನವು ಇಲ್ಲ ಅತ್ತ ಹಣವು ಇಲ್ಲದಂತಾಗಿದೆ. ಚಿನ್ನ ಕೇಳಲು ಹೋದರೆ ರೌಡಿಗಳನ್ನು ಬಿಟ್ಟು ಧಮ್ಕಿ ಹಾಕಿಸಲಾಗುತ್ತಿದೆ. ಪ್ರಕರಣ ದಾಖಲಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಪೊಲೀಸ್ ನಡುವೆ ವಾಗ್ವಾದ ನಡೆಸಿದರಲ್ಲದೆ ಎಸ್‌ಡಿಜೆ ಗೋಲ್ಡ್ ಕಂಪನಿಯಿಂದ ನೂರಾರು ಗ್ರಾಹಕರಿಗೆ ವಂಚನೆಯಾಗಿದ್ದು, ಕೂಡಲೇ ತನಿಖೆ ನಡೆಸಿ ನ್ಯಾಯ ದೊರಕಿಸಿಕೊಡಬೇಕೆಂದು ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು: ವಿಜಯನಗರ 1 ಮತ್ತು 2ನೇ ಹಂತದ ನಿವಾಸಿ ಮಕ್ಕಳಿಗೆ 10ನೇ ತರಗತಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪುಣ್ಯಕೋಟಿ ಸೇವಾ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು/ಪೋಷಕರು ಹೆಚ್ಚಿನ ಮಾಹಿತಿಗೆ ಮೊ.6361298986, 9242941216 ಸಂಪರ್ಕಿಸಬಹುದು.

ಕರ್ನಾಟಕ ಪ್ರಾಚೀನ ಹಸ್ತಪ್ರತಿ ಸಮೀಕ್ಷೆಗೆ ಡಿಸಿ ಚಾಲನೆ



ಕರ್ನಾಟಕ ಪ್ರಾಚೀನ ಹಸ್ತಪ್ರತಿ ಸಮೀಕ್ಷೆಗೆ ಡಿಸಿ ಲಕ್ಷ್ಮಿಕಾಂತ್‌ರೆಡ್ಡಿ ಚಾಲನೆ ನೀಡಿದರು.

ಮೈಸೂರು, ಏ.29(ಎಂಕೆ)– ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ಅಭಿವೃದ್ಧಿಪಡಿಸಿರುವ ಮೊಬೈಲ್(ಜ್ಞಾನ ಭಾರತಂ ಆ್ಯಪ್) ಅಪ್ಲಿಕೇಷನ್ ಮೂಲಕ ಕರ್ನಾಟಕ ಪ್ರಾಚೀನ ಹಸ್ತಪ್ರತಿಗಳ ಸಮೀಕ್ಷೆಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಚಾಲನೆ ನೀಡಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಹಸ್ತಪ್ರತಿಗಳ ಸಮೀಕ್ಷೆಯ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಾಲನೆ ನೀಡಿದರು. ಹಸ್ತಪ್ರತಿಗಳಲ್ಲಿನ ಮಾಹಿತಿಯನ್ನು ವಿಶ್ವಕ್ಕೆ ಹಂಚಿಕೊಳ್ಳುವ ಉದ್ದೇಶಿತ ಯೋಜನೆ ಇದಾಗಿದ್ದು, ರಾಷ್ಟ್ರಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು ಮತ್ತು ದಾಖಲೆಗಳನ್ನು ಇಂದಿನ ತಂತ್ರಜ್ಞಾನ ಮೂಲಕ ಶಾಶ್ವತವಾಗಿ ಉಳಿಸಲು ಸಮೀಕ್ಷೆ, ಸಂರಕ್ಷಣೆ, ರಕ್ಷಣೆ, ಡಿಜಿಟಲೀಕರಣ, ನೋಂದಣಿ, ವಿಮರ್ಶಾತ್ಮಕ ಸಂಪಾದನೆ, ಅನು ಮತ್ತು ಪ್ರಕಟಣೆ ಮಾಡುವ ಮೂಲಕ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಭವಿಷ್ಯದ ಪೀಳಿಗೆಗೆ ನೀಡುವುದಾಗಿದೆ.

ರಾಜ್ಯದ 17 ಜಿಲ್ಲೆಗಳಲ್ಲಿ ಇದುವರೆಗೆ ನಡೆದಿರುವ ಹಸ್ತಪ್ರತಿಗಳ ಸಮೀಕ್ಷೆಯಲ್ಲಿ 2,13,255 ಹಸ್ತಪ್ರತಿಗಳ ಮಾಹಿತಿಯನ್ನು ಹಂಚಿಕೊಂಡಿದ್ದು, ಮೈಸೂರು ಜಿಲ್ಲೆಯಲ್ಲಿಯೇ 30,996 ಹಸ್ತಪ್ರತಿಗಳ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ. ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಉಪ ನಿರ್ದೇಶಕಿ ಡಾ.ಸಿ.ಎನ್.ಮಂಜುಳ, ಸಹಾಯಕ ನಿರ್ದೇಶಕ ಸುನಿಲ್‌ಕುಮಾರ್, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಸ್ವಾಮಿ, ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ನಿರ್ದೇಶಕ ಡಾ.ಕೆ.ವಿ.ರಾಮಪ್ರಿಯಾ ಇದ್ದರು.

ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಏ. 29– ರೈಲ್ವೆ ವೇತನದಾರರ ಸಂಘದಿಂದ ನಿವೃತ್ತ ರೈಲ್ವೆ ವೇತನದಾರರ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಎಸ್.ಎಸ್.ಎಲ್‌ಸಿ ಹಾಗೂ ಪಿ.ಯು.ಸಿ ಶೈಕ್ಷಣಿಕ ವರ್ಷ 2026 ರಲ್ಲಿ ಶೇ.80% ಮತ್ತು ಅದಕ್ಕೂ ಮೇಲ್ಪಟ್ಟ ಅಂಕಗಳನ್ನು ಪಡೆದಿದ್ದಲ್ಲಿ ಅವರಿಗೆ ಪ್ರೋತ್ಸಾಹ ಧನವನ್ನು ಕೊಡಲು ತೀರ್ಮಾನಿಸಿದೆ. (ತಲಾ 10 ಮಕ್ಕಳಿಗೆ ಮಾತ್ರ ಅಂಕದ ಆದ್ಯತೆ ಮೇರೆಗೆ ಪ್ರೋತ್ಸಾಹ ಧನ ನೀಡಲಾಗುವುದು). ಅರ್ಜಿಯನ್ನು ಮೇ 4 ರಿಂದ ಪಡೆಯ ಬಹುದು. ಭರ್ತಿ ಮಾಡಿದ ಅರ್ಜಿ ಯನ್ನು ಜೂ. 10ರೊಳಗೆ ಸಲ್ಲಿಸಬಹುದು.

(ಸೂಚನೆ : ಸೋಮ, ಬುಧ ಮತ್ತು ಶುಕ್ರವಾರದಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.00 ಘಂಟೆಯವರೆಗೆ ಅರ್ಜಿಯನ್ನು ಸ್ವೀಕರಿಸಲಾಗುವುದು).

ನೃತ್ಯದಿಂದ ಏಕಾಗ್ರತೆ, ಉಲ್ಲಾಸ ಹೆಚ್ಚಳ

ನೃತ್ಯ ಗುರು ವಿದ್ವಾನ್ ಪ್ರೊ.ಕೆ.ರಾಮಮೂರ್ತಿರಾವ್ ಅಭಿಮತ

ಮೈಸೂರು, ಏ.29(ಎಂಕೆ)– ಏಕಾಗ್ರತೆಗೆ ನೃತ್ಯವೇ ಔಷಧವಾಗಿದ್ದು, ನಾಟ್ಯ ಅಥವಾ ನೃತ್ಯದಿಂದ ಉಲ್ಲಾಸ ಹೆಚ್ಚುತ್ತದೆ. ನೃತ್ಯದಲ್ಲಿ ತೊಡಗಿಸಿಕೊಂಡು ಪರಿಶ್ರಮಪಟ್ಟರೆ ಉನ್ನತ ಸ್ಥಾನ ಪಡೆಯಬಹುದು ಎಂದು ನೃತ್ಯ ಗುರು ವಿದ್ವಾನ್ ಪ್ರೊ.ಕೆ. ರಾಮಮೂರ್ತಿ ರಾವ್ ತಿಳಿಸಿದರು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಬುಧವಾರ ಆಯೋಜಿಸಿದ್ದ 'ವಿಶ್ವ ನೃತ್ಯ ದಿನಾಚರಣೆ' ಉದ್ಘಾಟಿಸಿ ಮಾತನಾಡಿದ ಅವರು, ನೃತ್ಯದ ಬಗ್ಗೆ ಜನರಲ್ಲಿನ ತಪ್ಪು ಮಾಹಿತಿ ಹೋಗಲಾಡಿಸಿ, ಅದರ ಪ್ರಾಮುಖ್ಯತೆ ಜನರಿಗೆ ತಿಳಿಸುವ ಕೆಲಸವಾಗಬೇಕಿದೆ ಎಂದರು.



ಸಂಗೀತ ವಿವಿಯಲ್ಲಿ 'ವಿಶ್ವ ನೃತ್ಯ ದಿನ; ಆಚರಿಸಲಾಯಿತು.

ಪ್ರಾಚೀನ ಕಾಲದಲ್ಲಿ ಮುಖದ ಕಾಂತಿಗೆ ಮಹಿಳೆಯರು ನೃತ್ಯ ಅವಲಂಬಿಸಿದ್ದರು. ಆರೋಗ್ಯ ಸುಸ್ಥಿತಿಗೆ, ಕೈಕಾಲು ಶಕ್ತಿಯುತವಾಗಲು ನೃತ್ಯ ಸಹಕಾರಿ. ನೃತ್ಯದಿಂದ ಕಣ್ಣಿನಲ್ಲಿ ಕಾಂತಿ ಹೆಚ್ಚಾಗಿ, ಹಸನ್ಮುಖರಾಗಿರುತ್ತಾರೆ. ಈ ಕಲೆಯಿಂದ ಮಕ್ಕಳಲ್ಲಿ ಸಂಸ್ಕಾರ ಬೆಳೆಯುತ್ತದೆ ಎಂದರು.

ನೃತ್ಯಾಭ್ಯಾಸ ಮಾಡುತ್ತಿರುವವರ ಹತ್ತಿರವೂ ರೋಗಗಳು ಸುಳಿಯುವುದಿಲ್ಲ. ಈ ಅಂಶಗಳನ್ನು ಪರಿಗಣಿಸಿ ಯುನೆಸ್ಕೋ ವಿಶ್ವ ಶಾಂತಿಗಾಗಿ ನೃತ್ಯ ದಿನಾಚರಣೆ ಆರಂಭಿಸಿತು. ಅದರ ಉದ್ದೇಶ ಈಡೇರಿಸಲು ನಾವೆಲ್ಲರು ಶ್ರಮಿಸಬೇಕು ಎಂದು ಕರೆ ನೀಡಿದರು.

ಬಳಿಕ ಪ್ರತಿಭಾ ಪ್ರದರ್ಶನದ ಅಂಗವಾಗಿ ವಿದ್ಯಾರ್ಥಿಗಳು ಅಮೋಘ ಭರತನಾಟ್ಯ ಪ್ರದರ್ಶಿಸಿದರು. ಸಂಗೀತ ವಿವಿ ಕುಲಪತಿ ಪ್ರೊ.ಕೆ.ರಾಮಕೃಷ್ಣಯ್ಯ, ಕುಲಸಚಿವ ಪ್ರೊ.ಎಂ.ಜಿ.ಮಂಜುನಾಥ, ಹಣಕಾಸು ಅಧಿಕಾರಿ ಸಿ.ಪಿ.ಸೌಮ್ಯಶ್ರೀ, ಭುವನೇಶ್ವರಿ, ಚಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಬೀದಿಗೆ ಬಿದ್ದಿರುವ ಕುಟುಂಬ: ನ್ಯಾಯಕ್ಕಾಗಿ ಆಗ್ರಹ

ಪೊಲೀಸರ ನಿರ್ಲಕ್ಷ್ಯ ಆರೋಪ

ಮೈಸೂರು, ಏ.29(ಜಿಎ)–ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ನಮ್ಮ ಅತ್ತೆಗೆ ಸೇರಿದ ಮನೆಯಲ್ಲಿ ತಮಗೂ ಭಾಗ ನೀಡಬೇಕೆಂದು ನ್ಯಾಯಾಲಯ ಸೂಚಿಸಿದ್ದರೂ ಕೌಟುಂಬಿಕ ಕಲಹದ ಕಾರಣ ತಮ್ಮ ಪತಿಯ ಅಣ್ಣ ಹಾಗೂ ಅತ್ತೆ ಐದು ದಿನಗಳ ಹಿಂದೆ ಮನೆಯಿಂದ ತಮ್ಮನ್ನು ಹೊರ ಹಾಕಿದ್ದು, ಮಕ್ಕಳೊಡನೆ ಬೀದಿಗೆ ಬಿದ್ದಿದ್ದೇವೆ. ಈ ಬಗ್ಗೆ ದೂರು ನೀಡಲು ಹೋದರೆ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ಸ್ವೀಕರಿಸುತ್ತಿಲ್ಲ ಎಂದು ಗೃಹಿಣಿ ಬಿ.ಆರ್. ಚಂದ್ರಕಲಾ ಅಳಲು ತೋಡಿಕೊಂಡರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಪತಿ ರಮೇಶ್ ಅವರಿಂದ ಭಾಗದ ವೇಳೆ ವಂಚಿಸಿ ಪತ್ರಕ್ಕೆ ಸಹಿ ಹಾಕಿಸಿಕೊಳ್ಳಲಾಗಿದೆ. ಇದರ ಅರಿವಾಗಿ ನ್ಯಾಯಾಲಯದ ಮೊರೆ ಹೋದ ಬಳಿಕ ಭಾಗ ಮಾಡಿಕೊಂಡು ಬನ್ನಿ ಎಂದು ನ್ಯಾಯಾಲಯ ಸೂಚಿಸಿದೆ ಆದರೆ ಕಳೆದ ಐದು ದಿನಗಳ ಹಿಂದೆ ಕೌಟುಂಬಿಕ ಕಲಹ ಕಾರಣ ತಾವು ವಾಸವಿದ್ದ ಮನೆಯಿಂದ ತಮ್ಮನ್ನು ಹೊರ ದೂಡಲಾಗಿದೆ. ಇದರಿಂದಾಗಿ ಕಳೆದ 5 ದಿನಗಳಿಂದಲೂ ತಮ್ಮ ಕುಟುಂಬ ಬೀದಿಗೆ ಬಿದ್ದಿದೇವೆ. ತಮ್ಮ ರಕ್ಷಣೆಗೆ ಬರಬೇಕೆಂದು ಕೋರಿ ದೂರು ನೀಡಲು ಹೋದರೆ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ದೂರು ಸ್ವೀಕರಿಸುತ್ತಿಲ್ಲ ಎಂದು ದೂರಿದರು.

ತಮ್ಮ ಇಬ್ಬರು ಹೆಣ್ಣು ಮಕ್ಕಳು ಪದವಿ ಪೂರ್ವ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಸಂಬಂಧಿಸಿದವರು ಮಧ್ಯ ಪ್ರವೇಶಿಸಿ ನಮ್ಮನ್ನು ಮನೆಗೆ ಸೇರಿಸಬೇಕು. ನ್ಯಾಯಾಲಯದ ಆದೇಶ ಪಾಲನೆಗೆ ಸೂಚಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಚಂದ್ರಕಲಾ ಅವರ ಪತಿ ರಮೇಶ್ ಹಾಗೂ ಇಬ್ಬರು ಪುತ್ರಿಯರು ಉಪಸ್ಥಿತರಿದ್ದರು.

ಟ್ರೋಫಿ ವಿತರಣೆ...



ಮೈಸೂರು ತಾಲೂಕು ಜಯಪುರ ಹೋಬಳಿಯ ಡಿ.ಸಾಲುಂಡಿ ಸ್ನೇಹಜೀವಿ ಪ್ರೇಮ್ ಆತ್ಮೀಯರ ಬಳಗದಿಂದ ಆಯೋಜಿಸಿದ್ದ ಪ್ರೇಮ್ ಕಪ್ ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಹಾಸನ ತಂಡ ಪ್ರಥಮ, ಡಿ.ಸಾಲುಂಡಿ ತಂಡ ದ್ವಿತೀಯ ಸ್ಥಾನ ಪಡೆಯಿತು. ವಿಜೇತರಿಗೆ ಉದ್ಯಮಿ, ಹೆಚ್‌ಎಂಐ ಫ್ರೂಟ್ಸ್ ಮಾಲೀಕ ಜಯಪುರ ಮೋಹಿಯುದ್ದೀನ್ ಟ್ರೋಫಿ ಮತ್ತು ನಗದು ಬಹುಮಾನ ವಿತರಿಸಿದರು. ದೊರೆಸ್ವಾಮಿ, ಬಸಪ್ಪ, ಶಿವರಾಜು, ಸ್ನೇಹಜೀವಿ ಪ್ರೇಮ್ ಆತ್ಮೀಯರ ಬಳಗದ ಸದಸ್ಯರು ಇದ್ದರು.

ನಾಳೆ ಮಹಾ ಮೃತ್ಯುಂಜಯ ಹೋಮ

ಮೈಸೂರು, ಏ.29– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಮೇ 1 (ಶುಕ್ರವಾರ)ರಂದು ಶುಕ್ರವಾರ ಬೆಳಗ್ಗೆ 9 ಗಂಟೆಗೆ ಮಹಾ ಮೃತ್ಯುಂಜಯ ಹೋಮ ಮತ್ತು ಮೇಷ, ಸಿಂಹ, ವೃಶ್ಚಿಕ, ಮಕರ, ಕುಂಭ, ಮೀನಾ ರಾಶಿಯವರಿಗೆ ಶನಿ ಮಹಾಶಾಂತಿ ಮತ್ತು ಆರೋಗ್ಯಕರ ಧನ್ವಂತರಿ ಹೋಮ, ಕುಜ ಶಾಂತಿ, ರಾಹು ಶಾಂತಿ, ಗುರು ಶಾಂತಿ ಮತ್ತು ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ಮತ್ತು ಎಂದಿ ನಂತೆ ಪ್ರಸಾದ ವಿನಿಯೋಗ ನಡೆಯಲಿದೆ.

ಅಪರಿಚಿತ ಶವ ಪತ್ತೆ

ಮೈಸೂರು, ಏ.29– ಏ.27 ರಂದು ಸಾಗರಕಟ್ಟೆ– ಕೆ.ಆರ್.ನಗರ ರೈಲು ನಿಲ್ದಾಣದ ರೈಲ್ವೇ ಕಿ.ಮೀ. ಸಂಖ್ಯೆ 24/500–600 ರ ಟ್ರ್ಯಾಕ್ ಪಕ್ಕದಲ್ಲಿ ಸುಮಾರು 45–50 ವರ್ಷ ಅಪರಿಚಿತ ಗಂಡಸಿನ ಮೃತದೇಹವು ಕೊಳೆತ ಸ್ಥಿತಿಯಲ್ಲಿದ್ದು, ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಮಂಡ್ಯ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿರುತ್ತದೆ. ವಯಸ್ಸು ಸುಮಾರು 50–60 ವರ್ಷ, ಎತ್ತರ 5.12/2 ಸೆಂ.ಮೀ ಅಡಿ ಎತ್ತರ, ದೃಢಕಾಯ ಶರೀರ, ಗೋಧಿ ಮೈಬಣ್ಣ, ದುಂಡು ಮುಖ, ದೇಹವು ಕೊಳೆತ ಸ್ಥಿತಿಯಲ್ಲಿದ್ದರಿಂದ ತಲೆ ಕೂದಲು ಗಡ್ಡ ಮೀಸೆ ಮಾಸಿಹೋಗಿರುತ್ತದೆ. ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂ.ಸಂ.0821–2516579, 9480802122 ಅನ್ನು ಸಂಪರ್ಕಿಸಬಹುದು.

ಭಗವಾನ್ ಬುದ್ಧರ ಉದ್ದೇಶವೇ ಡಾ.ಅಂಬೇಡ್ಕರ್ ಅವರದ್ದು ಆಗಿತ್ತು

ಬೌದ್ಧ ಬಿಕ್ಕು ಆನಂದ ಥೇರ ಭಂತೇಜಿ ಅಭಿಮತ

ಮೈಸೂರು,ಏ.29(ಎಂಕೆ)–ಬರೀ ಬೌದ್ಧಿಕ ಮಾತ್ರವಲ್ಲ, ನಮ್ಮೊಳಗಿನ ಪ್ರಜ್ಞೆಯನ್ನು ಬೆಳೆಸುವ ಆಧಾರ ಶಿಲೆ ಬೌದ್ಧ ಧರ್ಮ ಎಂಬ ಸತ್ಯ ಕಂಡುಕೊಂಡ ಡಾ.ಅಂಬೇಡ್ಕರ್ ಅವರು, ಬೌದ್ಧ ಧರ್ಮದ ಮೂಲ ಉದ್ದೇಶಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯ ಮಹತ್ವವನ್ನು ವಿಸ್ತರಿಸಿದರು ಎಂದು ಅಂತರರಾಷ್ಟ್ರೀಯ ಬೌದ್ಧ ಒಕ್ಕೂಟದ ಉಪಾಧ್ಯಕ್ಷರಾದ ಬಿಕ್ಕು ಆನಂದ ಥೇರ ಭಂತೇಜಿ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಮಹಾಬೋಧಿ ಸೊಸೈಟಿ ಸಹಯೋಗದೊಂದಿಗೆ 2570ನೇ ಬುದ್ಧ ಜಯಂತಿ ಅಂಗವಾಗಿ ಆಯೋಜಿಸಿದ್ದ 'ಡಾ.ಬಿ.ಆರ್. ಅಂಬೇಡ್ಕರ್ ಅವರು ಕಲ್ಪಿಸಿದ ನಮ್ಮ ಬದುಕಿನಲ್ಲಿ ಬುದ್ಧರ ಪ್ರಸ್ತುತತೆ' ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಗವಾನ್ ಬುದ್ಧರ ಉದ್ದೇಶವೇ ಅಂಬೇಡ್ಕರ್‌ರ ಉದ್ದೇಶವೂ ಆಗಿತ್ತು ಎಂದರು.



ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಭಗವಾನ್ ಬುದ್ಧ ಜಯಂತಿ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಇಪ್ಪತ್ತಾರು ಶತಮಾನಗಳು ಕಳೆದರು ಭಾರತಕ್ಕೆ ಮಾತ್ರವಲ್ಲದೆ ಇಡೀ ವಿಶ್ವಕ್ಕೆ ಭಗವಾನ್ ಬುದ್ಧರು ಬೇಕೇ ಬೇಕು ಎಂದು ಸ್ಮರಿಸಲಾಗುತ್ತಿದೆ. ಅಂತಹ ಶಕ್ತಿ ಕೂಡ ಬುದ್ಧರಲ್ಲಿದೆ. ಬುದ್ಧರು ನಮಗೆ ಯಾಕೆ ಬೇಕು ಎಂದು ಅಪಾರ ಸಂಶೋಧನೆ ನಡೆಸಿದ ಡಾ.ಅಂಬೇಡ್ಕರ್ ಅವರು, ಅಂತಿಮವಾಗಿ ಬೌದ್ಧ ಧಮ್ಮವನ್ನು ಸ್ವೀಕರಿಸುತ್ತಾರೆ. ದುಃಖ ಮತ್ತು ದುಃಖದಿಂದ ವಿಮುಕ್ತರಾಗಿ ಎಲ್ಲರೂ ಸಮಾನರಾಗಿ ಬದುಕಬೇಕು ಎಂಬ ಬುದ್ಧರ ಸಂದೇಶಗಳನ್ನು ಡಾ.ಬಿ.ಆರ್.ಅಂಬೇಡ್ಕರ್, ತಮ್ಮ ಜೀವನದಲ್ಲೂ ಅಳವಡಿಸಿಕೊಂಡು ನಮ್ಮೆಲ್ಲರ ಬದುಕಿಗೆ ದಾರಿದೀಪವಾಗಿದ್ದಾರೆ ಎಂದು ಸ್ಮರಿಸಿದರು.

ರೋಗ ಮತ್ತು ನಶೆ: ಎಲ್ಲಕ್ಕಿಂತ ದೊಡ್ಡ ಬಂಧನವೇ ಅಜ್ಞಾನ. ಈ ಅಜ್ಞಾನದಿಂದ ಮುಕ್ತರಾಗಿ ಜ್ಞಾನದ ಕಡೆಗೆ ಸಾಗಬೇಕಿದೆ. ಜಾತಿ ವ್ಯವಸ್ಥೆ ಎಂಬುದು ರೋಗ ಮತ್ತು ನಶೆಯಂತೆ. ನಶೆಯಲ್ಲಿ ಇರಲು ಇಷ್ಟಪಡುವವರು ಜಾತಿಯ ಬಗ್ಗೆ ಮಾತನಾಡುತ್ತಾ ಅದರೊಳಗೆ ಮುಳುಗಿರುತ್ತಾರೆ. ನಾನು ಆ ಜಾತಿ.. ಇವನು ಈ ಜಾತಿ ಎಂದೆಲ್ಲಾ ಏಂಜಾಯ್ ಮಾಡಿಕೊಂಡು ಮಾತಾಡುತ್ತಿರುತ್ತಾರೆ. ಆದರೆ, ವಿಜ್ಞಾನ ಮತ್ತು ವೈಜ್ಞಾನಿಕ ದೃಷ್ಟಿಯಲ್ಲಿ ನೋಡಿದರೆ, ಎಲ್ಲರದ್ದೂ ಒಂದೇ ಜಾತಿಯಾಗಿದೆ. ಆದ್ದರಿಂದ ಅಜ್ಞಾನವೆಂಬ ಅಂಟುವಿಕೆಯಿಂದ ಹೊರಬರಬೇಕಾದರೆ ಭಗವಾನ್ ಬುದ್ಧರು ಬೇಕೇ ಬೇಕು ಎಂದು ಪ್ರತಿಪಾದಿಸಿದರು.

ಹಿರಿಯ ಪ್ರಾಧ್ಯಾಪಕ ಡಾ.ಜೆ.ಸೋಮಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರ ಕುಮಾರ್, ಡಾ.ಎಂ.ರಾಚಪ್ಪಾಜಿ, ಕಲಾವತಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಗುರುವಾರ 30 ಏಪ್ರಿಲ್ 2026

ಸಾಹಿತ್ಯ ಲೋಕದ ಮರೆಯಲಾಗದ ಮಾಣಿಕ್ಯ ಪ್ರೊ.ಸುಜನಾ

ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ

ಕೆ.ಆರ್.ಪೇಟೆ, ಏ.29– ಕನ್ನಡ ಸಾರಸ್ವತ ಲೋಕದಲ್ಲಿ ಸಹೃದಯತೆ, ಅಂತಃಕರಣ ಮತ್ತು ಮಾನವೀಯ ಮೌಲ್ಯವುಳ್ಳ ಸಾಹಿತ್ಯ ಸೃಷ್ಟಿಸಿದ ಕನ್ನಡ ಸಾಹಿತ್ಯ ಲೋಕದ ಪ್ರಮುಖ ಸಾಹಿತಿಗಳಲ್ಲಿ ಸಾಹಿತಿ ಪ್ರೊ.ಸುಜನಾ ಪ್ರಮುಖರು ಎಂದು ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ ತಿಳಿಸಿದರು.

ಪ್ರೊ.ಸುಜನಾ ಹುಟ್ಟೂರು ತಾಲೂಕಿನ ಹೊಸಹೊಳಲು ಗ್ರಾಮದ ಎಸ್‌ಎಲ್‌ಎನ್ ಸಮುದಾಯ ಭವನದಲ್ಲಿ ಪ್ರೊ.ಸುಜನಾ ಪ್ರತಿಷ್ಠಾನದಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಸಾಹಿತಿ ಪ್ರೊ.ರಾಮೇಗೌಡ (ರಾಗೌ) ಅವರಿಗೆ 'ಸುಜನಾ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

ಮೈಸೂರಿನಲ್ಲಿ ಹಾಸ್ಟೆಲ್ ದಿನಗಳಿಂದಲೂ ಸುಜನಾ ಮತ್ತು ನಾನು ಆತ್ಮೀಯ ಗೆಳೆಯರು. ಅಂತರ್ಮುಖಿ ವ್ಯಕ್ತಿತ್ವ, ಭಾವನಾ ಜೀವಿ, ಅಂದುಕೊಂಡಿದ್ದನ್ನು ಸಾಧಿಸಬೇಕೆಂಬ ಛಲ ಹೊಂದಿದ್ದರು. ಕಷ್ಟದಲ್ಲಿರುವ ವರಿಗೆ ನೆರವಾಗಬೇಕೆಂಬ ಮನೋಭಾವ ಉಳ್ಳವರಾಗಿದ್ದರು. ಸಮಾಜದ ಚಿಕಿತ್ಸಕ ಮನೋಭಾವದ ವಿಮರ್ಶಕರಾಗಿದ್ದರು. ಅವರಲ್ಲಿದ್ದ ಅಂತಃಕರಣವೇ ಯುಗಸಂಧ್ಯಾ ಎಂಬ ಮೇರು ಮಹಾಕಾವ್ಯ ಬರೆಯಲು ಪ್ರೇರಣೆ ನೀಡಿರಬಹುದು ಎಂದ ಅವರು, ಸುಜನಾ ಹೆಸರಿನಲ್ಲಿ ಪ್ರತಿಷ್ಠಾನದ ಚೊಚ್ಚಲ ಪ್ರಶಸ್ತಿ ಅವರ ಶಿಷ್ಯ ರಾಗೌ ಅವರಿಗೆ ಪ್ರದಾನ ಮಾಡುತ್ತಿರುವುದು ಶ್ರೇಷ್ಠ ಆಯ್ಕೆಯಾಗಿದೆ ಎಂದರು.



ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ.ರಾಗೌ ಅವರನ್ನು ಸನ್ಮಾನಿಸಲಾಯಿತು.

> ನನ್ನ ಗುರು ಸುಜನಾ ಭಾವನಾ ಜೀವಿ. ಪ್ರಕೃತಿಂರೊಂದಿಗೆ ಲೀನರಾಗುವ ಗುಣವುಳ್ಳವರು. ನನ್ನ ಗುರುಗಳ ಹೆಸರಿನಲ್ಲಿ ಮೊದಲ ಪ್ರಶಸ್ತಿ ಸಿಕ್ಕಿರುವುದು ನನ್ನ ಪುಣ್ಯ
> – ಪ್ರೊ.ರಾಗೌ, ಹಿರಿಯ ಸಾಹಿತಿ.

ಹೊಸಹೊಳಲು ಗ್ರಾಮದ ಎಸ್.ನಾರಾಯಣಶೆಟ್ಟಿ ಅವರು ಸುಜನಾ ಕಾವ್ಯನಾಮದಿಂದ ಪ್ರಸಿದ್ಧರಾದವರು. ಇವರು ರಚಿಸಿದ ಯುಗಸಂಧ್ಯಾ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿರುವುದು ಇವರ ಗಟ್ಟಿತನದ ಸಾಹಿತ್ಯ ಕೃಷಿಗೆ ಹಿಡಿದ ಕೈಗನ್ನಡಿಯಾಗಿದೆ. ಸುಜನಾ ಅವರು ಕುವೆಂಪು ಅವರ ಅತ್ಯಾಪ್ತ ಶಿಷ್ಯರಲ್ಲಿ ಒಬ್ಬರಾಗಿದ್ದರು. ಕುವೆಂಪು ಅವರು ಬದುಕಿರುವವರೆವಿಗೂ ಅವರ ಒಡನಾಟದಲ್ಲಿ ಇದ್ದು ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಜೊತೆಗೆ ಪುತಿನ ಅವರ ಒಡನಾಡಿಯಾಗಿಯೂ ಕೆಲಸ ಮಾಡಿ ಅವರ ಬಗ್ಗೆ ಸಾಕಷ್ಟು ಲೇಖನಗಳನ್ನು ಬರೆಯುವ ಮೂಲಕ ಪುತಿನ ಹೆಸರನ್ನು ಹೆಚ್ಚು ಪ್ರಚುರಗೊಳಿಸುವಲ್ಲಿ ಸುಜನಾ ಅವರ ಪಾತ್ರ ಹಿರಿಯದಾಗಿತ್ತು. ಹೀಗೆ ಹಿರಿಯ ಸಾಹಿತಿಗಳ ಸೇವೆ ಸಲ್ಲಿಸಿದ ಪ್ರೊ.ಸುಜನಾ ಕನ್ನಡ ಸಾಹಿತ್ಯ ಲೋಕ ಎಂದೂ ಮರೆಯಲಾಗದ ಮಾಣಿಕ್ಯ ಎಂದರು.

ಇದೇ ವೇಳೆ ಸುಜನತ್ವ ಕೃತಿಯನ್ನು ಮಾಜಿ ಶಾಸಕ ಎಂ.ಡಿ.ಲಕ್ಷ್ಮೀ ನಾರಾಯಣ್ ಬಿಡುಗಡೆಗೊಳಿಸಿ ಮಾತನಾಡಿ, ಸುಜನಾ ಹೆಸರಿನಲ್ಲಿ ಭವನ ನಿರ್ಮಿಸಿದರೆ ಅನುದಾನ ಸಂಗ್ರಹಿಸಿ ಕೊಡಲಾಗುವುದು ಎಂದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ, ಶಾಸಕ ಹೆಚ್.ಟಿ.ಮಂಜು, ಪ್ರೊ.ಮೈಸೂರು ಕೃಷ್ಣಮೂರ್ತಿ, ನಿವೃತ್ತ ಪ್ರಾಂಶುಪಾಲ ಡಾ.ಮ.ರಾಮಕೃಷ್ಣ ಮಾತನಾಡಿದರು. ಪ್ರೊ.ಸುಜನಾ ಪ್ರತಿಷ್ಠಾನದ ಅಧ್ಯಕ್ಷ ಕೆ.ಎಸ್.ಸೋಮಶೇಖರ್, ಕಾರ್ಯಾಧ್ಯಕ್ಷ ಬಳ್ಳೇಕೆರೆ ಮಂಜುನಾಥ್, ಪ್ರೊ.ಕೆ.ನರಸಿಂಹಮೂರ್ತಿ, ಪ್ರೊ.ಜಿ.ಟಿ.ವೀರಪ್ಪ, ಸೋಮಶೇಖರ ಗೌಡ, ಸುಜನಾ ಸಹೋದರ ಡಾ.ಶ್ರೀನಿವಾಸ ಶೆಟ್ಟಿ, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ಕುಮಾರಸ್ವಾಮಿ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹೆಚ್.ಕೆ. ಅಶೋಕ್, ಕೆ.ಕಾಳೇಗೌಡ, ಮಂಜುನಾಥ್, ವಾಸು, ಪೂರ್ಣಚಂದ್ರ ತೇಜಸ್ವಿ, ಚಾ.ಶಿ.ಜಯಕುಮಾರ್, ಸುಕನ್ಯಾ, ರಂಗನಾಥ್, ಕೆ.ಜೆ.ನಾರಾಯಣ, ಮಂಜುನಾಥ್, ಕೆ.ಆರ್.ನೀಲಕಂಠ, ಪದ್ಮೇಶ್, ಶಿವಕುಮಾರ್, ಜಿ.ಎಸ್.ಮಂಜು, ಹೆಚ್.ಆರ್.ನಂದಕುಮಾರ್, ಅ.ಮಾ. ಶ್ಯಾಮೇಶ್, ಲೋಕೇಶ್, ರಂಗಸ್ವಾಮಿ, ಸುಜನಾ ಕುಟುಂಬದ ಸದಸ್ಯರು ಇನ್ನಿತರರಿದ್ದರು.

ಹೆಣ್ಣು ಭ್ರೂಣ ಹತ್ಯೆ ತಡೆ ಪ್ರಕರಣ ಸಂಬಂಧ

ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಅಧಿಕಾರಿಗಳ ಭೇಟಿ, ಪರಿಶೀಲನೆ

ಪಾಂಡವಪುರ, ಏ.29– ಹೆಣ್ಣು ಭ್ರೂಣ ಹತ್ಯೆ ಹಾಗೂ ಬಾಲ್ಯ ವಿವಾಹ ತಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಟ್ಟಣದ ಹಲವು ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಬುಧವಾರ ತಹಸೀಲ್ದಾರ್ ಬಸವರೆಡ್ಡಪ್ಪ ರೋಣದ ಹಾಗೂ ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ಇದಕ್ಕೂ ಮುನ್ನಾ ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಹೆಣ್ಣು ಭ್ರೂಣ ಹತ್ಯೆ ಹಾಗೂ ಬಾಲ್ಯ ವಿವಾಹ ತಡೆ ಸಂಬಂಧ ಸಭೆ ನಡೆಸಿದ ಅಧಿಕಾರಿಗಳು ಬಳಿಕ ಪಟ್ಟಣದ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಮೊದಲಿಗೆ ಸಾರ್ವಜನಿಕ ಆಸ್ಪತ್ರೆ ಸ್ತ್ರೀರೋಗ ತಜ್ಞೆ ಡಾ.ಶಿಲ್ಪ ನಡೆಸುತ್ತಿರುವ ಶ್ರೀಸಾಯಿ ಸ್ಕ್ಯಾನಿಂಗ್ ಸೆಂಟರ್‌ಗೆ ಅಧಿಕಾರಿಗಳು ಭೇಟಿ ನೀಡಿದರು. ಈ ವೇಳೆ ಹಲವು ಮೂಲ ಸೌಕರ್ಯ ಕೊರತೆ ಇರುವುದನ್ನು ಗುರ್ತಿಸಿದ ಅಧಿಕಾರಿಗಳು ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ಈಗಾಗಲೇ ಇಲ್ಲಿವರೆಗೆ ಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಿರುವ ಮಾಹಿತಿಯನ್ನು ನೀಡುವಂತೆ ಸೂಚನೆ ನೀಡಿ ತೆರಳಿದರು. ನಂತರ ಬಾಬು ಆಸ್ಪತ್ರೆ ಹಾಗೂ ಇತಿಹಾಸ್ ಕ್ಲಿನಿಕ್‌ಗೆ ತೆರಳಿ ಪರಿಶೀಲಿಸಿದ ಅಧಿಕಾರಿಗಳು ಸ್ಕ್ಯಾನಿಂಗ್ ಮಾಡಿರುವ ಮಾಹಿತಿ ನೀಡುವಂತೆ ಸೂಚಿಸಿದರು.



ಸ್ಕ್ಯಾನಿಂಗ್ ಸೆಂಟರ್‌ಗೆ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ. ಅರವಿಂದ್ ಮಾತನಾಡಿ, ಹೆಣ್ಣು ಭ್ರೂಣ ಹತ್ಯೆ ಹಾಗೂ ಬಾಲ್ಯ ವಿವಾಹ ತಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಟ್ಟಣದ 3 ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ತೆರಳಿ ಪರಿಶೀಲಿಸಿದ್ದೇವೆ. ಜೊತೆಗೆ ವೈದ್ಯರಿಗೆ ಸ್ಕ್ಯಾನಿಂಗ್ ನಡೆಸಿರುವ ಮಾಹಿತಿ ನೀಡುವಂತೆ ಸೂಚಿಸಿದ್ದೇವೆ ಎಂದರು.

ಹೆಣ್ಣು ಭ್ರೂಣ ಹತ್ಯೆ ಕಾನೂನು ಬಾಹಿರ. ಮಹಾ ಪಾಪದ ಕೃತ್ಯವಾಗಿದೆ. ಹೆಣ್ಣು ಮನೆಯ ಕಣ್ಣಿದ್ದಂತೆ. ಅವರನ್ನು ರಕ್ಷಣೆ ಮಾಡಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿ. ಯಾವುದೇ ಕಾರಣಕ್ಕೂ ಹೆಣ್ಣು ಭ್ರೂಣ ಹತ್ಯೆ ಮಾಡಬಾರದು. ಹೆಣ್ಣು ಭ್ರೂಣ ಹತ್ಯೆ ಹಾಗೂ ಬಾಲ್ಯ ವಿವಾಹ ತಡೆಗೆ ಸಾರ್ವಜನಿಕರ ಸಹಕಾರ ಅಗತ್ಯ ಎಂದರು.

ಈ ವೇಳೆ ಹಿಂದುಳಿದ ವರ್ಗಗಳ ಇಲಾಖೆ ಸಹಾಯಕ ನಿರ್ದೇಶಕ ನಂದಕುಮಾರ್, ಸಿಡಿಪಿಒ ಪೂರ್ಣಿಮಾ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಕೋಮಲ, ಸಬ್ ಇನ್ಸ್‌ಪೆಕ್ಟರ್ ಧರ್ಮಪಾಲ್ ಸೇರಿದಂತೆ ಹಲವರಿದ್ದರು.

ಚಿನಕುರಳಿ: ಹಿರಿಯ ವಿದ್ಯಾರ್ಥಿಗಳಿಂದ ಶಿಕ್ಷಕರಿಗೆ ಅಭಿನಂದನೆ



ಚಿನಕುರಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ 2000–2003ನೇ ಸಾಲಿನ ಹಿರಿಯ ವಿದ್ಯಾರ್ಥಿಗಳು ಗುರುವಂದನೆ ಮತ್ತು ಸ್ನೇಹಿತರ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಂಡು ಶಾಲೆಯ ಶಿಕ್ಷಕರನ್ನು ಅಭಿನಂದಿಸಿದರು. ಈ ವೇಳೆ ಶಾಲೆಯ ಎಲ್ಲಾ ಹಿರಿಯ ವಿದ್ಯಾರ್ಥಿಗಳು ಹಾಜರಿದ್ದರು.

ವ್ಯಕ್ತಿ ನಾಪತ್ತೆ



ಮಂಡ್ಯ, ಏ.29– ತಾಲೂಕಿನ ಉಮ್ಮಡಹಳ್ಳಿ ಗ್ರಾಮದ ನಿವಾಸಿ ಹುಚ್ಚೇಗೌಡ (60) ನಾಪತ್ತೆಯಾಗಿರುವ ಸಂಬಂಧ ಮಂಡ್ಯ ಸೆಂಟ್ರಲ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ದೂ.ಸಂ: 08232–224500, 08232–221345 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಐಟಿಐಗೆ ಅರ್ಜಿ ಆಹ್ವಾನ

ಮಂಡ್ಯ, ಏ.29– ಶ್ರೀರಂಗಪಟ್ಟಣ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಪ್ರಸಕ್ತ ಸಾಲಿನ ಪ್ರವೇಶಕ್ಕಾಗಿ www.cite. karnataka.gov.in ವೆಬ್‌ಸೈಟ್ ಮೂಲಕ ಮೇ 8ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9980111058, 9844474056 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಮಂಡ್ಯ ವಿವಿಯಲ್ಲಿ ನವವಸಂತ–2026 ಅನಾವರಣ

ವಿವಿಯ ನೂತನ ದ್ವಾರ ಲೋಕಾರ್ಪಣೆ: ಶಾಸಕ ರವಿಕುಮಾರ್ ಗಣಿಗ

ಮಂಡ್ಯ, ಏ.29– ಖಾಸಗಿ ಕಾಲೇಜುಗಳಲ್ಲಿ ನಡೆಯುವ ಫೆಸ್ಟ್ ಮಾದರಿ ಇದೇ ಮೊದಲ ಬಾರಿಗೆ ಸರ್ಕಾರಿ ಶೈಕ್ಷಣಿಕ ಸಂಸ್ಥೆಯಾದ ನಗರದ ಮಂಡ್ಯ ವಿಶ್ವವಿದ್ಯಾಲಯವು ನವವಸಂತ–2026 ಹಾಗೂ ಯುವ ಸಂಭ್ರಮ ಕಾರ್ಯಕ್ರಮಕ್ಕೆ ಸಜ್ಜುಗೊಂಡಿದ್ದು, ಏ.30ರಂದು ಚಾಲನೆ ದೊರೆಯಲಿದೆ ಎಂದು ಶಾಸಕ ರವಿಕುಮಾರ್ ಗಣಿಗ ತಿಳಿಸಿದರು.

ಮಂಡ್ಯ ವಿವಿ ನೂತನ ಮುಖ್ಯ ಪ್ರವೇಶ ದ್ವಾರ ಉದ್ಘಾಟನೆ ಹಾಗೂ ನವ ವಸಂತ–2026, ಮಂಡ್ಯ ಯುವ ಸಂಭ್ರಮ ಕುರಿತು ಮಂಡ್ಯ ಬಾಯ್ಸ್ ಕಾಲೇಜು ವಿಶ್ವಗಂಗೋತ್ರಿ ಕ್ಯಾಂಪಸ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕಾಗಿ ಮಂಡ್ಯ ವಿವಿ ಆವರಣದಲ್ಲಿ ಆಕರ್ಷಕ ವೇದಿಕೆ ನಿರ್ಮಿಸಲಾಗಿದ್ದು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರನ್ನು ಬಿಸಿಲಿನಿಂದ ರಕ್ಷಿಸಲು ಬೃಹತ್ ಶಾಮಿಯಾನ ಹಾಕಲಾಗಿದೆ. ಈ ಕಾರ್ಯಕ್ರಮದೊಂದಿಗೆ ನಾನಾ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯೂ ನಡೆಯಲಿದೆ. ಅಲ್ಲದೇ 3 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ವಿವಿಯ ಪ್ರವೇಶ ದ್ವಾರ, ಜೋಡಿ ರಸ್ತೆ ಉದ್ಘಾಟಿಸಲಾಗುವುದು. ತಲಾ 2 ಕೋಟಿ ರೂ. ವೆಚ್ಚದ ಮೌಲ್ಯಮಾಪನ ಭವನ, ಒಳಾಂಗಣ ಕ್ರೀಡಾಂಗಣದ ಮುಂದುವರೆದ ಕಾಮಗಾರಿಗೆ ಭೂಮಿ ಪೂಜೆಗೂ ತಯಾರಿ ನಡೆದಿದೆ ಎಂದು ವಿವರಿಸಿದರು.



ಸುದ್ದಿಗೋಷ್ಠಿಯಲ್ಲಿ ಶಾಸಕ ರವಿಕುಮಾರ್ ಗಣಿಗ ಮಾತನಾಡಿದರು.

ಮಂಡ್ಯ ವಿವಿ ವ್ಯಾಪ್ತಿಯ 46 ಪದವಿ ಪೂರ್ವ, ಪದವಿ ಮತ್ತು ಸ್ನಾತಕೋತ್ತರ ಕಾಲೇಜುಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪ್ರತಿಭೆ ಅನಾವರಣ ಗೊಳಿಸುವರು. 40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸುವರು ಎಂದರು.

ಕಾರ್ಯಕ್ರಮ ಬೆಳಗ್ಗೆ 10.30ರಿಂದ ಸಂಜೆ 5 ಗಂಟೆವರೆಗೆ ನಡೆಯಲಿದ್ದು, ನಟ, ನೃತ್ಯ ನಿರ್ದೇಶಕ ನಾಗೇಂದ್ರಪ್ರಸಾದ್, ಗಾಯಕ ಚಂದನ್‌ಶೆಟ್ಟಿ ಮತ್ತು ತಂಡ, ನಟ ಕಿಶನ್ ಬೆಳಗಲಿ ತಂಡ 2 ತಾಸಿಗೂ ಹೆಚ್ಚು ಕಾಲ ಸಂಗೀತ, ನೃತ್ಯ ಕಾರ್ಯಕ್ರಮ ಪ್ರಸ್ತುತ ಪಡಿಸುವರು ಎಂದರು.

ಕಾರ್ಯಕ್ರಮ ಸ್ಟಾರ್ಟಪ್ ಐಡಿಯಾಗಳ ಅನಾವರಣಕ್ಕೂ ವೇದಿಕೆಯಾಗಲಿದ್ದು, ನಾನಾ ಕಂಪನಿಗಳು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಐಡಿಯಾಗಳನ್ನು ಕೇಳಲಿದ್ದಾರೆ. ಆಯ್ಕೆಯಾದ ಒಳ್ಳೆಯ ಐಡಿಯಾ ಅನುಷ್ಠಾನಕ್ಕೆ ಬಂಡವಾಳ ಹೂಡಲಿದ್ದಾರೆ. ಈ ಮೂಲಕ ವಿದ್ಯಾರ್ಥಿಗಳನ್ನು ಉದ್ಯಮಿಗಳಾಗಿಸುವ ವಿನೂತನ ಪ್ರಯತ್ನ ನಡೆದಿದೆ ಎಂದರು.

ಸಚಿವ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸುವರು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಜಿಲ್ಲೆಯ ಎಲ್ಲಾ ಶಾಸಕರು, ಎಂಎಲ್ಸಿಗಳು ಭಾಗವಹಿಸುವರು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಮಂಡ್ಯ ವಿವಿ ಕುಲಪತಿ ಪ್ರೊ.ಕೆ.ಶಿವಚಿತ್ತಪ್ಪ, ಮಂಡ್ಯ ವಿಶ್ವವಿದ್ಯಾಲಯದ ಕುಲಸಚಿವ(ಆಡಳಿತ) ಎಂ.ಪಿ.ಕೃಷ್ಣಕುಮಾರ್, ಪ್ರೊ.ಜಿ.ವಿ. ವೆಂಕಟರಮಣ ಹಾಜರಿದ್ದರು.

ಮೂರನೇ ಪುಟದಿಂದ

ಸೌಂಡ್ ಅಂಡ್ ಲೈಟ್ ವ್ಯವಸ್ಥೆ

ತಂತ್ರಜ್ಞಾನ ಹಳೆಯದಾಗಿರುವ ಕಾರಣ ನೂತನ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್ ಅಳವಡಿಸಲು ತೀರ್ಮಾನಿಸಲಾಗಿದೆ.

ಮೈಸೂರು ಅರಮನೆ ಮಂಡಳಿ ಅಧ್ಯಕ್ಷರಾಗಿರುವ ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಅಧ್ಯಕ್ಷತೆಯಲ್ಲಿ ನಡೆದಿರುವ ಮಂಡಳಿಯ ಸಭೆಯಲ್ಲಿ ಈ ಸಂಬಂಧ ನಿರ್ಧಾರ ಕೈಗೊಳ್ಳಲಾಗಿದೆ. ಮೈಸೂರು ಅರಮನೆ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಗಳೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ಮಂಡಳಿಯ ಉಪ ನಿರ್ದೇಶಕ ಸುಬ್ರಹ್ಮಣ್ಯ ಅವರಿದ್ದ ಸಭೆಯಲ್ಲಿ ಈ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ನೂತನ ತಂತ್ರಜ್ಞಾನದ ಸೌಂಡ್ ಲೈಟ್ ಅಳವಡಿಸಲು ತೀರ್ಮಾನಿಸಲಾಗಿದೆ.

ಹೈ–ರೆಸಲ್ಯೂಷನ್ ಪ್ರೊಜೆಕ್ಟರ್‌ಗಳು, ಲೇಸರ್ ದೀಪಗಳು, ಮೂವಿಂಗ್ ಹೆಡ್‌ಗಳೊಂದಿಗೆ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಹೆಚ್ಚು ಕ್ರಿಯಾತ್ಮಕ 3ಡಿ ಮ್ಯಾಪಿಂಗ್ ಪ್ರೊಜೆಕ್ಷನ್ ಇರುವ ಸೌಂಡ್ ಅಂಡ್ ಲೈಟ್ ಅಳವಡಿಸಲಾಗುತ್ತಿದೆ.

ನೂತನ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್ ಅಳವಡಿಸಲು ಡಿಪಿಆರ್ (ಸಮಗ್ರ ಯೋಜನಾ ವರದಿ) ಸಿದ್ಧಪಡಿಸಲು ಟೆಂಡರ್ ಕರೆಯಲಾಗಿತ್ತು. ಈ ಸಂಬಂಧ ಕಂಪನಿಯೊಂದು 13 ಕೋಟಿ ರೂಪಾಯಿಗಳ ಡಿಪಿಆರ್ ಕೂಡ ಸಿದ್ಧಪಡಿಸಿ ಮೈಸೂರು ಅರಮನೆ ಮಂಡಳಿಗೆ ಸಲ್ಲಿಸಿದೆ.

ಆದರೆ, ಈಗ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರ ಸೂಚನೆ ಮೇರೆಗೆ ಡಿಪಿಆರ್ ಪರಿಶೀಲನೆ ನಡೆಸುವಂತೆ ಮೈಸೂರು ಅರಮನೆ ಮಂಡಳಿಯು ಲೋಕೋಪಯೋಗಿ ಇಲಾಖೆಗೆ ರವಾನೆ ಮಾಡಿದೆ. ಡಿಪಿಆರ್‌ನಲ್ಲಿ ಉಲ್ಲೇಖಿಸಿರುವಂತೆ ಎಸ್‌ಆರ್ ರೇಟ್ (ಶೆಡ್ಯೂಲ್ ಆಫ್ ರೇಟ್) ನಿಖರ ಹಾಗೂ ವಾಸ್ತವವಾಗಿದೆಯೇ ಎಂದು ಲೋಕೋಪಯೋಗಿ ಇಲಾಖೆ ಯವರು ಪರಿಶೀಲನೆ ನಡೆಸಲಿದ್ದಾರೆ. ನೂತನ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್‌ಗೆ ಅಳವಡಿಸಲು ಉಲ್ಲೇಖಿಸಿ ರುವ ಪ್ರೊಜೆಕ್ಟರ್‌ಗಳು ಸೇರಿದಂತೆ ಇತರೆ ಎಲೆಕ್ಟ್ರಾನಿಕ್ ಉಪಕರಣಗಳ ಬೆಲೆಯ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಅಧ್ಯಯನ ನಡೆಸಿ ಇವುಗಳ ನಿಖರವಾದ ಬೆಲೆಯ ಬಗ್ಗೆ ಮೈಸೂರು ಅರಮನೆ ಮಂಡಳಿಗೆ ವರದಿ ಸಲ್ಲಿಸಲಿದ್ದಾರೆ.

ತರುವಾಯ ಲೋಕೋಪಯೋಗಿ ಇಲಾಖೆಯವರು ನೀಡುವ ವರದಿ ಬಗ್ಗೆ ಮೈಸೂರು ಅರಮನೆ ಮಂಡಳಿಯಲ್ಲಿ ಪರಿಶೀಲನೆ ಮಾಡಿ ಸಮಿತಿಯೊಂದನ್ನು ರಚನೆ ಮಾಡಲಿದ್ದಾರೆ. ಡಿಪಿಆರ್‌ನಲ್ಲಿ ಉಲ್ಲೇಖಿಸಿರುವ ಬೆಲೆ ನಿಖರವಾಗಿದೆ ಎಂದು ಮಂಡಳಿಗೆ ಖಾತ್ರಿಯಾದ ನಂತರ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ. ಸೌಂಡ್ ಅಂಡ್ ಲೈಟ್ ಅಳವಡಿಸುವ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಗುತ್ತಿಗೆ ಪಡೆಯುವ ಕಂಪನಿಯು ಮೂರು ತಿಂಗಳ ಒಳಗೆ ಸೌಂಡ್ ಅಂಡ್ ಲೈಟ್ ಅಳವಡಿಸಲಿದೆ.

ಡಿಪಿಆರ್ ಬಗ್ಗೆ ತಜ್ಞ ಎಲೆಕ್ಟ್ರಿಕಲ್ ಇಂಜಿನಿಯರ್‌ಗಳ ಜೊತೆ ಸಮಾಲೋಚನೆ

ಹೈದರಾಬಾದ್‌ನ ಗೋಲ್ಕೊಂಡಾ ಪೋರ್ಟ್ ಮಾದರಿಯಲ್ಲಿ ಮೈಸೂರು ಅರಮನೆಗೆ ನೂತನ ತಂತ್ರಜ್ಞಾನದ ಸೌಂಡ್ ಅಂಡ್ ಲೈಟ್ ಅಳವಡಿಸುವ ಸಂಬಂಧ ಸಲ್ಲಿಸಿರುವ ಡಿಪಿಆರ್ ಪರಿಶೀಲನೆ ಮಾಡುವಂತೆ ಮೈಸೂರು ಅರಮನೆ ಮಂಡಳಿ ನಮ್ಮ ಇಲಾಖೆಗೆ ರವಾನೆ ಮಾಡಿದೆ ಎಂದು ಲೋಕೋಪಯೋಗಿ ಇಲಾಖೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ವಿ.ಮಹದೇವಸ್ವಾಮಿ ತಿಳಿಸಿ ದ್ದಾರೆ. ನೂತನ ತಂತ್ರಜ್ಞಾನದ ಧ್ವನಿ ಮತ್ತು ಬೆಳಕಿಗೆ 13 ಕೋಟಿ ವೆಚ್ಚದ ಅಂದಾಜು ಮಾಡಲಾಗಿದೆ. ಈ ಸಂಬಂಧ ತಜ್ಞ ಎಲೆಕ್ಟ್ರಿಕಲ್ ಇಂಜಿನಿಯರ್‌ಗಳ ಜೊತೆ ಸಮಾಲೋಚನೆ ನಡೆಸಿ ಮಂಡಳಿಗೆ ಸಲ್ಲಿಸುತ್ತೇವೆ. ಇದಕ್ಕೆ ಅವಶ್ಯವಿರುವ ಪ್ರೊಜೆಕ್ಟರ್‌ಗಳನ್ನು ಬೇರೆಡೆಯಿಂದ ಆಮದು ಮಾಡಿಕೊಳ್ಳಬೇಕಿರುವ ಕಾರಣ ಅದರ ನಿಖರ ಬೆಲೆಯ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು ಎಂದು ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ದಾಖಲೆಯ ಶೇ. 90 ಮತದಾನ

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭೆಗೆ ಎರಡು ಹಂತಗಳಲ್ಲಿ ನಡೆದ ಮತದಾನ ಪೂರ್ಣಗೊಂಡಿದ್ದು, ಶೇ 92.47ರಷ್ಟು ಮಂದಿ ತಮ್ಮ ಹಕ್ಕು ಚಲಾಯಿಸಿದ್ದಾರೆ. ಇದು ದಾಖಲೆಯಾಗಿದೆ ಎಂದು ಚುನಾವಣಾ ಆಯೋಗ ಬುಧವಾರ ಘೋಷಿಸಿದೆ.

ಇಂದು (ಏ. 29) ನಡೆದ ಎರಡನೇ ಹಂತದ ವೇಳೆ ಶೇ 91.66 ರಷ್ಟು ಮಂದಿ ಮತದಾನ ಮಾಡಿದ್ದಾರೆ. ಏಪ್ರಿಲ್ 23ರಂದು ಮೊದಲ ಹಂತದಲ್ಲಿ ಶೇ 93.19 ರಷ್ಟು ಮತದಾನವಾಗಿತ್ತು. ಬಂಗಾಳದಲ್ಲಿ ಒಟ್ಟು 6.81 ಕೋಟಿ ಮತದಾರರಿದ್ದಾರೆ. ಎರಡೂ ಹಂತಗಳ ಒಟ್ಟು ಮತದಾನದ ಪ್ರಮಾಣವು ಶೇ 92.47ರಷ್ಟಾಗಿದೆ ಎಂದು ಆಯೋಗ ತಿಳಿಸಿದೆ. ಈ ಹಿಂದೆ 2011ರ ವಿಧಾನಸಭಾ ಚುನಾವಣೆಯಲ್ಲಿ ಶೇ 84.72ರಷ್ಟು ಮತದಾನವಾಗಿತ್ತು. ಈವರೆಗೆ ಅದೇ ದಾಖಲೆಯಾಗಿ ಉಳಿದಿತ್ತು. ಎರಡನೇ ಹಂತದ ಮತದಾನದ ವೇಳೆ ಪುರುಷರಿಗೆ (ಶೇ 91.07) ಹೋಲಿಸಿದರೆ, ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ (ಶೇ 92.28ರಷ್ಟು) ಪಾಲ್ಗೊಂಡಿದ್ದಾರೆ. ಎರಡನೇ ಹಂತದ ಮತದಾನದ ವೇಳೆ ಕೆಲವೆಡೆ ಘರ್ಷಣೆ ಹಾಗೂ ಹಿಂಸಾಚಾರದ ಘಟನೆಗಳು ವರದಿಯಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

ಕಾಂಪೌಂಡ್ ಕುಸಿದು 7 ಮಂದಿ ಸಾವು



ಪರಿಹಾರ ಘೋಷಿಸಿದ್ದಾರೆ. ಇನ್ನು ಮುಂದೆ ಎಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸ್ಥಳದಲ್ಲೇ ತಾಕೀತು ಮಾಡಿದ್ದಾರೆ. ನಂತರ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿ, ಅಗತ್ಯ ಚಿಕಿತ್ಸಾ ವ್ಯವಸ್ಥೆಯನ್ನು ಉಚಿತವಾಗಿ ಕಲ್ಪಿಸುವಂತೆ ಸೂಚನೆ ನೀಡಿದ್ದಾರೆ.

ಡಿಸಿಎಂ ಪರಿಶೀಲನೆ: ಮತ್ತೊಂದೆಡೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಅಧಿಕಾರಿಗಳಿಂದ ವಿಷಯ ಕಲೆ ಹಾಕಿದ ಬಳಿಕ ಪರಿಹಾರ ಕಾರ್ಯಗಳನ್ನು ತ್ವರಿತವಾಗಿ ಕೈಗೆತ್ತಿಕೊಳ್ಳುವಂತೆ ತಾಕೀತು ಮಾಡಿದ್ದಾರೆ. ಆಸ್ಪತ್ರೆಗೂ ಸಹ ಭೇಟಿ ನೀಡಿ ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದ್ದಾರೆ. ಬೆಂಗಳೂರಲ್ಲಿ ಉರಿ ಬಿಸಿಲು ಬೇಗೆ ನಡುವೆ ನಲುಗಿದ್ದ ಜನರಿಗೆ ಇಂದಿನ ಮಳೆ ತಂಪನ್ನೆರೆಯಿತಾದರೂ, ರಾಜಧಾನಿಯ ಪರಿಸ್ಥಿತಿ ಸಂಪೂರ್ಣ ಅಸ್ತವ್ಯಸ್ತವಾಗಿದೆ. ವಿವಿಧೆಡೆ 50ಕ್ಕೂ ಅಧಿಕ ಮರಗಳು ಧರೆಗುರುಳಿವೆ. ನೂರಾರು ವಾಹನಗಳು ಜಖಂಗೊಂಡಿವೆ. ರಸ್ತೆಗಳು ಕೆರೆ–ಕಾಲುವೆ ಗಳಾಗಿ ಪರಿವರ್ತನೆಯಾಗಿದೆ. ಹಲವೆಡೆ ವಾಹನಗಳು ಕೊಚ್ಚಿ ಹೋಗಿವೆ. ಚರ್ಚ್ ಸ್ಟ್ರೀಟ್‌ನಲ್ಲಿರುವ ಅತ್ಯಂತ ಜನಪ್ರಿಯ ಬುಕ್‌ವಾರ್ಮ್ ಪುಸ್ತಕ ಮಳಿಗೆಗೆ ನೀರು ನುಗ್ಗಿ 14 ಲಕ್ಷ ಮೌಲ್ಯದ 5000 ಪುಸ್ತಕಗಳು ನಾಶವಾಗಿವೆ.

ವಿಧಾನಸೌಧಕ್ಕೂ ನುಗ್ಗಿದ ಮಳೆ ನೀರು: ಭಾರೀ ಮಳೆಯಿಂದಾಗಿ ರಸ್ತೆ ಚರಂಡಿಗಳು ಉಕ್ಕಿ ಹರಿದರೆ, ಅತ್ತ ಶಕ್ತಿ ಕೇಂದ್ರ ವಿಧಾನ ಸೌಧಕ್ಕೂ ಮಳೆ ನೀರು ನುಗ್ಗಿದೆ. ವಿಪಕ್ಷನಾಯಕ ಆರ್.ಅಶೋಕ್ ಅವರ ಕೊಠಡಿಗೆ ನೀರು ನುಗ್ಗಿದ್ದು, ಹಲವು ವಸ್ತುಗಳು ಹಾನಿಗೀಡಾಗಿವೆ. ಬೆಂಗಳೂರಿನಲ್ಲಿ ಕೇವಲ 2 ಗಂಟೆ ಅವಧಿಯಲ್ಲಿ 78 ಮಿ.ಮೀ. ಮಳೆಯಾಗಿದೆ. ರಸ್ತೆಯಲ್ಲಿ ನುಗ್ಗಿದ ಭಾರೀ ನೀರಿನಲ್ಲಿ ವಾಹನಗಳು ಹಲವೆಡೆ ಕೆಟ್ಟು ನಿಂತಿವೆ. ಹವಾಮಾನ ಇಲಾಖೆ ಇಂದು ಮತ್ತು ನಾಳೆ ಭಾರೀ ಮಳೆ ಬೀಳುವ ಬಗ್ಗೆ ಸೂಚನೆ ನೀಡಿತ್ತು. ಅದರಂತೆ ನಾಳೆಯೂ ಭಾರೀ ಮಳೆಯಾಗುವ ಸಾಧ್ಯತೆಗಳಿವೆ. ಕೆಲವೇ ಗಂಟೆಗಳು ಸುರಿದ ಭಾರೀ ಗಾಳಿ–ಮಳೆಯಿಂದಾಗಿ ಬೆಂಗಳೂರಿನ ತಾಪಮಾನ ಗಣನೀಯವಾಗಿ ಇಳಿಕೆಯಾಗಿದೆ.

ಗೊಂದಲ ಪರಿಹಾರ

ಏನೆಲ್ಲಾ ಬದಲಾವಣೆ ಆಗಬಹುದು ಎಂಬ ಸುಳಿವು ನೀಡಿದ್ದಾರೆ. ಒಂದು ವೇಳೆ ಮಂತ್ರಿಮಂಡಲ ಪುನರ್ ರಚನೆ ತೀರ್ಮಾನ ಕೈಗೊಂಡರೆ, ನಮ್ಮ ಹಿತ ಕಾಪಾಡಿ ಎಂದೂ ಮನವಿ ಮಾಡಿದ್ದಾರೆ.

ಕಳೆದ ಮೂರು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿರುವ ಮೂವರು ಸಚಿವರು, ಖರ್ಗೆ ಅವರನ್ನಷ್ಟೇ ಅಲ್ಲದೆ, ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರುಗಳನ್ನೂ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಚಾಮರಾಜನಗರ ಸಂಸದ ಅನಿಲ್ ಬೋಸ್ ಅವರ ದೆಹಲಿ ನಿವಾಸದಲ್ಲಿ ಈ ಸಚಿವರು ಮಂಗಳವಾರ ತಡರಾತ್ರಿವರೆಗೂ ಸಭೆ ನಡೆಸಿದ್ದಲ್ಲದೆ, ಮರುದಿನ ಬೆಳಗ್ಗೆಯೂ ಅಲ್ಲಿಯೇ ಮಾತುಕತೆ ಮುಂದುವರೆಸಿದ್ದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಸಹ ಉಪಸ್ಥಿತರಿದ್ದರು.

ದಲಿತರಿಗೆ ಒಳ ಮೀಸಲಾತಿ ಕಲ್ಪಿಸಿರುವ ಹಿನ್ನೆಲೆಯಲ್ಲಿ ದಾವಣಗೆರೆ ಅಥವಾ ಹುಬ್ಬಳ್ಳಿಯಲ್ಲಿ ಬೃಹತ್ ಸಮಾವೇಶ ನಡೆಸಲು ಈ ನಾಯಕರು ನಿರ್ಧರಿಸಿದ್ದಾರೆ.

ಸಮಾವೇಶದಲ್ಲಿ ಕಾಂಗ್ರೆಸ್ ನಮಗೆ ಒಳ ಮೀಸಲಾತಿ ಕಲ್ಪಿಸಿದೆ, ಇದೀಗ ಮುಖ್ಯಮಂತ್ರಿ ಸ್ಥಾನಕ್ಕೆ ದಲಿತ ವ್ಯಕ್ತಿಯ ಆಯ್ಕೆಗೆ ಒತ್ತಾಯಿಸಿ ನಿರ್ಣಯ ಕೈಗೊಂಡು ವರಿಷ್ಠರಿಗೆ ಸಂದೇಶ ರವಾನಿಸಲು ನಿರ್ಧಾರ ಕೈಗೊಳ್ಳಲಾಗುತ್ತದೆ. ಕಾಂಗ್ರೆಸ್ ವತಿಯಿಂದಲೇ ಸಮಾವೇಶ ನಡೆಸುವುದಾಗಿ ತಿಳಿಸಿರುವ ನಾಯಕರು, ಇದನ್ನು ತಡೆಯುವ ಪ್ರಯತ್ನ ಮಾಡದಂತೆ ನೋಡಿಕೊಳ್ಳಬೇಕೆಂದು ಕೋರಿದ್ದಾರೆ.

ಸ್ಥಳೀಯ ಆಡಳಿತ ಎಚ್ಚರಗೊಳ್ಳಲಿ

ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ನವೀಕರಣ ವೇಳೆ ಗೋಡೆ ಕುಸಿದು ಒಬ್ಬ ಕಾರ್ಮಿಕ ಮೃತಪಟ್ಟಿದ್ದ. ಇಂತಹ ಅನೇಕ ದುರ್ಘಟನೆಯ ಉದಾಹರಣೆಗಳು ಭೂತಕಾಲದಲ್ಲಿ ಇದ್ದಾಗ್ಯೂ ಆಡಳಿತ ಮಾತ್ರ ಅವುಗಳಿಂದ ಪಾಠ ಕಲಿಯುತ್ತಿಲ್ಲ ಎಂಬ ಆರೋಪ ಕೇಳಿ ಬರುತ್ತಿದೆ.

ಇದಿಷ್ಟು ಪಾರಂಪಕ ಕಟ್ಟಡಗಳ ವಿಚಾರವಾದರೆ, ಮೈಸೂರು ನಗರದಲ್ಲಿರುವ ಹಳೇ ಮನೆಗಳು ಹಾಗೂ ಇತರ ನಿರ್ಮಾಣಗಳ ಬಗ್ಗೆಯೂ ಗಮನ ನೀಡಬೇಕಾಗಿದೆ. ಇತ್ತೀಚೆಗಷ್ಟೇ ಕಳೆದ ಫೆಬ್ರವರಿಯಲ್ಲಿ ಸಯ್ಯಾಜಿ ರಾವ್ ರಸ್ತೆಯ ಶತಮಾನದಷ್ಟು ಹಳೆಯದಾದ ಖಾಸಗಿ ಕಟ್ಟಡದ ಸಜ್ಜಾ ಕುಸಿದಿತ್ತು. ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿರಲಿಲ್ಲ. ಹಾಗಾಗಿ ಹಳೆಯ ಖಾಸಗಿ ಕಟ್ಟಡಗಳ ಬಗ್ಗೆಯೂ ಸ್ಥಳೀಯ ಆಡಳಿತ ನಿಗಾ ವಹಿಸುವ ಅಗತ್ಯವಿದೆ.

ಜೊತೆಗೆ ಮೈಸೂರು ನಗರದಲ್ಲಿನ ಮಳೆ ನೀರು ಚರಂಡಿಯಲ್ಲಿ ಹೂಳೆತ್ತುವ ಕಾರ್ಯ ಸಮರ್ಪಕ ರೀತಿಯಲ್ಲಿ ವೇಗವಾಗಿ ನಡೆಯುತ್ತಿಲ್ಲ. ಹಲವೆಡೆ ಮಳೆ ನೀರು ಚರಂಡಿಯಲ್ಲಿ ಗಿಡಗಂಟಿಗಳು ಬೆಳೆದು ನಿಂತಿವೆ. ಹೂಳೆತ್ತುವ ಜೊತೆಗೆ ಗಿಡಗಂಟಿ ತೆರವು ಸಮರ್ಪಕವಾಗಿ ನಡೆಯದೇ ಇದ್ದರೆ ಮಳೆ ನೀರು ರಸ್ತೆಗಳಲ್ಲಿ ಹರಿಯುವುದನ್ನು ತಪ್ಪಿಸಲಾಗಲ್ಲ.

ಇದರಿಂದ ರಸ್ತೆಗಳು ಜಲಾವೃತಗೊಳ್ಳಲಿದ್ದು, ಜನ–ವಾಹನಗಳ ಸುಗಮ ಸಂಚಾರಕ್ಕೆ ತೊಡಕುಂಟು ಆಗಲಿದೆ. ಇದರಿಂದ ಸಾವು ನೋವು ಎದುರಾಗುವ ಅಪಾಯದ ಸಾಧ್ಯತೆಯನ್ನು ತಳ್ಳಿ ಹಾಕಲಾಗದು. ಹಾಗಾಗಿ ಮುನ್ನೆಚ್ಚರಿಕೆಯಾಗಿ ಮಳೆ ನೀರು ಚರಂಡಿಗಳನ್ನು ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಸಜ್ಜುಗೊಳಿಸಲು ಮೈಸೂರು ಮಹಾನಗರ ಪಾಲಿಕೆ ಕ್ರಮ ವಹಿಸಬೇಕಿದೆ. ಅಲ್ಲದೆ, ಮೈಸೂರು ಗ್ರಾಮಾಂತರ ಪ್ರದೇಶದಲ್ಲೂ ಆಯಾಯ ಸ್ಥಳೀಯ ಆಡಳಿತ ಈ ನಿಟ್ಟಿನಲ್ಲಿ ಎಚ್ಚೆತ್ತುಕೊಳ್ಳಬೇಕಿದೆ.

ಮೈಸೂರು ನಗರದ ಹಲವು ರಸ್ತೆಗಳಲ್ಲಿ ಗುಂಡಿಗಳು ಇದ್ದು, ಮಳೆ ಬಂದಾಗ ನೀರು ತುಂಬಿ ಅವುಗಳು ಸರಿಯಾಗಿ ಕಾಣಿಸದ ಹಿನ್ನೆಲೆಯಲ್ಲಿ ವಾಹನ ಸವಾರರು ಅಪಾಯಕ್ಕೆ ಸಿಲುಕುವ ಸಾಧ್ಯತೆಯೂ ಇದೆ. ಈ ನಿಟ್ಟಿನಲ್ಲಿಯಾದರೂ ಮೈಸೂರು ಮಹಾನಗರ ಪಾಲಿಕೆ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ವಹಿಸಬೇಕಿದೆ. ಆಯಾ ವಲಯ ಕಚೇರಿ ಈ ಸಂಬಂಧ ಜವಾಬ್ದಾರಿ ಹೊತ್ತುಕೊಂಡು ತನ್ನ ವ್ಯಾಪ್ತಿಯ ರಸ್ತೆಗಳನ್ನು ಸುರಕ್ಷತೆಗೆ ಪೂರಕವಾಗಿ ನಿರ್ವಹಿಸಬೇಕಿದೆ.

ಜೊತೆಗೆ ಹಾನಿಗೊಳಗಾದ ವಿದ್ಯುತ್ ಕೇಬಲ್, ವಿದ್ಯುತ್ ಕಂಬಗಳ ಮಾಹಿತಿ ಕಲೆ ಹಾಕಿ ದುರಸ್ತಿಗೂ ಸೆಸ್ಕ್ ಸೇರಿದಂತೆ ಸ್ಥಳೀಯ ಆಡಳಿತ ಕಾರ್ಯನಿರ್ವಹಿಸಬೇಕಿದೆ. ಜೊತೆಗೆ ನೆಲಕ್ಕುರುಳುವ ಪರಿಸ್ಥಿತಿಯಲ್ಲಿರುವ ಮರಗಳ ಬಗ್ಗೆಯೂ ಸರ್ವೆ ನಡೆಸಿ ಸೂಕ್ತ ಕ್ರಮ ವಹಿಸಬೇಕಿದೆ.

ತಮಿಳುನಾಡಿನಲ್ಲಿ ಕಾಂಗ್ರೆಸ್ ಮೈತ್ರಿಗೆ ಗೆಲುವು

ಡಿಎಂಕೆ ಪ್ಲಸ್ 120ರಿಂದ 140 ಸ್ಥಾನಗಳನ್ನು ಪಡೆಯಲಿದೆ. ಅಸ್ಸಾಂನಲ್ಲಿ ಬಿಜೆಪಿ ಪ್ಲಸ್ 88ರಿಂದ 100 ಸ್ಥಾನಗಳನ್ನು ಪಡೆಯಲಿದೆ ಎಂದು ಎಕ್ಸಿಟ್ ಪೋಲ್ ಸಮೀಕ್ಷೆಗಳು ಅಂದಾಜಿಸಿವೆ.

ಬಂಗಾಳದಲ್ಲಿ ಬಿಜೆಪಿ ಬಾಸ್?

ಟೈಮ್ಸ್ ನೌ: ಬಿಜೆಪಿ 138–159. ಟಿಎಂಸಿ: 131–152. ಇತರೆ 01
ಮ್ಯಾಟ್ರಿಜ್: ಬಿಜೆಪಿ 146–161. ಟಿಎಂಸಿ: 125–140. ಇತರೆ 6–10
ಪಿ–ಮಾರ್ಕ್: ಬಿಜೆಪಿ 150–175. ಟಿಎಂಸಿ: 118–138.. ಕಾಂಗ್ರೆಸ್ 2–6..ಇತರೆ 00
ಸ್ಮಾರ್ಟ್ ಪೋಲ್: ಬಿಜೆಪಿ 154.. ಟಿಎಂಸಿ: 136. ಕಾಂಗ್ರೆಸ್: 1. ಇತರೆ: 3
ಪೀಪಲ್ಸ್ ಪಲ್ಸ್: ಬಿಜೆಪಿ : 95–110.. ಟಿಎಂಸಿ: 177–187.. ಕಾಂಗ್ : 1–3. ಇತರೆ : 1
ಪ್ರಜಾ ಪೋಲ್: ಬಿಜೆಪಿ : 178–208. ಟಿಎಂಸಿ: 85–110. ಇತರೆ : 0–5
ಪೋಲ್ ಆಫ್ ಪೋಲ್ಸ್: ಬಿಜೆಪಿ : 143. ಟಿಎಂಸಿ: 144. ಇತರೆ : 5

ಕೇರಳಂನಲ್ಲಿ ಕಾಂಗ್ರೆಸ್?

ಸ್ಮಾರ್ಟ್ ಪೋಲ್: ಯುಡಿಎಫ್: 85.. ಎಲ್‌ಡಿಎಫ್ : 51.. ಬಿಜೆಪಿ: 3. ಇತರೆ: 1
ಎಕ್ಸಿಸ್ ಮೈ ಇಂಡಿಯಾ: ಎಲ್‌ಡಿಎಫ್ 49–62. ಯುಡಿಎಫ್ 78–90. ಬಿಜೆಪಿ 0–3.. ಇತರೆ 00
ಟೈಮ್ಸ್ ನೌ: ಎಲ್‌ಡಿಎಫ್ 52–61.. ಯುಡಿಎಫ್ 72–84. ಬಿಜೆಪಿ 3–7.. ಇತರೆ 00
ಮ್ಯಾಟ್ರಿಜ್: ಎಲ್‌ಡಿಎಫ್: 60–65.. ಯುಡಿಎಫ್:70–75.. ಬಿಜೆಪಿ : 3–5. ಇತರೆ : 2–4
ಪಿ–ಮಾರ್ಕ್: ಎಲ್‌ಡಿಎಫ್: 62–69. ಯುಡಿಎಫ್ : 71–79. ಬಿಜೆಪಿ 1–4. ಇತರೆ : 0–3
ಟಿಎಪಿ: ಎಲ್‌ಡಿಎಫ್ 63–67. ಯುಡಿಎಫ್ 66–72.. ಬಿಜೆಪಿ 6–10. ಇತರೆ 0–3
ಪೋಲ್ ಆಫ್ ಪೋಲ್ಸ್: ಯುಡಿಎಫ್: 70. ಎಲ್‌ಡಿಎಫ್ : 60.. ಬಿಜೆಪಿ: 2. ಇತರೆ : 1

ಅಸ್ಸಾಂನಲ್ಲಿ ಮತ್ತೆ ಬಿಜೆಪಿ?

ಎಕ್ಸಿಸ್ ಮೈ ಇಂಡಿಯಾ : ಎನ್‌ಡಿಎ: 88–100. ಇಂಡಿ: 24–36..
ಪೋಲ್ ಡೈರಿ: ಎನ್‌ಡಿಎ 86–101. ಕಾಂಗ್ರೆಸ್: 15–26. ಎಯುಡಿಎಫ್ 2–5..
ಟೈಮ್ಸ್ ನೌ: ಬಿಜೆಪಿ: 88–101. ಕಾಂಗ್ರೆಸ್: 23–33. ಇತರೆ : 02–05
ಪಿಮಾರ್ಕ್: ಬಿಜೆಪಿ: 82–94. ಕಾಂಗ್ರೆಸ್: 30–40. ಇತರೆ : 1–5..
ಮ್ಯಾಟ್ರಿಜ್: ಬಿಜೆಪಿ: 85–95.. ಕಾಂಗ್ರೆಸ್: 25–32. ಇತರೆ : 6–12..
ಪೋಲ್ ಆಫ್ ಪೋಲ್ಸ್: ಎನ್‌ಡಿಎ–87–101.. ಕಾಂಗ್ರೆಸ್: 19–30. ಇತರೆ 02–06

ಪುದುಚೇರಿಯಲ್ಲಿ ಎನ್‌ಡಿಎ?

ಎಕ್ಸಿಸ್ ಮೈ ಇಂಡಿಯಾ: ಬಿಜೆಪಿ: 16–20.. ಕಾಂಗ್ರೆಸ್: 6–8. ಇತರೆ: 3–7
ಪೀಪಲ್ಸ್ ಪಲ್ಸ್: ಬಿಜೆಪಿ: 16–19. ಕಾಂಗ್ರೆಸ್: 10–12. ಇತರೆ: 1–2
ಪ್ರಜಾ ಪೋಲ್: ಬಿಜೆಪಿ: 19–25.. ಕಾಂಗ್ರೆಸ್: 6–8. ಇತರೆ: 00
ಪೋಲ್ ಆಫ್ ಪೋಲ್ಸ್: ಬಿಜೆಪಿ: 17. ಕಾಂಗ್ರೆಸ್: 09. ಇತರೆ: 03

ಗುಪ್ತಚರ ಮುಖ್ಯಸ್ಥರ ಬದಲಾವಣೆ!


ಅಧಿಕಾರ ಹಸ್ತಾಂತರ ಕೂಗು ಹಾಗೂ ಮಂಗಳೂರು ಗಲಭೆಗೆ ಸಂಬಂಧಿಸಿದಂತೆ ನಿಖರ ಮಾಹಿತಿ ನೀಡಲಿಲ್ಲ ಎಂಬ ಕಾರಣಕ್ಕೆ ಇವರನ್ನು ಗೃಹ ಇಲಾಖೆ ಕಾರ್ಯದರ್ಶಿಯಾಗಿ ನೇಮಿಸಿ ಈ ಸ್ಥಾನಕ್ಕೆ ಹೇಮಂತ್ ನಿಂಬಾಳ್ಕರ್ ಅವರನ್ನು ತಂದರು.

ಕಳೆದ ಜೂನ್‌ನಲ್ಲಿ ಸಂಭವಿಸಿದ ಆರ್‌ಸಿಬಿ ವಿಜಯೋತ್ಸವ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ನಿಂಬಾಳ್ಕರ್ ಅವರನ್ನು ತೆರವುಗೊಳಿಸಿ ಎಸ್.ರವಿ ನೇಮಕ ಮಾಡಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯ ಮಂತ್ರಿಯಾಗಲು ಬೆಂಗಳೂರು, ಹೈದರಾಬಾದ್, ದೆಹಲಿಯಲ್ಲಿ ಗೌಪ್ಯ ಸಭೆಗಳನ್ನು ನಡೆಸಿ ಪಕ್ಷದ ರಾಷ್ಟ್ರೀಯ ಮುಖಂಡರನ್ನು ಭೇಟಿ ಮಾಡಿ ತಮ್ಮ ಹಕ್ಕೊತ್ತಾಯ ಮಂಡಿಸಿದ ವಿಷಯ.

ಅಲ್ಲದೆ, ಪಂಚತಾರಾ ಹೋಟೆಲ್‌ಗಳಲ್ಲಿ ಮತ್ತು ಖಾಸಗಿ ನಿವಾಸಗಳಲ್ಲಿ ಪಕ್ಷದ ಶಾಸಕರ ಜೊತೆ ಶಿವಕುಮಾರ್ ನಡೆಸಿದ ಗೌಪ್ಯಸಭೆಗಳ ಕುರಿತು ಮಾಹಿತಿ ನೀಡುವಲ್ಲಿ ರವಿ ವಿಫಲರಾದರು.

ದೆಹಲಿಯಲ್ಲಿ ಮೂರು ದಿನ ಶಿವಕುಮಾರ್ ಬಿಡಾರ ಹೂಡಿ, ಪಕ್ಷದ ಉನ್ನತ ನಾಯಕರನ್ನು ಭೇಟಿ ಮಾಡಿ ಮಾತನಾಡಿದ ಕುರಿತು ಮಾಹಿತಿ ನೀಡುವಲ್ಲಿಯೂ ವಿಫಲರಾದರೆಂಬ ಕಾರಣಕ್ಕೆ ರವಿ ಅವರನ್ನು ಬದಲಾಯಿಸಿ, ಲಾಬೂ ರಾಮ್ ಅವರನ್ನು ತರಲಾಗಿದೆ ಎನ್ನಲಾಗಿದೆ.

ಇಂದು ವಿದ್ಯುತ್ ವ್ಯತ್ಯಯ



ಮೈಸೂರು: ಮಯೂರ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಏ.30ರಂದು ಬೆಳಗ್ಗೆ 10ರಿಂದ ಸಂಜೆ 5 ರವರೆಗೆ ನಿಸರ್ಗ ಲೇಔಟ್, ಚಿತ್ರಾ ರೆಸಿಡೆನ್ಸಿ, ಗಣಪತಿ ದೇವಸ್ಥಾನ ಸುತ್ತಮುತ್ತ, ಲಕ್ಷ್ಮೀಕಾಂತನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನಕಲಿ ದಾಖಲೆ ಸೃಷ್ಟಿಸಿ ಆರೋಪಿಗೆ ಜಾಮೀನು ನೀಡಿ ಕೋರ್ಟ್‌ಗೆ ವಂಚನೆ

ಕೇಸ್ ದಾಖಲು: ಆರೋಪಿ ಬಂಧನ

ಮೈಸೂರು, ಏ.29(ಜಿಎ)–ಸಾವಿರ ರೂ. ಆಸೆಗೆ ನಕಲಿ ಆಧಾರ್ ಕಾರ್ಡ್ ಮತ್ತು ಆರ್‌ಟಿಸಿ ಸೃಷ್ಟಿಸಿ ಆರೋಪಿಯೊಬ್ಬನಿಗೆ ಜಾಮೀನು ನೀಡಿದ ವ್ಯಕ್ತಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆಡಳಿತಾಧಿಕಾರಿ ಲಕ್ಷ್ಮಿಪುರಂ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿನ ಗೊಗೆ ಹೆಬ್ಬಾಳ ಗ್ರಾಮದ ಶಿವರಾಜ, ನ್ಯಾಯಾಲಯಕ್ಕೆ ನಕಲಿ ಆಧಾರ್ ಕಾಡ್ ಮತ್ತು ಆರ್‌ಟಿಸಿ ನೀಡಿ ಕೋರ್ಟ್‌ಗೆ ನಂಬಿಕೆ ದ್ರೋಹ ಮಾಡಿರುವ ಸಂಬಂಧ ಈಗ ಆತನ ಬಂಧಿಸಲಾಗಿದೆ.

7ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು, ಮೈಸೂರು ಸೆನ್ ಠಾಣೆ ಮೊಕದ್ದಮೆ 162/2024 ಸಂಖ್ಯೆಯ ಎಸ್‌ಸಿ ನಂ 50/2025ರ 2ನೇ ಆರೋಪಿ ಶ್ರೇಯಸ್‌ಗೌಡ ಎಂಬುವನಿಗೆ 2025ರ ಜೂನ್ 28ರಂದು ತುಮಕೂರು ಜಿಲ್ಲೆ ತುರುವೆಕೆರೆ ತಾಲೂಕಿನ ಮಾಯಸಂದ್ರದ ಮುಳ್ಳೂರು ಗ್ರಾಮದ ದೊಡ್ಡ ರಾಮಣ್ಣ ಎಂಬುವರ ಹೆಸರಿನ ಆಧಾರ್ ಕಾರ್ಡ್ ಮತ್ತು ಮಲ್ಲೂರು ಗ್ರಾಮದ ಸರ್ವೆ ನಂ.5ರ ಆರ್‌ಟಿಸಿಯನ್ನು ಹಾಜರುಪಡಿಸಿ ಜಾಮೀನು ನೀಡಿದ್ದು, ಅನುಮಾನ ಬಂದ ಹಿನ್ನೆಲೆಯಲ್ಲಿ ಸದರಿ ಜಾಮೀನುದಾರರಿಗೆ ನ್ಯಾಯಾಲಯಕ್ಕೆ ಹಾಜರಾಗುವಂತೆ ಕೋರ್ಟ್ ಏ.28ಕ್ಕೆ ಸಮನ್ಸ್ ನೀಡಿತ್ತು. ಈ ಹಿನ್ನೆಲೆಯಲ್ಲಿ ದೊಡ್ಡ ರಾಮಣ್ಣ ಎಂಬುವರು ನ್ಯಾಯಾಲಯಕ್ಕೆ ಹಾಜರಾಗಿ ತಾನು ಯಾರಿಗೂ ಯಾವುದೇ ಜಾಮೀನು ನೀಡಿರುವುದಿಲ್ಲ. ನನ್ನ ಹೆಸರಿನ ಆಧಾರ್ ಕಾರ್ಡ್ ಮತ್ತು ಜಮೀನಿನ ಆರ್‌ಟಿಸಿ ಯಾರೋ ನಕಲು ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿ ಜಾಮೀನು ಕೊಡಿಸಿರುವುದಾಗಿ ತಿಳಿಸಿದ್ದಾರೆ.

ತದನಂತರ ಏ.28ರಂದು ಬೆಳಗ್ಗೆ ನ್ಯಾಯಾಲಯಕ್ಕೆ ಶಿವರಾಜ ಎಂಬಾತ ಹಾಜರಾಗಿ 2025ರ ಜೂನ್ 28ರಂದು ಶ್ರೇಯಸ್‌ಗೌಡ ಎಂಬುವವರಿಗೆ ಜಾಮೀನು ನೀಡುವಾಗ ನಕಲಿ ಆಧಾರ್ ಕಾರ್ಡ್ ಮತ್ತು ಆರ್‌ಟಿಸಿ ನೀಡಿ, ನಾನೇ ಜಾಮೀನು ಕೊಡಿಸಿರುವುದಾಗಿ ಒಪ್ಪಿಕೊಂಡಿದ್ದಾನೆ. ನಾನು ರಾಮನಗರದಲ್ಲಿ ಗಾರೆ ಕೆಲಸ ಮಾಡುತ್ತಿದ್ದು, ಮೇಸ್ತ್ರಿ ರಂಗಸ್ವಾಮಿ ಎಂಬುವರು ಸಾವಿರ ರೂ. ಕೊಡುವುದಾಗಿ ತಿಳಿಸಿ, ನಾವೇ ಆಧಾರ್ ಮತ್ತು ಆರ್‌ಟಿಸಿ ನೀಡುತ್ತೇವೆ. ಕೋರ್ಟ್‌ನಲ್ಲಿ ನಾನೇ ದೊಡ್ಡರಾಮಣ್ಣ ಎಂದು ಹೇಳಿ ಜಾಮೀನು ಕೊಡಿಸುವಂತೆ ತಿಳಿಸಿದರು. ಅಂತೆಯೇ ಅವರೇ ಆಧಾರ್ ಕಾರ್ಡ್ ಮತ್ತು ಆರ್‌ಟಿಸಿಯನ್ನು ಕೋರ್ಟ್ ಗೇಟ್ ಹತ್ತಿರ ಬಂದು ನನಗೆ ಕೊಟ್ಟರು ನಾನು ಅದನ್ನು ನ್ಯಾಯಾಲಯಕ್ಕೆ ನೀಡಿ ಜಾಮೀನು ಕೊಡಿಸಿದ್ದೇನೆ. ನನ್ನನ್ನು ಹುಡುಕಿಕೊಂಡು ಪೊಲೀಸರು ನನ್ನ ಮನೆಗೆ ಹೋಗಿದ್ದರಿಂದ ನಾನೇ ನ್ಯಾಯಾಲಯಕ್ಕೆ ಹಾಜರಾಗುತ್ತೇನೆಂದು ತಿಳಿಸಿ, ಅದರಂತೆ ಅಸಲಿ ಆಧಾರ್ ಕಾರ್ಡ್ ಪ್ರತಿಯನ್ನು ಹಾಜರು ಪಡಿಸಿದ್ದೇನೆ ಎಂದು ತಪ್ಪು ಒಪ್ಪಿಕೊಂಡಿದ್ದಾನೆ.

ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ನ್ಯಾಯಾಲಯದಲ್ಲಿ ಸದರಿ ದಾಖಲೆಗಳನ್ನು ನೈಜವೆಂದು ಹಾಜರುಪಡಿಸಿ ದೊಡ್ಡ ರಾಮಣ್ಣ ಎಂಬುವರ ಹೆಸರಲ್ಲಿ ಆರೋಪಿಯೊಬ್ಬನಿಗೆ ಜಾಮೀನು ನೀಡಿ ನ್ಯಾಯಾಲಯಕ್ಕೆ ನಂಬಿಕೆ ದ್ರೋಹ ಮಾಡಿರುವ ಶಿವರಾಜ ಮೇಲೆ ಕಾನೂನು ಕ್ರಮಕ್ಕೆ ದೂರು ದಾಖಲಿಸುವಂತೆ 7ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ನಿರ್ದೇಶಿಸಿದ್ದಾರೆ. ಸದರಿ ಆರೋಪಿತ ಶಿವರಾಜನನ್ನು ಈಗ ತನಿಖೆ ಸಂಬಂಧ ಪೊಲೀಸ್ ವಶಕ್ಕೆ ನೀಡಲಾಗಿದೆ. ಈ ಸಂಬಂಧ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ತನಿಖೆ ಆರಂಭಿಸಿದ್ದಾರೆ.

ವೈದ್ಯರ ಸಲಹಾ ಚೀಟಿ ಇಲ್ಲದೆ ಎಚ್‌ಎಚ್ 1, ಎಕ್ಸ್ ಅಡಿಯಲ್ಲಿ ಬರುವ ಔಷಧಿಗಳ ಮಾರಾಟ ಮಾಡಬೇಡಿ

● ಔಷಧಿ ಮಾರಾಟಗಾರರಿಗೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಸೂಚನೆ ● ನಿಯಮಾವಳಿ ಮೀರಿ ಮಾರಾಟ ಮಾಡುವ ಔಷಧ ಮಾರಾಟಗಾರರ ವಿರುದ್ಧ ಕ್ರಮದ ಎಚ್ಚರಿಕೆ



ಮೈಸೂರು ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ರಘುಲಾಲ್ ಔಷಧ ಮಾರಾಟ ಕೇಂದ್ರಕ್ಕೆ ನಾರ್ಕೋ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿ, ರಘುಲಾಲ್ ಔಷಧ ಮಳಿಗೆ ಮಾಲೀಕರಾದ ರಾಘವನ್ ಅವರೊಂದಿಗೆ ಚರ್ಚಿಸಿದರು.

> “ಮೈಸೂರು ಜಿಲ್ಲಾಡಳಿತದ ಈ ಕ್ರಮ ಸ್ವಾಗತಾರ್ಹ. ಯುವ ಜನಾಂಗ ದಾರಿ ತಪ್ಪುವುದನ್ನು ತಡೆಯುವ ಬದ್ಧತೆ ಪ್ರತಿಯೊಬ್ಬರಲ್ಲೂ ಇರುವುದು ಅವಶ್ಯ. ಈ ನಿಟ್ಟಿನಲ್ಲಿ ನಮ್ಮ ವ್ಯಾಪಾರ–ವಹಿವಾಟಿನ ಜೊತೆಗೆ ಸರ್ಕಾರದ ನಿಯಮಾವಳಿ ಪಾಲನೆಗೆ ಆದ್ಯತೆ ನೀಡಲಾಗುವುದು. ಯುವ ಜನತೆ ತಮ್ಮ ಉಜ್ವಲ ಭವಿಷ್ಯದತ್ತ ಗಮನ ಹರಿಸಬೇಕಿರುವುದು ಅವಶ್ಯ
> –ರಾಘವನ್, ಮಾಲೀಕರು, ರಘುಲಾಲ್ & ಕಂಪನಿ

ಮೈಸೂರು, ಏ.29–ಔಷಧ ಮಾರಾಟ ಮಳಿಗೆಗಳು, ಔಷಧ ಮತ್ತು ಕಾಂತಿವರ್ಧಕ ಅದಿನಿಯಮ 1940ರ ಅನುಸೂಚಿ ಎಚ್‌ಎಚ್ 1 ಮತ್ತು ಎಕ್ಸ್ ಅಡಿಯಲ್ಲಿ ಬರುವ ಮತ್ತು ಬರಿಸುವ, ಅಮಲುಕಾರಕ, ರೋಗ ನಿರೋಧಕ ಮತ್ತು ಇತರೆ ಔಷಧಿಗಳನ್ನು ವೈದ್ಯರ ಸಲಹಾ ಚೀಟಿ ಇಲ್ಲದೆ ಮಾರಾಟ ಮಾಡುವುದು ಕಂಡು ಬಂದಲ್ಲಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು ಎಂದು ನಾರ್ಕೋ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಎಚ್ಚರಿಕೆ ನೀಡಿದರು.

ಅವರು ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ರಘುಲಾಲ್ ಔಷಧ ಮಾರಾಟ ಕೇಂದ್ರಕ್ಕೆ ಭೇಟಿ ನೀಡಿ ಔಷಧ ಮತ್ತು ಕಾಂತಿ ವರ್ಧಕ ನಿಯಮ 1940ರ ಅನುಸೂಚಿ ಹೆಚ್, ಹೆಚ್1 ಮತ್ತು ಎಕ್ಸ್ ಅಡಿ ಬರುವ ಔಷಧಗಳ ಮಾರಾಟದ ಬಿಲ್‌ಗಳು, ವೈದ್ಯರ ಸಲಹಾ ಚೀಟಿ ಪಡೆದು ಪರಿಶೀಲನೆ ನಡೆಸಿದರು.

ನಂತರ ಮಾತನಾಡಿದ ಅವರು ಅಮಲುಕಾರಕ ರೀತಿಯ ಔಷಧಿಗಳನ್ನು ವೈದ್ಯರ ಸಲಹಾ ಚೀಟಿ ಇಲ್ಲದೆ ಖರೀದಿಸಿ, ಯುವ ಜನತೆ ಮಾದಕ ವಸ್ತುಗಳ ಬಳಕೆಯ ಜಾಲದಲ್ಲಿ ಸಿಲುಕುತ್ತಿದ್ದಾರೆ. ಔಷಧ ಮಾರಾಟ ಮಳಿಗೆಗಳು ಜಿಲ್ಲಾಡಳಿತ ಹಾಗೂ ಸರ್ಕಾರದಿಂದ ನೀಡಲಾಗುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಔಷಧ ಅಂಗಡಿಗಳ ಮುಂಭಾಗದಲ್ಲಿ ಸಾರ್ವಜನಿಕರಿಗೆ ಕಾಣುವ ರೀತಿ ಹೆಚ್, ಹೆಚ್1 ಮತ್ತು ಎಕ್ಸ್ ಅಡಿ ಬರುವ ಔಷಧಿಗಳ ಖರೀದಿಗೆ ವೈದ್ಯರ ಸಲಹಾ ಚೀಟಿ ಕಡ್ಡಾಯ ಎಂದು ಪ್ರಕಟಿಸಬೇಕು ಎಂದು ಸಲಹೆ ನೀಡಿದರು.

ಔಷಧ ಮತ್ತು ಕಾಂತಿ ವರ್ಧಕ ನಿಯಮ 1940ರ ಅನುಸೂಚಿ ಹೆಚ್, ಹೆಚ್1 ಮತ್ತು ಎಕ್ಸ್ ಅಡಿ ಅಲ್ಪ್ರಜೋಲಮ್, ಕೊಡೈನ್, ಟಪೆಂಟಾಲ್ (Alprazolam, codeine, tapentadol) ಸೇರಿದಂತೆ ಒಟ್ಟು 50 ವಿಧದ ಔಷಧಿಗಳಿವೆ. ಅವುಗಳ ಸ್ಟಾಕ್, ಮಾರಾಟ, ವೈದ್ಯರ ಸಲಹಾ ಚೀಟಿ ಹಾಗೂ ಬಿಲ್‌ಗಳ ದಾಖಲೆಗಳನ್ನು ಔಷಧಿ ಮಾರಾಟ ಮಳಿಗೆಗಳು ಇಡಬೇಕು. ಅಧಿಕಾರಿಗಳು ಪರಿಶೀಲನೆಗೆ ಬಂದ ಸಂದರ್ಭದಲ್ಲಿ ಔಷಧ ಮಾರಾಟಗಾರರು ಹಾಜರುಪಡಿಸಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಜಿಲ್ಲೆಯಲ್ಲಿ ಬಹಳಷ್ಟು ಔಷಧಿ ಮಾರಾಟ ಕೇಂದ್ರಗಳಿದ್ದು, ಎಲ್ಲವನ್ನೂ ಔಷಧಿಯ ನಿಯಂತ್ರಕರು ಪರಿಶೀಲಿಸುವುದು ಕಷ್ಟವಾಗಿದ್ದು, ಪೊಲೀಸ್ ಇಲಾಖೆಯಿಂದಲೂ ಪರಿಶೀಲನೆಯನ್ನು ತೀವ್ರಗೊಳಿಸಲಾಗುವುದು ಎಂದರು. ಪರಿಶೀಲನೆಯ ಸಂದರ್ಭದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಸಹಾಯಕ ಔಷಧ ನಿಯಂತ್ರಕರಾದ ಆಶಾ ಲತಾ ಹಾಗೂ ವಾಸೀಂ ಶರೀಫ್ ಉಪಸ್ಥಿತರಿದ್ದರು.

ಮೇ 2ಕ್ಕೆ ಸ್ವರಾನುಭೂತಿ ಸಂಗೀತ ಕಾರ್ಯಕ್ರಮ

ಉಪಶಯನ ಹಾರೈಕೆಗೆ ನೆರವಿನ ಉದ್ದೇಶ

ಮೈಸೂರು, ಏ.29(ಜಿಎ)–ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್ಮೆಂಟ್ ವತಿಯಿಂದ ಉಪಶಮನ ಆರೈಕೆಯ ನೆರವಿಗಾಗಿ ಮೇ 2ರಂದು ಸಂಜೆ 5ರಿಂದ ರಾತ್ರಿ 9ರವರೆಗೆ ನಗರದ ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ಸ್ವರಾನುಭೂತಿ ದೇಣಿಗೆ ಸಂಗ್ರಹ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಿಇಓ ಸವಿತಾ ಸುಳುಗೋಡು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖ್ಯಾತ ಗಾಯಕರಾದ ವಿಜಯ್ ಪ್ರಕಾಶ್ ಹಾಗೂ ಅನುರಾಧ ಭಟ್ ಮೊದಲಾದವರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಈ ವೇಳೆ ಸಂಗ್ರಹವಾದ ಹಣವನ್ನು ಗಂಭೀರ ಅನಾರೋಗ್ಯಕ್ಕೆ ಒಳಗಾಗಿದ್ದು, ಚಿಕಿತ್ಸೆ ಪಡೆಯುತ್ತಿರುವವರಲ್ಲಿ ಉಪಶಮನ ಹಾರೈಕೆ ಅಗತ್ಯವಿರುವವರಿಗೆ ನೆರವು ನೀಡಲು ಬಳಸಲಾಗುವುದು ಎಂದು ತಿಳಿಸಿದರು.

ಏಡ್ಸ್, ಇನ್ನಿತರ ಗಂಭೀರ ಸಮಸ್ಯೆಗಳಿಂದ ಬಳಲುತ್ತ, ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆಯಲಾಗದೇ ಇರುವವರ ಸಂಖ್ಯೆ ಕಡಿಮೆಯೇನಲ್ಲ. ಇಂತಹವರ ನೆರವಿಗೆ ಈ ಉಪಶಮನ ಆರೈಕೆ ಕೇಂದ್ರ ಧಾವಿಸಿ, ಸಾವಿನ ದಿನಗಳನ್ನು ನೆಮ್ಮದಿ, ಘನತೆಯುತವಾಗಿ ಕಳೆಯುವ ಅವಕಾಶ ಕಲ್ಪಿಸುತ್ತಿದೆ. ಸಂಸ್ಥೆಯ ವಾಹನದಲ್ಲಿ ಓರ್ವ ವೈದ್ಯರು, ಓರ್ವ ಸಮಾಲೋಚಕ, ಓರ್ವ ನರ್ಸ್ ಇದ್ದು, ಹಲವಾರು ರೀತಿಯ ಗಾಯಗಳಿಗೆ ತಾವೇ ಡ್ರೆಸ್ಸಿಂಗ್ ಮಾಡಿಕೊಳ್ಳುವುದನ್ನು, ಅಂತಹ ಅನಾರೋಗ್ಯ ಪೀಡಿತರನ್ನು ಹೇಗೆ ನೋಡಿಕೊಳ್ಳಬಹುದೆಂಬ ತರಬೇತಿ ಸಹ ನೀಡುತ್ತಿದ್ದಾರೆ ಎಂದರು. ಸ್ವರಾನುಭೂತಿಗೆ ಗೋಲ್ಡ್–3 ಸಾವಿರ, ಸಿಲ್ವರ್–5 ಸಾವಿರ, ಕಂಚು–1299 ಹಾಗೂ ವಿದ್ಯಾರ್ಥಿಗಳಿಗೆ ಎಂಬ 499 ರೂ. ಟಿಕೆಟ್‌ಗಳಿವೆ. ಆಸಕ್ತರು ಹೆಚ್ಚಿನ ಮಾಹಿತಿಗೆ ದೂ. 96866 66155 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ. ವಿಭಾ, ರಾಮಕೃಷ್ಣ ಮುದ್ರೆ ಉಪಸ್ಥಿತರಿದ್ದರು.

ಮೇ 20ರಿಂದ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

ಬೆಂಗಳೂರು: ವೇತನ ಬಾಕಿ ಪಾವತಿ ಸೇರಿದಂತೆ ಸಾರಿಗೆ ನೌಕರರ ಬೇಡಿಕೆ ಈಡೇರಿಕೆ ಕುರಿತು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರ ಜತೆ ಬುಧವಾರ ನಡೆಸಿದ ಮಾತುಕತೆ ವಿಫಲವಾಗಿದ್ದು, ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಹೇಳಿದೆ.

38 ತಿಂಗಳ ವೇತನ ಬಾಕಿ ನೀಡಬೇಕು. 2024ರ ಜನವರಿಯಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು. ಶೇ 25ರಷ್ಟು ವೇತನ ಹೆಚ್ಚಳ ಮಾಡಬೇಕು. ಇತರೆ ಬೇಡಿಕೆಗಳನ್ನು ಕಾಲಮಿತಿಯ ಒಳಗೆ ಈಡೇರಿಸಬೇಕು ಎಂದು ಸಚಿವರಿಗೆ ಮನವಿ ಮಾಡಿದೆವು. ಅವರು ಶೇ. 7ರಷ್ಟು ವೇತನ ಹೆಚ್ಚಳ ಮಾಡುವುದಾಗಿ, 2025ರ ಏ.1ರಿಂದ ಪರಿಗಣಿಸುವುದಾಗಿ ಹೇಳಿದರು. ಹಾಗಾಗಿ, ಮಾತುಕತೆ ಫಲಪ್ರದವಾಗಲಿಲ್ಲ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷೆ ಜ್ಯೋತಿ ಅನಂತಸುಬ್ಬರಾವ್ ತಿಳಿಸಿದರು.

ಕೋವಿಡ್ ಸಮಯದಲ್ಲಿ ಮೃತಪಟ್ಟವರಿಗೆ ಇದುವರೆಗೂ ಪರಿಹಾರ ನೀಡಿಲ್ಲ. ಈಗಾಗಲೇ ನಿವೃತ್ತರಾದ ನೌಕರರಿಗೆ ಭಾರಿ ಅನ್ಯಾಯವಾಗಿದೆ. ಇಂತಹ ವಿಷಯಗಳಲ್ಲಿ ಸರ್ಕಾರ ಸ್ಪಂದನೆ ತೋರುವ ಬದಲು, ಸಮಯ ವ್ಯರ್ಥ ಮಾಡುತ್ತಿದೆ ಎಂದು ಜ್ಯೋತಿ ದೂರಿದರು.

ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಶ್ರೀನಿವಾಸಮೂರ್ತಿ ನೇತೃತ್ವದ ಸಮಿತಿಯ ಶಿಫಾರಸು ಆಧಾರದಲ್ಲಿ ಹಿಂದಿನ ಬಿಜೆಪಿ ಸರ್ಕಾರ 2023ರ ಮಾರ್ಚ್ 1ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಅಧಿಸೂಚನೆ ಹೊರಡಿಸಿತ್ತು. ಮೂಲವೇತನದ ಶೇ 15ರಷ್ಟು ಪರಿಷ್ಕರಣೆ ಮಾಡಲಾಗಿತ್ತು. ಆದರೆ, ಹೆಚ್ಚುವರಿ ವೇತನ ಬಾಕಿ ಪಾವತಿಸಿರಲಿಲ್ಲ.

ಮಕ್ಕಳು ಸ್ವತಂತ್ರವಾಗಿ ಸಾಧನೆ ಮಾಡಲು ಬಿಡಿ

ಪೋಷಕರಿಗೆ ಮಾಜಿ ಕ್ರಿಕೆಟ್ ಆಟಗಾರ್ತಿ ಕಲ್ಪನಾ ವೆಂಕಟಾಚಾರ್ ಕಿವಿಮಾತು



ಕೆಎಸ್‌ಸಿಎ ಎಂಸಿ ಸದಸ್ಯೆ ಹಾಗೂ ಮಾಜಿ ಕ್ರಿಕೆಟ್ ಆಟಗಾರ್ತಿ ಕಲ್ಪನಾ ವೆಂಕಟಾಚಾರ್ ಮಾತನಾಡಿದರು.

ಮೈಸೂರು, ಏ.29(ವಿವಿಹೆಚ್)– ಕ್ರಿಕೆಟ್ ಎಂಬುದು ಕೇವಲ ಒಂದು ಕ್ರೀಡೆಯಲ್ಲ. ಅದೊಂದು ವ್ಯಕ್ತಿತ್ವದ ವಿಕಸನ, ತಮ್ಮನ್ನು ತಾವು ರೂಪಿಸಿಕೊಳ್ಳುವ ಸಾಧನ ಎಂದು ಕೆಎಸ್‌ಸಿಎ ಎಂಸಿ ಸದಸ್ಯೆ ಹಾಗೂ ಮಾಜಿ ಕ್ರಿಕೆಟ್ ಆಟಗಾರ್ತಿ ಕಲ್ಪನಾ ವೆಂಕಟಾಚಾರ್ ತಿಳಿಸಿದರು.

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ವತಿಯಿಂದ ನಗರದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 'ಮೈಸೂರು ವಲಯ' ಕೆಎಸ್‌ಸಿಎ ಅಕಾಡೆಮಿ 2026–27 ವಾರ್ಷಿಕ ಬೇಸಿಗೆ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಿಕ್ಷಣ ಮತ್ತು ಅದರ ಪ್ರಸ್ತುತ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಅಕಾಡೆಮಿಯನ್ನು ಎಚ್ಚರಿಕೆಯಿಂದ ರೂಪಿಸಲಾಗಿದೆ. ವ್ಯಕ್ತಿತ್ವವನ್ನು ರೂಪಿಸುವುದು, ಗೆಲುವು–ಸೋಲಿನ ಸಂದರ್ಭಗಳನ್ನು ಎದುರಿಸುವ ಮೂಲಕ ಆಟಗಾರರಿಗೆ ಜೀವನ ಕೌಶಲ್ಯಗಳನ್ನು ತಿಳಿಯಲು ಸಹಾಯ ಮಾಡುವುದು ಅಕಾಡೆಮಿಯ ಉದ್ದೇಶವಾಗಿದೆ ಎಂದರು.

ಒಂದು ಕ್ರಿಕೆಟ್ ಶಿಬಿರ ಆಯೋಜಿಸಬೇಕಾದರೆ ಸಪೋರ್ಟ್ ಸ್ಟಾಫ್ ತುಂಬಾ ಅಗತ್ಯ. ಈ ನಿಟ್ಟಿನಲ್ಲಿ ಮೈಸೂರು ವಲಯದಲ್ಲಿ ಎಲ್ಲರೂ 10–15 ವರ್ಷ ಪರಿಣಿತಿ ಪಡೆದವರೇ ನಿಮಗೆ ಸಿಕ್ಕಿದ್ದಾರೆ. ಇವರಿಂದ ಉತ್ತಮ ನಿರ್ದೇಶನಗಳನ್ನು ಪಡೆದುಕೊಳ್ಳಿ. ಅವರಿಂದ ಕಲಿತು, ಉತ್ತಮವಾದ ಕ್ರಿಕೆಟ್ ಅನ್ನು ಪ್ರತಿಭೆಯ ಮೂಲಕ ಹೊರಚೆಲ್ಲಿ ಎಂದು ಹರಸಿದರು.

ಪೋಷಕರು, ಮಕ್ಕಳನ್ನು ಅಂಗಳಕ್ಕೆ ಬಿಟ್ಟು ಮನೆಗೆ ಹೊರಟುಬಿಡಿ, ನೀವು ನೋಡುವುದಕ್ಕೆ ಬರಬೇಡಿ. ನಿಮ್ಮ ಒತ್ತಡವನ್ನು ಮಕ್ಕಳ ಮೇಲೆ ಹಾಕಿ ಅವರ ಆಟವನ್ನು ಹಾಳು ಮಾಡಬೇಡಿ. ಅವರು ಸ್ವತಂತ್ರವಾಗಿ ಕಲಿಯಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ಪೋಷಕರು ಯಾವ ಸಾಧನೆ ಮಾಡಲು ಆಗಿರುವುದಿಲ್ಲವೋ ಅದನ್ನು ಮಕ್ಕಳು ಮಾಡಲಿ. ಹೆಣ್ಣು ಮಕ್ಕಳು ಅಪಾರ ಸಂಖ್ಯೆಯಲ್ಲಿ ಅಕಾಡೆಮಿಗೆ ಸೇರಿರುವುದು ತುಂಬಾ ಸಂತೋಷದ ವಿಷಯವಾಗಿದೆ. ಹೆಣ್ಣು ಮಕ್ಕಳು ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಇಲ್ಲವಾದಲ್ಲಿ ಸ್ಪರ್ಧಾತ್ಮಕ ಯುಗದಲ್ಲಿ ಉಳಿಯಲು ಅಸಾಧ್ಯ. 25 ಮಂದಿಯಲ್ಲಿ 4 ಜನರಿಗೆ ಮಾತ್ರ ರಾಜ್ಯ ಮಟ್ಟದಲ್ಲಿ ಆಡಲು ಅವಕಾಶ ಸಿಗಲಿದೆ. ಇದೊಂದು ಟೀಂ ಗೇಮ್ ಆಗಿದ್ದು, ಒಬ್ಬರಿಗೊಬ್ಬರು ಸಹಕರಿಸುತ್ತಾ, ತಮಗೆ ಸಿಕ್ಕ ಅವಕಾಶವನ್ನು ಸದುಪಯೋಗಡಿಸಿಕೊಂಡು ಉತ್ತಮ ಸಾಧನೆ ಮಾಡಿ ಎಂದು ಕಲ್ಪನಾ ವೆಂಕಟಾಚಾರ್ ಸಲಹೆ ನೀಡಿದರು.

> ಕೆಎಸ್‌ಸಿಎ ವತಿಯಿಂದ ಮೈಸೂರು ವಲಯದಲ್ಲಿ ಆಯೋಜಿಸಲಾಗಿರುವ ವಾರ್ಷಿಕ ಶಿಬಿರ ಏ.27ರಿಂದ ಮೇ ಅಂತ್ಯದವರೆಗೆ ನಡೆಯಲಿದ್ದು, ಪ್ರತಿದಿನ 2 ಅವಧಿಗಳಲ್ಲಿ ಅಭ್ಯಾಸ ನೀಡಲಿದ್ದಾರೆ. ಮೊದಲನೇ ಅವಧಿ ಬೆಳಿಗ್ಗೆ 6.30ರಿಂದ 9ರವರೆಗೆ ಹಾಗೂ ಮಧ್ಯಾಹ್ನ 3ರಿಂದ 5ರವರೆಗೆ ತರಬೇತಿ ಶಿಬಿರ ಇರಲಿದೆ. ಮಂಡ್ಯ, ಚಾಮರಾಜನಗರ ಮತ್ತು ಮೈಸೂರಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದ್ದು, ಒಟ್ಟು 127 ಮಂದಿಯನ್ನು ಆಯ್ಕೆ ಮಾಡಲಾಗಿದೆ. ಇದರಲ್ಲಿ 14 ವರ್ಷದೊಳಗಿನ ಹುಡುಗರು 25, 16 ವರ್ಷದೊಳಗಿನ 27, 19 ವರ್ಷದೊಳಗಿನ 25 ಆಟಗಾರರಿದ್ದರೆ, 15 ವರ್ಷದೊಳಗಿನ ಹುಡುಗಿಯರು 25, 19 ವರ್ಷದೊಳಗಿನ 25 ಆಟಗಾರ್ತಿಯರು ಶಿಬಿರದಲ್ಲಿ ತರಬೇತಿ ಪಡೆಯಲು ಅವಕಾಶ ಗಿಟ್ಟಿಸಿಕೊಂಡಿದ್ದಾರೆ.

ಕೆಎಸ್‌ಸಿಎ ಎಂಸಿ ಸದಸ್ಯ ಅವಿನಾಶ್ ವೈದ್ಯ ಮಾತನಾಡಿ, ನಮ್ಮಲ್ಲಿ ಪರಿಣಿತ ಫಿಸಿಕಲ್ ಟ್ರೈನರ್‌ಗಳು, ಎಸ್ ಅಂಡ್ ಸಿ ಕೋಚ್‌ಗಳು ಮತ್ತು ಪರ್ಫಾರ್ಮೆನ್ಸ್ ಅನಾಲಿಸ್ಟ್‌ಗಳನ್ನು ಹೊಂದಿದ್ದೇವೆ. ಇವರು ಪ್ರಥಮ ದರ್ಜೆ ಕ್ರಿಕೆಟಿಗರು ಮತ್ತು ಐಪಿಎಲ್ ಫ್ರಾಂಚೈಸಿಗಳೊಂದಿಗೆ ಕೆಲಸ ಮಾಡಿದ್ದಾರೆ. ಇವರು ಇಲ್ಲಿನ ಮಕ್ಕಳಿಗೆ ಮಾನಸಿಕ ಮತ್ತು ದೈಹಿಕ ಶಕ್ತಿಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತಾರೆ ಎಂದು ತಿಳಿಸಿದರು.

ಮಾಜಿ ಪ್ರಥಮ ದರ್ಜೆ ಕ್ರಿಕೆಟರ್ ಎ.ವಿ.ಶಶಿಧರ್, ಮೈಸೂರು ವಲಯದ ವಲಯ ಸಂಯೋಜಕ ಎನ್.ಗಿರೀಶ್, ಮೈಸೂರು ವಲಯದ ಅಧ್ಯಕ್ಷ ಟಿ.ರವೀಂದ್ರ, ಮೈಸೂರು ವಲಯದ ಎಂಸಿ ಸದಸ್ಯ ಮತ್ತು ಸಂಚಾಲಕ ಪಿ.ಶ್ರೀನಿವಾಸಪ್ರಸಾದ್ ಉಪಸ್ಥಿತರಿದ್ದರು.

ಶೇ.56ರ ಮೀಸಲಾತಿಯಡಿ ನೇಮಕಾತಿಗಿರುವ ತಡೆಯಾಜ್ಞೆ ತೆರವುಗೊಳಿಸಿ



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ. ಕಾಟೂರು ಮಾತನಾಡಿದರು.

ಮೈಸೂರು, ಏ.29(ಜಿಎ)–ಶೇ.56ರ ಮೀಸಲಾತಿ ಕಾನೂನಿನ ಅಡಿಯಲ್ಲಿ ನೇಮಕಾತಿ ನಡೆಸಲು ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆ ತೆರವುಗೊಳಿಸಲು ರಾಜ್ಯ ಸರ್ಕಾರ ಕಾರ್ಯ ಪ್ರವೃತ್ತವಾಗಬೇಕು ಎಂದು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ 257 ದಿನಗಳ ಅಹೋರಾತ್ರಿ ಹೋರಾಟದ ಫಲವಾಗಿ ಬಿಜೆಪಿ ನೇತೃತ್ವದ ಬಸವರಾಜು ಬೊಮ್ಮಾಯಿ ಸರ್ಕಾರ 2022ರ ಅಕ್ಟೋಬರ್‌ನಲ್ಲಿ ಸುಗ್ರೀವಾಜ್ಞೆ ಮೂಲಕ ಶೇ.50ರಷ್ಟಿದ್ದ ಮೀಸಲಾತಿಯನ್ನು ಶೇ.56ಕ್ಕೆ ಏರಿಕೆ ಮಾಡಿ ಆದೇಶಿಸಿತ್ತು. ನಂತರ 2023ರಲ್ಲಿ ಅಧಿಕಾರಕ್ಕೆ ಬಂದ ಈಗಿನ ಕಾಂಗ್ರೆಸ್ ಸರ್ಕಾರ ಮೊದಲ ಅಧಿವೇಶನದಲ್ಲಿ ಶೇ.56 ಮೀಸಲಾತಿ ಏರಿಕೆ ವಿಷಯವನ್ನು ಚರ್ಚಿಸಿ ಅನುಮೋದನೆ ಪಡೆದು ಕೇಂದ್ರಕ್ಕೆ 9 ಅನುಸೂಚಿಗೆ ಸೇರಿಸಲು, ಪ್ರಸ್ತಾವನೆಯನ್ನು ಕಳುಹಿಸಬೇಕಿತ್ತು. ಆದರೆ ಆ ಕೆಲಸವನ್ನು ಮಾಡದೆ ಕಾಟಾಚಾರಕ್ಕೆ ಕೇಂದ್ರಕ್ಕೆ ಪತ್ರ ಬರೆದು ಕೈಚಲ್ಲಿ ಕುಳಿತು ಬಿಟ್ಟಿತ್ತು ಎಂದರು.

ನಿರುದ್ಯೋಗಿ ಯುವಕರು ಧಾರವಾಡದಲ್ಲಿ ಉದ್ಯೋಗ ನೇಮಕ ಮಾಡಿಕೊಳ್ಳಬೇಕು ಎಂದು ಬೃಹತ್ ಪ್ರತಿಭಟನೆ ಮಾಡಿದ ಮೇರೆಗೆ ರಾಜ್ಯಾ ಸರ್ಕಾರದ ಶೇ.56 ಮೀಸಲಾತಿ ಅಡಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ತೀರ್ಮಾನಿಸಿದ್ದು, ಉಚ್ಚ ನ್ಯಾಯಾಲಯ ಕಳೆದ ವರ್ಷದ ನವೆಂಬರ್ 27ರಂದು ತಡೆಯಾಜ್ಞೆ ನೀಡಿದೆ. ಮುಂಬರುವ ನೇರ ನೇಮಕಾತಿಗಳಲ್ಲಿ ಆಯ್ಕೆಯಾಗುವ ಒಟ್ಟು ಅಭ್ಯರ್ಥಿಗಳ ಪೈಕಿ ಎಸ್‌ಟಿ ಮೀಸಲಾತಿ ಹೆಚ್ಚಳ ಪ್ರಮಾಣದಲ್ಲಿ ಶೇ.6 ಆಯ್ಕೆಯಾಗುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರವನ್ನು ಪ್ರಕರಣ ಇತ್ಯರ್ಥವಾಗುವವರೆಗೂ ಕಾಯ್ದಿರಿಸಿ ಉಳಿದ ಶೇ.94 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರವನ್ನು ನೀಡುವ ಷರತ್ತಿನ ಮೇಲೆ ಹೊಸದಾಗಿ ನೇರ–ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಲು ಅನುಮತಿ ಕೋರಿ ರಾಜ್ಯ ಸರ್ಕಾರವು ಕೋರ್ಟಿಗೆ ಅರ್ಜಿ ಸಲ್ಲಿಸಿರುತ್ತಾರೆ. ಈ ಕುರಿತಂತೆ ಜನವರಿ 20ರಂದು ನಡೆದ ವಿಚಾರಣೆಯಲ್ಲಿ ಕೋರ್ಟ್ ರಾಜ್ಯ ಸರ್ಕಾರದಿಂದ ಸ್ಪಷ್ಟೀಕರಣ ಕೇಳಲಾಗಿದೆ. ಆದರೆ ಫೆಬ್ರವರಿ 12. ಮಾರ್ಚ್–21, ಏಪ್ರಿಲ್–1ರಂದು ನಡೆದ ವಿಚಾರಣೆಗೆ ರಾಜ್ಯ ಸರ್ಕಾರದ ಪರ ಅಡ್ವಕೇಟ್ ಜನರಲ್ ಅವರು ಉದ್ದೇಶ ಪೂರ್ವಕವಾಗಿ ಗೈರಾಗಿದ್ದಾರೆ ಎಂದು ಬೇಸರಿಸಿದರು.


ಶೇ.56 ಮೀಲಾತಿ ಹೆಚ್ಚಳ ಪ್ರಕರಣದ ಮುಂದಿನ ವಿಚಾರಣೆ ಜೂ.15ರಂದು ನಿಗದಿಯಾಗಿದೆ. ರಾಜ್ಯ ಸರ್ಕಾರಕ್ಕೆ ಎಸ್‌ಸಿ, ಎಸ್‌ಟಿ ಬಗ್ಗೆ ನಿಜವಾದ ಕಾಳಜಿ ಇದ್ದರೆ ಅಂದು ಸರ್ಕಾರದ ಪರ ಅಡ್ವಕೇಟ್ ಜನರಲ್ ತಡೆಯಾಜ್ಞೆ ತೆರವುಗೊಳಿಸಲು ಮುಂದಾಗ ಬೇಕೆಂದು ಆಗ್ರಹಿಸುತ್ತೇವೆ.

ರಾಜ್ಯದ ಶೇ.56 ಮೀಸಲಾತಿ ಕಾನೂನನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರ್ಪಡೆಗೊಳಿಸಲು ಮುಖ್ಯಮಂತ್ರಿಗಳು ರಾಜ್ಯ ಸಚಿವ ಸಂಪುಟದ ಪ್ರಮುಖರು ರಾಜ್ಯದಿಂದ ಆಯ್ಕೆಯಾಗಿರುವ ಕೇಂದ್ರ ಸಚಿವರು ಎರಡು ಪಕ್ಷಗಳ ಪ್ರಮುಖ ಸಂಸದರನ್ನು ಒಳಗೊಂಡ ನಿಯೋಗವನ್ನು ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಗೃಹ ಸಚಿವರ ಬಳಿ ಕೊಂಡೊಯ್ದು ಈ ಮೂಲಕ ಈ ಕಾನೂನಿಗೆ ಸಾಂವಿಧಾನಿಕ ರಕ್ಷಣೆ ಒದಗಿಸಬೇಕೆಂದು ಒತ್ತಡ ತರಬೇಕೆಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಪರಶಿವಮೂರ್ತಿ, ಸಿದ್ದರಾಜು, ಶಿವಕುಮಾರಸ್ವಾಮಿ, ಮಂಜುನಾಥ್, ಮಹದೇವಸ್ವಾಮಿ ಇದ್ದರು.


ದೇಶ - ವಿದೇಶ

ಪುರಿ ಜಗನ್ನಾಥ ದೇವಾಲಯದಲ್ಲಿ ವಸ್ತ್ರಸಂಹಿತೆ ಜಾರಿಗೆ ಸಿದ್ಧತೆ

ಒಡಿಶಾ: ದಕ್ಷಿಣ ಭಾರತದ ಹಲವು ಪ್ರಸಿದ್ಧ ದೇವಾಲಯಗಳಲ್ಲಿ ಈಗಾಗಲೇ ಕಟ್ಟುನಿಟ್ಟಾದ ವಸ್ತ್ರಸಂಹಿತೆ ಜಾರಿಯಲ್ಲಿದ್ದು, ಇದೀಗ ಅದೇ ಮಾದರಿಯನ್ನು ಒಡಿಶಾದ ವಿಶ್ವಪ್ರಸಿದ್ಧ ಪುರಿ ಜಗನ್ನಾಥ ದೇವಾಲಯದಲ್ಲೂ ಅಳವಡಿಸಿಕೊಳ್ಳಲು ರಾಜ್ಯ ಸರ್ಕಾರ ಗಂಭೀರ ಆಲೋಚನೆ ನಡೆಸುತ್ತಿದೆ. ದೇವಾಲಯದ ಪಾವಿತ್ರ್ಯತೆಯನ್ನು ಕಾಪಾಡುವ ದೃಷ್ಟಿಯಿಂದ ಭಕ್ತರಿಗೆ ನಿರ್ದಿಷ್ಟ ವಸ್ತ್ರ ಸಂಹಿತೆಯನ್ನು ಕಡ್ಡಾಯಗೊಳಿಸುವಂತೆ ಒಡಿಶಾ ರಾಜ್ಯ ಕಾನೂನು ಆಯೋಗವು ಶಿಫಾರಸು ಮಾಡಿದೆ. ನ್ಯಾಯಮೂರ್ತಿ ಬಿಶ್ವನಾಥ್ ರಾತ್ ನೇತೃತ್ವದ ಕಾನೂನು ಆಯೋಗವು ಈ ಕುರಿತು ವರದಿಯನ್ನು ಸಿದ್ಧಪಡಿಸಿದ್ದು, ಹಿಂದೂ ಸಂಸ್ಕೃತಿ ಮತ್ತು ಸಂಪ್ರದಾಯಕ್ಕೆ ಪೂರಕವಾದ ಉಡುಪುಗಳನ್ನು ಧರಿಸಿದವರಿಗೆ ಮಾತ್ರ ದೇವಾಲಯದೊಳಗೆ ಪ್ರವೇಶ ನೀಡಬೇಕು ಎಂದು ಸಲಹೆ ನೀಡಿದೆ. ಪ್ರಮುಖವಾಗಿ ಮಹಿಳೆಯರು ಜೀನ್ಸ್, ಟಿ–ಶರ್ಟ್ ಅಥವಾ ಶರ್ಟ್ ಧರಿಸಿ ದೇವಾಲಯಕ್ಕೆ ಬರುವುದನ್ನು ನಿಷೇಧಿಸಬೇಕೆಂದು ಆಯೋಗವು ಸರ್ಕಾರಕ್ಕೆ ತಿಳಿಸಿದೆ. ಈ ಹೊಸ ನಿಯಮವನ್ನು ಜಾರಿಗೆ ತರಲು ಶ್ರೀ ಜಗನ್ನಾಥ ದೇವಾಲಯ ಕಾಯ್ದೆಗೆ ಅಗತ್ಯ ತಿದ್ದುಪಡಿ ತರಲು ಕೂಡ ಪ್ರಸ್ತಾಪಿಸಲಾಗಿದೆ.



ಪಾಕಿಸ್ತಾನದಲ್ಲಿ ಪ್ಲಾಸ್ಟಿಕ್ ಬಲೂನ್‌ನಲ್ಲಿ ಅನಿಲ ಸಂಗ್ರಹ



ಕರಾಚಿ: ಅಮೆರಿಕಾ–ಇರಾನ್ ನಡುವಿನ ಯುದ್ಧವು ಹಲವು ದೇಶಗಳ ಜನರ ಜೀವನದ ಮೇಲೆ ತೀವ್ರ ಪರಿಣಾಮ ಬೀರಿದೆ. ವಿಶೇಷವಾಗಿ ಅಡುಗೆ ಅನಿಲದ ಅಭಾವಕ್ಕೆ ಕಾರಣವಾಗಿದೆ. ಈ ಯುದ್ಧದ ಕಾರ್ಮೋಡ ಪಾಕಿಸ್ತಾನದ ಮೇಲೂ ಉಂಟಾಗಿದ್ದು, ಕರಾಚಿಯ ಕೆಲವು ಸ್ಥಳಗಳಲ್ಲಿ ಜನರು ಪ್ಲಾಸ್ಟಿಕ್ ಬಲೂನ್‌ಗಳಲ್ಲಿ ಅಡುಗೆ ಅನಿಲ ಸಂಗ್ರಹಿಸುತ್ತಿದ್ದಾರೆ. ಕರಾಚಿಯ ಓರಂಗಿ ಪಟ್ಟಣ ಪ್ರದೇಶದಲ್ಲಿ, ಅದರಲ್ಲೂ ಮೋಮಿನಾಬಾದ್‌ನಲ್ಲಿ ಈ ಆತಂಕಕಾರಿ ಬೆಳವಣಿಗೆ ವರದಿಯಾಗಿದೆ. ಅಲ್ಲಿನ ನಿವಾಸಿಗಳು ಅಡುಗೆ ಅನಿಲ ಸಮರ್ಪಕವಾಗಿ ದೊರಕದಿರುವುದರಿಂದ ಬೇಸತ್ತು ಪ್ಲಾಸ್ಟಿಕ್ ಬಲೂನ್‌ಗಳ ಮೊರೆ ಹೋಗಿದ್ದಾರೆ. ವಿಶೇಷವಾಗಿ ವಿನ್ಯಾಸಗೊಳಿಸಲಾದ ಪ್ಲಾಸ್ಟಿಕ್ ಬಲೂನ್‌ಗಳಲ್ಲಿ ಅನಿಲ ತುಂಬಿಸಿ, ಒಂದಾದ ಮೇಲೆ ಒಂದು ಮನೆಗಳಲ್ಲಿ ಅಡುಗೆ ಕಾರ್ಯಗಳಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಸ್ಥಳೀಯ ಮಾರುಕಟ್ಟೆಗಳಲ್ಲಿ ಈ ಬಲೂನ್ 1,000 ಪಾಕಿಸ್ತಾನ ರೂಪಾಯಿಯಿಂದ 1,500ಕ್ಕೆ ಲಭ್ಯವಿದ್ದು, ಅವುಗಳಲ್ಲಿ ಅನಿಲ ಭರ್ತಿ ಮಾಡಿ ಒಂದು ಮನೆಯಿಂದ ಇನ್ನೊಂದು ಮನೆಗೆ ರವಾನಿಸುವ ಮೂಲಕ ಬಳಕೆ ಮಾಡಲಾಗುತ್ತಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಪ್ಲಾಸ್ಟಿಕ್ ಬಲೂನ್ ಒಮ್ಮೆ ಭರ್ತಿಯಾದ ಬಳಿಕ, ಅದರ ಸಂಪರ್ಕ ಕಡಿತಗೊಳಿಸಿ ಅಡುಗೆ ಅಗತ್ಯಗಳನ್ನು ಪೂರೈಸಲು ದಿನವಿಡೀ ತಾತ್ಕಾಲಿಕ ಶೇಖರಣಾ ವ್ಯವಸ್ಥೆಯಾಗಿ ಬಳಸಲಾಗುತ್ತಿದೆ ಎಂದು ನಿವಾಸಿಗಳು ತಿಳಿಸಿದ್ದಾರೆ.

ಮದುವೆ ದಿನ ಪಾರ್ಲರ್‌ಗೆ ಹೋಗುತ್ತಿದ್ದಾಗ ರಸ್ತೆಯಲ್ಲಿ ಅಪಘಾತ: ಯುವತಿ ಸಾವು



ಬರಿಯಾರ್‌ಪುರ: ಮದುವೆಗೆ ಸಿದ್ಧವಾಗಲು ಸಡಗರದಿಂದ ಬ್ಯೂಟಿ ಪಾರ್ಲರ್‌ಗೆ ಹೊರಟಿದ್ದ ವಧು, ಮನೆಗೆ ಹೆಣವಾಗಿ ಹಿಂದಿರುಗಿದ ಘೋರ ದುರಂತ ಉತ್ತರ ಪ್ರದೇಶದಲ್ಲಿ ನಡೆದಿದೆ. ಬರಿಯಾರ್‌ಪುರದ ಗೌರ್ ಕೋಥಿ ಗ್ರಾಮದ ರಚನಾ ಪಾಸ್ವಾನ್ (22) ವಿವಾಹವು ಅದೇ ದಿನ ಸಂಜೆ ನಡೆಯಬೇಕಿತ್ತು. ವಧುವಿನ ಅಲಂಕಾರಕ್ಕಾಗಿ ರಚನಾ ತನ್ನ ಕಿರಿಯ ಸಹೋದರನೊಂದಿಗೆ ಬೈಕ್ ನಲ್ಲಿ ಹತ್ತಿರದ ಬ್ಯೂಟಿ ಪಾರ್ಲರ್‌ಗೆ ಹೊರಟಿದ್ದರು. ಆದರೆ ಬೈಕ್ ನಿಯಂತ್ರಣ ತಪ್ಪಿ ಬಿದ್ದಿದೆ. ಎದುರುಗಡೆಯಿಂದ ವೇಗವಾಗಿ ಬಂದ ಟ್ರಕ್ ರಚನಾ ಮೇಲೆ ಹರಿದಿದೆ. ಅಪಘಾತದ ತೀವ್ರತೆಗೆ ರಚನಾ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ತಕ್ಷಣವೇ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ವೈದ್ಯರು ಬಂದಾಗಲೇ ಮೃತಪಟ್ಟಿದ್ದಾರೆ ಎಂದು ಘೋಷಿಸಿದರು. ಮಗಳ ಮದುವೆ ಮುಗಿಸಿ ಬೀಳ್ಕೊಡಬೇಕಿದ್ದ ತಂದೆ ಮತ್ತು ಕುಟುಂಬಸ್ಥರು ಈ ಸುದ್ದಿಯನ್ನು ಕೇಳಿ ದಿಗ್ಭ್ರಾಂತರಾಗಿದ್ದಾರೆ. ವರನ ಕಡೆಯವರು ಮೆರವಣಿಗೆಯೊಂದಿಗೆ ಬರಬೇಕಿದ್ದ ಸಮಯದಲ್ಲಿ, ಮಗಳ ಶವಯಾತ್ರೆ ನಡೆಸಬೇಕಾದ ಅನಿವಾರ್ಯತೆ ಆ ತಂದೆಗೆ ಎದುರಾಗಿದೆ. ಘಟನೆ ನಡೆದ ತಕ್ಷಣ ಸ್ಥಳಕ್ಕೆ ಆಗಮಿಸಿದ ಪೊಲೀಸರು ಟ್ರೇಲರ್ ವಶಪಡಿಸಿಕೊಂಡು, ಚಾಲಕನನ್ನು ಬಂಧಿಸಿದ್ದಾರೆ. ಪ್ರಕರಣ ಸಂಬಂಧ ಹೆಚ್ಚಿನ ತನಿಖೆ ನಡೆಸುತ್ತಿದ್ದೇವೆ ಎಂದು ಸ್ಟೇಷನ್ ಹೌಸ್ ಅಧಿಕಾರಿ ತಿಳಿಸಿದ್ದಾರೆ.

ಇಸ್ರೇಲಿನಿಂದ ಭಾರೀ ದಾಳಿ: ಹೆಜ್ಬೊಲ್ಲಾ ಫೈಟರ್‌ಗಳ ಹತ್ಯೆ



ಟೆಲ್ ಅವಿವ್: ದಕ್ಷಿಣ ಲೆಬನಾನ್‌ನಲ್ಲಿ ಇತ್ತೀಚೆಗೆ ನಡೆಸಿದ ದಾಳಿಯ ಕುರಿತು ಇಸ್ರೇಲಿ ಸೇನೆಯು ಮಾಹಿತಿ ಬಿಡುಗಡೆ ಮಾಡಿದ್ದು ಮೂವರು ಹೆಜ್ಬೊಲ್ಲಾ ಹೋರಾಟಗಾರರನ್ನು ಹತ್ಯೆಗೈದಿರುವುದಾಗಿ ಹೇಳಿದೆ. ಸಾವು ನೋವುಗಳ ಜತೆಗೆ, ಕಾರ್ಯಾಚರಣೆಯ ಸ್ಥಳಗಳನ್ನು ನಾಶ ಮಾಡಲು ವ್ಯಾಪಕ ಪ್ರಯತ್ನದ ಭಾಗವಾಗಿ ತನ್ನ ಪಡೆಗಳು ಪ್ರದೇಶದಾದ್ಯಂತ ಹೆಜ್ಬೊಲ್ಲಾ ಗುಂಪಿನ ಮೂಲಸೌಕರ್ಯಗಳ ಮೇಲೆ ಯಶಸ್ವಿಯಾಗಿ ಬಾಂಬ್ ದಾಳಿ ಮಾಡಿವೆ ಎಂದು ಇಸ್ರೇಲ್ ಸೇನೆ ಹೇಳಿದೆ. ಕಾರ್ಯಾಚರಣೆಯ ವ್ಯಾಪ್ತಿಯನ್ನು ವಿಸ್ತರಿಸಿ, ದಕ್ಷಿಣ ಲೆಬನಾನ್‌ನಲ್ಲಿ ನಿಯಂತ್ರಿಸಲು ಉದ್ದೇಶಿಸಿರುವ ಪ್ರದೇಶದ ಆಚೆಗೆ ಹಲವಾರು ಪ್ರದೇಶಗಳ ಮೇಲೆ, ನಿರ್ದಿಷ್ಟವಾಗಿ ಹಳದಿ ರೇಖೆಯ ಉತ್ತರದಲ್ಲಿರುವ ಸ್ಥಳಗಳನ್ನು ಗುರಿಯಾಗಿಸಿಕೊಂಡು ದಾಳಿಗಳನ್ನು ನಡೆಸಲಾಗಿದೆ ಎಂದು ಸೇನೆಯು ದೃಢಪಡಿಸಿದೆ. ಕಾರ್ಯಾಚರಣೆಯ ತೀವ್ರತೆಯನ್ನು ವಿವರಿಸಿದ ಇಸ್ರೇಲಿ ಸೇನೆಯು, ನಮ್ಮ ಸೈನಿಕ ಗಾಯಗೊಂಡಿದ್ದು, ವೈದ್ಯಕೀಯ ಚಿಕಿತ್ಸೆಗಾಗಿ ಸ್ಥಳಾಂತರಿಸಲಾಗಿದೆ ಎಂದು ಹೇಳಿದೆ. ಹೆಜ್ಬೊಲ್ಲಾ ನಾಯಕತ್ವದ ನಿಲುವುಗಳು ಕಠಿನವಾಗುತ್ತಿರುವ ನಡುವೆಯೇ ಈ ಬೆಳವಣಿಗೆಗಳು ಸಂಭವಿಸಿವೆ. ಇಸ್ರೇಲ್ ಜತೆ ನೇರ ಮಾತುಕತೆಯಲ್ಲಿ ತೊಡಗಿಸಿಕೊಳ್ಳಲು ಗುಂಪಿನ ನಿರಾಕರಣೆಯನ್ನು ಹೆಜ್ಬೊಲ್ಲಾ ಮುಖ್ಯಸ್ಥ ನಯೀಮ್ ಖಾಸಿಮ್ ಪುನರುಚ್ಚರಿಸಿದ್ದಾರೆ.

ಗಂಗಾ ಎಕ್ಸ್‌ಪ್ರೆಸ್ ವೇ ಉದ್ಘಾಟಿಸಿದ ಮೋದಿ



ಮೀರತ್: ಪ್ರಧಾನಿ ನರೇಂದ್ರ ಮೋದಿ ಗಂಗಾ ಎಕ್ಸ್‌ಪ್ರೆಸ್ ವೇ ಉದ್ಘಾಟಿಸಿದ್ದಾರೆ. ಪಶ್ಚಿಮ ಉತ್ತರ ಪ್ರದೇಶವನ್ನು ಪೂರ್ವ ಉತ್ತರ ಪ್ರದೇಶದೊಂದಿಗೆ ಸಂಪರ್ಕಿಸುವ ಈ ಎಕ್ಸ್‌ಪ್ರೆಸ್‌ವೇ ಮೀರತ್‌ನಿಂದ ಪ್ರಯಾಗ್‌ರಾಜ್ ವರೆಗಿನ 594 ಕಿ.ಮೀ ದೂರವನ್ನು ಕಡಿಮೆ ಮಾಡುತ್ತದೆ. ಈಗ, ಕೆಲವೇ ಗಂಟೆಗಳಲ್ಲಿ, ನೀವು ಪ್ರಯಾಗ್‌ರಾಜ್‌ನಲ್ಲಿರುವ ಸಂಗಮವನ್ನು ತಲುಪಬಹುದು ಮತ್ತು ಕಾಶಿಯಲ್ಲಿ ಬಾಬಾ ವಿಶ್ವನಾಥನನ್ನು ಭೇಟಿ ಮಾಡಿ ಹಿಂತಿರುಗಬಹುದು.

ಸಾವಿರಾರು ವರ್ಷಗಳಿಂದ ಗಂಗಾ ತಾಯಿ ಉತ್ತರ ಪ್ರದೇಶ ಮತ್ತು ದೇಶದ ಜೀವನಾಡಿಯಾಗಿರುವಂತೆ, ಆಧುನಿಕ ಪ್ರಗತಿಯ ಈ ಯುಗದಲ್ಲಿ ಆಕೆಯ ಬಳಿ ಹಾದುಹೋಗುವ ಈ ಎಕ್ಸ್‌ಪ್ರೆಸ್‌ವೇ ಉತ್ತರ ಪ್ರದೇಶದ ಅಭಿವೃದ್ಧಿಗೆ ಹೊಸ ಜೀವನಾಡಿಯಾಗಲಿದೆ ಎಂದು ಹೇಳಿದರು.

ಕಳೆದ ನಾಲ್ಕೈದು ದಿನಗಳಿಂದ ನಾನು ಗಂಗಾ ಮಾತೆಯ ಸನ್ನಿಧಿಯಲ್ಲಿದ್ದೇನೆ ಎಂಬುದು ಕಾಕತಾಳೀಯ, ನಾನು ಬಂಗಾಳದಲ್ಲಿದ್ದಾಗ, ಅಲ್ಲಿ ಗಂಗಾ ಮಾತೆಯ ದರ್ಶನ ಪಡೆದಿದ್ದೆ. ನಿನ್ನೆ ಕಾಶಿಯಲ್ಲಿದ್ದೆ, ಇಂದು ಬಾಬಾ ವಿಶ್ವಾಥ ಅವರೊಂದಿಗೆ ಗಂಗಾ ಮಾತೆಯ ದರ್ಶನ ಪಡೆಯುವ ಭಾಗ್ಯ ನನಗೆ ಸಿಕ್ಕಿತು. ಸುಮಾರು 36,230 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಗಂಗಾ ಎಕ್ಸ್‌ಪ್ರೆಸ್‌ವೇ ಮೀರತ್ –ಪ್ರಯಾಗ್‌ರಾಜ್ ನಡುವಿನ ಪ್ರಯಾಣದ ಸಮಯವನ್ನು 10–12 ಗಂಟೆಗಳಿಂದ ಸುಮಾರು 6 ಗಂಟೆಗಳವರೆಗೆ ಕಡಿಮೆ ಮಾಡುವ ನಿರೀಕ್ಷೆಯಿದೆ. ಈ ಎಕ್ಸ್‌ಪ್ರೆಸ್‌ವೇಗೆ ಉತ್ತರ ಪ್ರದೇಶ ಸರ್ಕಾರ ಗಂಗಾ ಮಾತೆಯ ಹೆಸರಿಟ್ಟಿರುವುದು ಸಂತೋಷ ತಂದಿದೆ ಎಂದರು.

ನರಿಯಂದಡದಲ್ಲಿ ಮುಂದುವರೆದ ಕಾಡಾನೆ ಹಾವಳಿ



ತೋಟದಲ್ಲಿ ಬೀಡುಬಿಟ್ಟಿರುವ ಕಾಡಾನೆಗಳ ಹಿಂಡು

ಮಡಿಕೇರಿ, ಏ.29–ನರಿಯಂದಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದಲ್ಲಿ ಕಾಡಾನೆ ಹಾವಳಿ ಮುಂದುವರೆದಿದ್ದು ತೋಟಕ್ಕೆ ಲಗ್ಗೆ ಇಟ್ಟ ಕಾಡಾನೆಗಳ ಹಿಂಡು ಕಾಫಿ, ಬಾಳೆ, ಅಡಿಕೆ ಮತ್ತಿತರ ಕೃಷಿ ಫಸಲನ್ನು ತಿಂದು ತುಳಿದು ನಾಶಪಡಿಸಿವೆ. ಮಧ್ಯಾಹ್ನದ ವೇಳೆ ನಾಪೋಕ್ಲು–ವಿರಾಜಪೇಟೆ ಮುಖ್ಯ ರಸ್ತೆಯ ಬೊವ್ವೇರಿಯಂಡ ರಮೇಶ್ ಅವರ ಗದ್ದೆಯಲ್ಲಿ ಕಾಣಿಸಿಕೊಂಡ 6 ಕಾಡಾನೆಗಳ ಹಿಂಡನ್ನು ಅರಣ್ಯ ಇಲಾಖೆಯ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಕರಡ ಕೀಮಲೆಕಾಡು ಮೂಲಕ ಕಾಡಿಗಟ್ಟಿದ್ದಾರೆ.

ಗ್ರಾಮ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ ಮಿತಿಮೀರಿದ್ದು ಬೆಳಿಗ್ಗೆ ಹಾಗೂ ಮಧ್ಯಾಹ್ನ ಸಮಯದಲ್ಲಿ ಮುಖ್ಯ ರಸ್ತೆಯ ಮೂಲಕವೇ 6 ಕಾಡಾನೆಗಳು ಸಂಚರಿಸುತ್ತಿದ್ದು, ಗ್ರಾಮಸ್ಥರು ಭಯಭೀತರಾಗಿದ್ದಾರೆ. ಕೂಡಲೇ ಅರಣ್ಯ ಇಲಾಖೆ ಕಾಡಾನೆಯನ್ನು ಸೆರೆ ಹಿಡಿದು ಬೇರೆಡೆ ಸ್ಥಳಾಂತರಿಸಬೇಕು. ಆನೆಗಳನ್ನು ಕಾಡಿಗಟ್ಟಿ ಯಾವುದೇ ಪ್ರಯೋಜನವಿಲ್ಲ, ಅರಣ್ಯ ಇಲಾಖೆ ಸಿಬ್ಬಂದಿಗಳು ಆನೆಗಳನ್ನು ಕಾಡಿಗಟ್ಟಿ ಮನೆಗೆ ತಲಪುವ ಮುನ್ನವೇ ಕಾಡಾನೆಗಳು ಮರಳಿ ತೋಟಕ್ಕೆ ಲಗ್ಗೆ ಇಡುತ್ತಿವೆ. ಇಂತಹ ಕಾರ್ಯಾಚರಣೆಯಿಂದ ಯಾವುದೇ ಪ್ರಯೋಜನವಿಲ್ಲ ಎಂದು ಬೊವ್ವೇರಿಯಂಡ ಮೋಹನ್ ಅಸಮಾಧಾನ ವ್ಯಕ್ತಪಡಿಸಿದರು.

ಆರ್‌ಎಫ್‌ಓ ಶಿವರಾಂ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಓ ಶ್ರೀನಿವಾಸ್, ಇಟಿಎಫ್ ಡಿಆರ್‌ಎಫ್‌ಓ ಪ್ರಶಾಂತ್, ಚೆಯ್ಯಂಡಾಣೆ ಹಾಗೂ ಹೆಗ್ಗಳ ಕ್ಯಾಂಪ್ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಮಾನವ-ವನ್ಯಜೀವಿ ಸಂಘರ್ಷ ಮುಂದುವರಿದ ಹಿನ್ನೆಲೆ

ಅರಣ್ಯ ಇಲಾಖೆ ವಿರುದ್ಧ ಮಂಡಲ ಬಿಜೆಪಿ, ರೈತರ ಪ್ರತಿಭಟನೆ



ರೈತರು, ಬಿಜೆಪಿ ಮಂಡಲದ ಕಾರ್ಯಕರ್ತರು ಅರಣ್ಯ ಇಲಾಖೆ ಮುಂದೆ ಪ್ರತಿಭಟನೆ ನಡೆಸಿದರು.

ವಿರಾಜಪೇಟೆ, ಏ.29– ಕೊಡಗಿನ ಪೊನ್ನಂಪೇಟೆ ಹಾಗೂ ವಿರಾಜಪೇಟೆ ತಾಲೂಕಿನಲ್ಲಿ ವನ್ಯಜೀವಿ ಮಾನವ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕಾಡಾನೆ ಹಾಗೂ ಹುಲಿ ದಾಳಿಗೆ ರೈತರ ಜಾನುವಾರುಗಳು ಬಲಿಯಾಗಿ ಜನರು ತತ್ತರಿಸಿ ಹೋಗಿರುವುದನ್ನು ಖಂಡಿಸಿ ಮಂಡಲ ಬಿಜೆಪಿ ವತಿಯಿಂದ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಾನವ–ವನ್ಯಜೀವಿ ಸಂಘರ್ಷ ಮುಂದುವರಿದ ಹಿನ್ನೆಲೆ ರೊಚ್ಚಿಗೆದ್ದ ರೈತರು, ಬಿಜೆಪಿ ಮಂಡಲ ಅಧ್ಯಕ್ಷ ಸುವಿನ್ ಗಣಪತಿ ನೇತೃತ್ವದಲ್ಲಿ ಗಾಂಧಿನಗರದಲ್ಲಿರುವ ಅರಣ್ಯ ಇಲಾಖೆ ಮುಂದೆ ಸೇರಿ ಕಾಡು ಪ್ರಾಣಿಗಳಿಂದ ರೈತರನ್ನು ಉಳಿಸಿ ಎಂದು ಘೋಷಣೆ ಕೂಗುತ್ತಾ ಪ್ರತಿಭಟಿಸಿದ ಬಿಜೆಪಿಗರು ರಾಜ್ಯ ಸರ್ಕಾರ ಹಾಗೂ ಅರಣ್ಯ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿದರು.

ಪ್ರತಿಭಟನಾಕಾರರು ಎಷ್ಟೇ ಕೇಳಿಕೊಂಡರೂ ಅರಣ್ಯ ಇಲಾಖೆಯ ಒಳಗಡೆ ಪ್ರವೇಶಕ್ಕೆ ಅವಕಾಶ ನೀಡಲಿಲ್ಲ. ನಾವು ಶಾಂತಿಯುತವಾಗಿ ಮಾತನಾಡಿ, ರೈತರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಹಾಗೂ ವನ್ಯಜೀವಿಗಳ ಉಪಟಳದ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಿ ಇಲಾಖೆಯ ಆವರಣ ಪ್ರವೇಶಿಸಿ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿ ಕೆಲಸ ನಿರ್ವಹಿಸಬೇಕು. ವನ್ಯ ಪ್ರಾಣಿಗಳ ನಿಯಂತ್ರಣ ಸಾಧ್ಯವಿಲ್ಲ ಅಂದರೆ ತೆರಳಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯ ಎಂ.ಪಿ ಸುಜಾ ಕುಶಾಲಪ್ಪ ಮಾತನಾಡಿ ರೈಲ್ವೆ ಬ್ಯಾರಿಕೆಡ್‌ಗೆ 22 ಕೋಟಿ ಅನುದಾನ ಬಂದಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದೀರಾ ಅದರ ಸಂಪೂರ್ಣ ಮಾಹಿತಿಯನ್ನು ಕೊಡಬೇಕು. ಹೆಚ್ಚಿನ ಅನುದಾನಕ್ಕೆ ಸರಕಾರಕ್ಕೆ ಬೇಡಿಕೆ ಸಲ್ಲಿಸಬೇಕು. ಜಿಲ್ಲೆಯಲ್ಲಿ ವನ್ಯಪ್ರಾಣಿಗಳಿಂದ 32 ಜನ ಮೃತಪಟ್ಟಿದ್ದಾರೆ. ವಿಶೇಷವಾಗಿ ಕೊಡಗು ಜಿಲ್ಲೆ ಅರಣ್ಯ ಪ್ರದೇಶದಿಂದ ಕೂಡಿದ ಜಾಗವಾಗಿದ್ದು, ಅರಣ್ಯ ಇಲಾಖೆ ಹೆಚ್ಚಿನ ಹಣಕಾಸಿಗೆ ಬೇಡಿಕೆ ಸಲ್ಲಿಸಿ ಅನುದಾನ ತರಬೇಕಾದದು ನಿಮ್ಮ ಕರ್ತವ್ಯ ಎಂದರು.

ಮಾಜಿ ಶಾಸಕ ಕೆ.ಜಿ ಬೋಪಯ್ಯ, ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಚಿಮಂಡ ರವೀಂದ್ರ, ಕೇಳಪಂಡ ಸುಜು ನಾಣಯ್ಯ, ರೀನಾ ಪ್ರಕಾಶ್, ಸುವಿನ್ ಗಣಪತಿ ಇನ್ನಿತರ ಪಕ್ಷದ ಮುಖಂಡರುಗಳು ಮಾತನಾಡಿದರು.

ಈ ಸಂದರ್ಭ ಡಿಸಿಎಫ್ ಜಗನ್ನಾಥ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿ ಮಾತನಾಡಿದ ಡಿಸಿಎಫ್ ಜಗನ್ನಾಥ್ ಅವರು ತಮ್ಮ ಬೇಡಿಕೆಗಳನ್ನು ಮೇಲಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅವರ ಮಾರ್ಗದರ್ಶನದಂತೆ ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಪ್ರತಿಭಟನೆಯಲ್ಲಿ ವಿರಾಜಪೇಟೆ ಮಂಡಲ ಪ್ರಕಾರ್ಯದರ್ಶಿ ಕುಟ್ಟಂಡ ಅಜಿತ್ ಕರುಂಬಯ್ಯ, ಕಾರ್ಯದರ್ಶಿ ಮುದ್ದಿಯಂಡ ಮಂಜು, ವಿರಾಜಪೇಟೆ ನಗರ ಅಧ್ಯಕ್ಷ ಅನಿಲ್ ಮಂದಣ್ಣ, ಮಾಜಿ ಜಿಲ್ಲಾ ಅಧ್ಯಕ್ಷ ಪಳೆಯಂಡ ರಾಬಿನ್ ದೇವಯ್ಯ, ವಾಟೇರಿರ ಬೋಪಣ್ಣ, ಕಾನೂನು ಸಲಹೆಗಾರ ಪುಲಿಯಂಡ ಪೊನ್ನಣ್ಣ, ಮಾಚಿಮಂಡ ವಸಂತ, ಮಲ್ಲಂಡ ಮಧು, ಶಶಿ ಸುಬ್ರಮಣಿ, ಕೂತಂಡ ಸಚಿನ್, ವಾಟೇರಿರ ವಿರಾಜ್, ಕಾಂತಿ ಸತೀಶ್, ರೀನಾ ಪ್ರಕಾಶ್, ಸುನಿತಾ(ಜೂನ) ಪಿ.ಜಿ. ಸುಮೇಶ್, ಚಕ್ಕೆರ ಸೂರ್ಯ, ಅಚ್ಚಪಂಡ ಮಹೇಶ್, ಅಭಿಜಿತ್, ಇನ್ನಿತರ ಪಕ್ಷದ ಮುಖಂಡರುಗಳು ಹಾಗೂ ಕಾರ್ಯಕರ್ತರು ಭಾಗಿಯಾಗಿದ್ದರು.

ಹಳೇ ವೈಷಮ್ಯಕ್ಕೆ ಮೊಮ್ಮಗನನ್ನೇ ಹತ್ಯೆಗೈದ ತಾತ



ಆರೋಪಿ ಅಪ್ಪು

ವಿರಾಜಪೇಟೆ, ಏ.29– ಹಳೇ ವೈಷಮ್ಯವನ್ನೇ ಮುಂದಿಟ್ಟುಕೊಂಡು ತಾತನೇ ಮೊಮ್ಮಗನನ್ನು ಹತ್ಯೆ ಮಾಡಿರುವ ಘಟನೆ ತಾಲೂಕಿನ ಬೇಟೋಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಎ.ಕೆ.ಗಣೇಶ್ ಎಂಬುವರ ಲೈನ್ ಮನೆಯಲ್ಲಿ ಕಾರ್ಮಿಕರಾಗಿ ಕೆಲಸ ಮಾಡಿಕೊಂಡಿದ್ದ ಪಣೆ ಎರವರ ಅಪ್ಪು (60) ಮತ್ತು ಮೊಮ್ಮಗ ಪಣಿ ಎರವರ ಸಂಜು (19) ಎಂದಿನಂತೆ ನಿನ್ನೆ ಕೆಲಸಮಾಡಿ ಮನೆಗೆ ಬಂದಿದ್ದಾರೆ ಸಂಜೆ ಲೈನ್ ಮನೆಯಲ್ಲಿ ಇಬ್ಬರ ನಡುವೆಯೂ ಕ್ಷುಲ್ಲಕ ಕಾರಣಕ್ಕೆ ಜಗಳ ನಡೆದಿದೆ. ಅಕ್ಕಪಕ್ಕದವರು ಬಂದು ಇಬ್ಬರಿಗೂ ಬುದ್ದಿ ಹೇಳಿ ಸಮಾಧಾನಮಾಡಿ ಜಗಳ ಬಿಡಿಸಿದ್ದಾರೆ. ನಂತರ ರಾತ್ರಿ 8 ಗಂಟೆ ಸುಮಾರಿಗೆ ಮತ್ತೆ ಅಜ್ಜ ಮತ್ತು ಮೊಮ್ಮಗನಿಗೂ ಮಾತಿಗೆ ಮಾತು ಬೆಳೆದು ಜಗಳ ವಿಕೋಪಕ್ಕೇರಿತ್ತೆನ್ನಲಾಗಿದೆ.

ಜಗಳದಲ್ಲಿ ಅಪ್ಪು ಮತ್ತು ಸಂಜು ಇಬ್ಬರು ಕತ್ತಿ ಹಿಡಿದುಕೊಂಡಿದ್ದು, ಜಗಳ ತಾರಕಕ್ಕೇರಿದಾಗ ಅಪ್ಪು ಮೊಮ್ಮಗ ಸಂಜುವಿನ ಕುತ್ತಿಗೆಯ ಎಡಭಾಗಕ್ಕೆ ಕತ್ತಿಯಿಂದ ಬಲವಾಗಿ ಹಲ್ಲೆ ನಡೆಸಿದ್ದಾನೆ ನಂತರ ಎಡಕಾಲಿಗೂ ಕತ್ತಿಯಿಂದ ಹಲ್ಲೆ ಮಾಡಿದಾಗ ಕೂಗಾಟ ಕೇಳಿಬಂದಾಗ ತೊಟದ ಮಾಲಿಕ ಎ.ಕೆ.ಗಣೇಶ್ ಮತ್ತಿತರರು ಬಂದು ಗಾಯಾಳುವನ್ನು ಸಾರ್ವಜನಿಕ ಆಸ್ಪತ್ರೆಯಲ್ಲಿ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿಗೆ ಕರೆದೊಯ್ಯುವಾಗ ಮಾರ್ಗಮಧ್ಯದಲ್ಲೇ ಗಾಯಾಳು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಕೆಲವೇ ವರ್ಷಗಳ ಹಿಂದೆ ಮೃತ ಪಣೆ ಎರವರ ಸಂಜು ಬಾಲಕನಾಗಿದ್ದಾಗಲೇ ತನ್ನ ಅಜ್ಜಿಯನ್ನು ಕೊಲೆ ಮಾಡಿ ಬಾಲಾಪರಾಧಿಯಾಗಿ ಶಿಕ್ಷೆ ಅನುಭವಿಸಿ ನಂತರ ಕೆಲ ದಿನಗಳ ಹಿಂದೆ ಬಿಡುಗಡೆ ಹೊಂದಿ ಅಜ್ಜನೊಂದಿಗೆ ವಾಸವಿದ್ದನೆನ್ನಲಾಗಿದೆ. ಹಿಂದಿನ ವೈಷಮ್ಯವೇ ಇಂದಿನ ಘಟನೆಗೆ ಕಾರಣವಾಗಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ. ನಗರ ಪೊಲೀಸ್ ಠಾಣಾಧಿಕಾರಿ ಹೆಚ್.ಎಸ್. ಪ್ರಮೋದ್ ಪ್ರಕರಣ ದಾಖಲಿಸಿಕೊಂಡು ಆರೋಪಿ ಅಪ್ಪುವನ್ನು ನಗರ ಠಾಣೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ಕುಲಾಲ ಕುಂಬಾರ ಬಾಂಧವರ ಕ್ರೀಡೋತ್ಸವದ ಪೂರ್ವಭಾವಿ ಸಭೆ



ಕೊಡಗು ಜಿಲ್ಲಾ, ಕುಲಾಲ ಕುಂಬಾರ ಬಾಂಧವರ ಕ್ರೀಡೋತ್ಸವದ ಪೂರ್ವಭಾವಿ ಸಭೆ ನಡೆಯಿತು.

ನಾಪೋಕ್ಲು, ಏ.29–ಜಿಲ್ಲಾ, ಕುಲಾಲ ಕುಂಬಾರ ಸಂಘದ ನೇತೃತ್ವದಲ್ಲಿ ಜಿಲ್ಲಾ ಯುವ ಘಟಕ ಮತ್ತು ಜಿಲ್ಲಾ ಮಹಿಳಾ ಘಟಕದ ಸಹಯೋಗದೊಂದಿಗೆ ಕುಲಾಲ ಕುಂಬಾರ ಬಾಂಧವರ ಕ್ರೀಡೋತ್ಸವದ ಪೂರ್ವಭಾವಿ ಸಭೆ ನಡೆಯಿತು .

ಮಡಿಕೇರಿಯ ಮ್ಯಾನ್ಸ್ ಕಾಂಪೌಂಡ್‌ನ ಕೆಳಗಿನ ಮೈದಾನದಲ್ಲಿ ಮೇ 16 ಮತ್ತು 17ರಂದು ನಡೆಯುವ ಸಮ್ಮಿಲನ 2026 ಕಾರ್ಯಕ್ರಮದ ಪೂರ್ವಭಾವಿ ಸಭೆಯು ಮಡಿಕೇರಿಯಲ್ಲಿ ನಡೆಯಿತು.. ಕಾರ್ಯಕ್ರಮದಲ್ಲಿ ಸುಮಾರು 4000 ಮಂದಿ ಆಗಮಿಸುವ ನಿರೀಕ್ಷೆಯಿದ್ದು. ಅದಕ್ಕೆ ಬೇಕಾಗುವಂತಹ ಪೂರ್ವಭಾವಿ ಸಿದ್ಧತೆಗಳನ್ನು ಸಭೆಯಲ್ಲಿ ಎಲ್ಲರ ಅಭಿಪ್ರಾಯವನ್ನು ಕ್ರೋಢೀಕರಿಸಿ ಸ್ವಾಗತ ಸಮಿತಿ. ಆಹಾರ ಸಮಿತಿ. ಕ್ರೀಡಾ ಸಮಿತಿ. ಅಲಂಕಾರ ಸಮಿತಿ ಸೇರಿದಂತೆ ಇನ್ನಿತರ ಸಮಿತಿಗಳನ್ನು ರಚಿಸಲಾಯಿತು.

ಕೊಡಗು ಜಿಲ್ಲಾ ಕುಲಾಲ ಕುಂಬಾರ ಸಂಘದ ಸ್ಥಾಪಕ ಅಧ್ಯಕ್ಷ ಮುತ್ತಮ್ಮ ಕೋಟಿ, ಜಿಲ್ಲಾ ಮಡಿಕೆ ತಯಾರಕರ ಸಹಕಾರಿ ಸಂಘದ ಅಧ್ಯಕ್ಷ ಡಿ.ನಾಣಯ್ಯ, ಜಿಲ್ಲಾ ಕುಲಾಲ ಕುಂಬಾರ ಸಂಘದ ಜಿಲ್ಲಾಧ್ಯಕ್ಷ ಲಯನ್ ದಾಮೋದರ್. ಕೆ.ಕೆ. ಉಪಾಧ್ಯಕ್ಷೆ ಎಂಡಿ ಸುರೇಶ್ ಕುಲಾಲ್ ಖಜಾಂಚಿ ಗಿರೀಶ್ ಕೆಎಸ್ ಮಡಿಕೆಬೀಡು. ಯುವ ಘಟಕದ ಅಧ್ಯಕ್ಷ ಜೆಪಿ ಕುಲಾಲ್, ಮಹಿಳಾ ಘಟಕದ ಅಧ್ಯಕ್ಷೆ ಕಾಂತಿಮಣಿ, ಉಪಾಧ್ಯಕ್ಷೆ ಶ್ವೇತ, ಸಹ ಕಾರ್ಯದರ್ಶಿ ಸುನಿ ಹಾಕತ್ತೂರು ಅಶ್ವಥ್ ಮಡಿಕೇ ಬೀಡು , ಪ್ರಧಾನ ಕಾರ್ಯದರ್ಶಿ ಹೇಮಲತಾ ಪ್ರಾಶ್, ಖಜಾಂಚಿ ಭವಾನಿ ಶಿವರಾಜ್ ಮಡಿಕೇ ಬೀಡು, ಪದಾಧಿಕಾರಿಗಳಾದ ಜ್ಯೋತಿ ಮಡಿಕೇರಿ, ದಮಯಂತಿ ಚೇರಂಬಾಣೆ, ನಂದಿತಾ ಆಶಿಕ್ ಮಡಿಕೇರಿ, ಕ್ರೀಡಾ ಅಧ್ಯಕ್ಷ ಕೆ.ಡಿ ಶಾಂತಕುಮಾರ್ ಮಡಿಕೆ ಬೀಡು, ಪದಾಧಿಕಾರಿಗಳಾದ ಅಶ್ವತ್ ಮಡಿಕೆ ಬೀಡು, ಹರೀಶ್ ಮಡಿಕೇರಿ, ಲೋಕೇಶ್ ಕುಶಾಲನಗರ, ಸತೀಶ್ ಮಡಿಕೆ ಬೀಡು, ಅಪ್ಪಾಜಿ ಕುಶಾಲನಗರ, ವಿಠಲ್ ಮಡಿಕೆ ಬೀಡು, ಚೆಂಗಪ್ಪ ಹೊದ್ದೂರು, ಯುವ ಘಟಕದ ಉಪಾಧ್ಯಕ್ಷ ಪವನ್ ಕುಲಾಲ್ ಚೇರಂಬಾಣೆ, ಪ್ರಧಾನ ಕಾರ್ಯದರ್ಶಿ ರೋಷನ್ ಹೊದ್ದೂರು, ಜಿಲ್ಲಾ ಘಟಕ ಯುವ ಘಟಕ ಮತ್ತು ಮಹಿಳಾ ಘಟಕದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಾಲಕ್ಕಾಗಿ ಅರ್ಜಿ ಆಹ್ವಾನ

ನಾಪೋಕ್ಲು: ಜಾಗ ಮಂಜೂರಾತಿ ಕೋರಿ ನಾಪೋಕ್ಲು ವಲಯದ ಮಾಜಿ ಸೈನಿಕರು ಸರ್ಕಾರಕ್ಕೆ ಸಲ್ಲಿಸಿದ್ದ ಅರ್ಜಿಯ ವಿವರವನ್ನು ಮಾಜಿ ಸೈನಿಕರ ಸಂಘಕ್ಕೆ ಮೇ 10ರ ಒಳಗಾಗಿ ತಲುಪಿಸಬೇಕೆಂದು ಸಂಘದ ಅಧ್ಯಕ್ಷ ಕೊಂಡಿರ ಗಣೇಶ್ ನಾಣಯ್ಯ ಹೇಳಿದ್ದಾರೆ. ಸಂಘದಲ್ಲಿ ಸದಸ್ಯರು ಮತ್ತು ಅವರ ಪತ್ನಿಯರು ಸಾಲ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಬಹುದು ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಸ್ಪತ್ರೆಯಲ್ಲಿ ವಿಚಾರಣಾಧೀನ ಕೈದಿ ಸಾವು



ಚಂಗಪ್ಪ

ಮಡಿಕೇರಿ: ಅನಾರೋಗ್ಯ ನಿಮಿತ್ತ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಿಚಾರಣಾಧೀನ ಕೈದಿಯೊಬ್ಬರು ಚಿಕಿತ್ಸೆ ಫಲಿಸದೆ ಮೃತಪಟ್ಟ ಘಟನೆ ನಡೆದಿದೆ. ಕುಶಾಲನಗರ ನಿವಾಸಿ ಚಂಗಪ್ಪ(68) ಎಂಬವರೇ ಮೃತಪಟ್ಟಿದ್ದಾರೆ. ಪ್ರಕರಣ ಒಂದರಲ್ಲಿ ಬಂಧಿಯಾಗಿ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿದ್ದ ಚಂಗಪ್ಪ, ಜಾಮೀನಿನ ನಿರೀಕ್ಷೆಯಲ್ಲಿದ್ದರೆನ್ನಲಾಗಿದೆ. ಮಧುಮೇಹ ಮತ್ತು ರಕ್ತದ ಒತ್ತಡ ಸಮಸ್ಯೆಯಿಂದ ಬಳಲುತ್ತಿದ್ದು, ಚಂಗಪ್ಪ ಅವರ ಆರೋಗ್ಯದಲ್ಲಿ ಏರುಪೇರಾದ ಕಾರಣ ಜೈಲು ಅಧಿಕಾರಿ ಮತ್ತು ಸಿಬ್ಬಂದಿಗಳು ಅವರನ್ನು ಏ.27ರಂದು ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದೇ ಚಂಗಪ್ಪ ಏ.28ರ ರಾತ್ರಿ 12 ಗಂಟೆ ಸಮಯದಲ್ಲಿ ಮೃತಪಟ್ಟಿದ್ದಾರೆ.

ಜಿಲ್ಲಾಸ್ಪತ್ರೆಯಲ್ಲಿ ವಿಚಾರಣಾಧೀನ ಕೈದಿ ಮೃತಪಟ್ಟ ಹಿನ್ನೆಲೆಯಲ್ಲಿ ಜೈಲು ಅಧಿಕಾರಿಗಳು ಮತ್ತು ನಗರ ಠಾಣೆಗೆ ಮಾಹಿತಿ ನೀಡಿ, ಬಳಿಕ ಮೃತದೇಹವನ್ನು ಚಿಕಿತ್ಸಾ ಕೊಠಡಿಯಿಂದ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದರು. ನ್ಯಾಯಾಂಗ ಬಂಧನ ಅವಧಿಯಲ್ಲಿಯೇ ವಿಚಾರಣಾಧೀನ ಕೈದಿ ಮೃತಪಟ್ಟ ಕಾರಣ ನ್ಯಾಯಾಲಯಕ್ಕೂ ಈ ಕುರಿತು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ನ್ಯಾಯಾಧೀಶರು ಜಿಲ್ಲಾಸ್ಪತ್ರೆಗೆ ಆಗಮಿಸಿ ಮೃತದೇಹವನ್ನು ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲು ಜೈಲು ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆಗೆ ಸೂಚನೆ ನೀಡಿದರು. ನಂತರ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಇಂದು ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಘಟಿಕೋತ್ಸವ

ಮಡಿಕೇರಿ: ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ 'ಆರೋಹಿ–26' ಘಟಿಕೋತ್ಸವ ಸಮಾರಂಭ ಏ.30 ರಂದು ಮಧ್ಯಾಹ್ನ 1 ಗಂಟೆಗೆ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ನಡೆಯಲಿದೆ.

ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ॥ಮಂತರ್ ಗೌಡ, ಸಂಸದ ಯದುವೀರ್ ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾಕುಶಾಲಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಬೋಪಾಲ್‌ನ

ಒಂದೇ ಸ್ಥಾನಕ್ಕೆ ಇಬ್ಬರು ಅಧಿಕಾರಿಗಳು

ನಗೆಪಾಟಲಿಗೀಡಾದ ಕಂದಾಯ ಇಲಾಖೆ

ಬೇಗೂರು, ಏ.29–ಇರೋದು ಒಂದೇ ರಾಜಸ್ವ ನಿರೀಕ್ಷಕ ಹುದ್ದೆ. ಆದರೆ ಆ ಕುರ್ಚಿಗೆ ಇಬ್ಬರು ಅಧಿಕಾರಿಗಳು ಹಗ್ಗ–ಜಗ್ಗಾಟ ನಡೆಸಿದ ಅಪರೂಪದ ಪ್ರಸಂಗ ಗ್ರಾಮದ ನಾಡ ಕಚೇರಿಯಲ್ಲಿ ನಡೆದಿದೆ. ಈ ಇಬ್ಬರು ಅಧಿಕಾರಿಗಳ ಮುಸುಕಿನ ಗುದ್ದಾಟದಿಂದಾಗಿ ಕಂದಾಯ ಇಲಾಖೆ ಅಪಹಾಸ್ಯಕ್ಕೀಡಾಗುವಂತಾಗಿದೆ.

ರಾಜಸ್ವ ನಿರೀಕ್ಷಕ ಗಂಗಾಧರ್ ವಿರುದ್ಧ ಸಾರ್ವಜನಿಕರಿಂದ ದೂರು ಬಂದ ಕಾರಣ ತಹಸೀಲ್ದಾರ್ ಎಂ.ಎಸ್.ತನ್ಮಯ್ ಅವರು ಗಂಗಾಧರ್‌ರನ್ನು ವರ್ಗಾಯಿಸಿ ಆ ಸ್ಥಾನಕ್ಕೆ ಗ್ರಾಮ ಲೆಕ್ಕಿಗ ಉಲ್ಲಾಸ್‌ರನ್ನು ನಿಯೋಜಿಸಿದ್ದರು. ಇದರ ಬೆನ್ನಲ್ಲೆ ಕರ್ನಾಟಕ ಆಡಳಿತಾತ್ಮಕ ನ್ಯಾಯಾಧೀಕರಣ (ಕೆಎಟಿ) ಮೊರೆ ಹೋದ ಗಂಗಾಧರ್ ತಹಸೀಲ್ದಾರ್ ಆದೇಶಕ್ಕೆ ತಡೆ ತಂದಿದ್ದಾರೆ.

ಏತನ್ಮಧ್ಯೆ ನಿಯೋಜಿತ ರಾಜಸ್ವ ನಿರೀಕ್ಷಕ ಉಲ್ಲಾಸ್ ಗಂಗಾಧರ್ ಅಧಿಕಾರ ಹಸ್ತಾಂತರಿಸುವ ಮುನ್ನವೇ ಕಚೇರಿಯ ಬೀಗ ಒಡೆದು ಕುರ್ಚಿ ಅಲಂಕರಿಸಿದ್ದಾರೆ. ಕೆಎಟಿಯಿಂದ ತಡೆ ತಂದರೂ ತಹಸೀಲ್ದಾರ್ ಎಂ.ಎಸ್.ತನ್ಮಯ್ ಅವರು ಆರ್‌ಐ ಸ್ಥಾನವನ್ನು ವಿಎ ಉಲ್ಲಾಸ್‌ಗೆ ಕೊಟ್ಟ ಕಾರಣ ಗಂಗಾಧರ್ ಅವರೂ ಸಹ ಅದೇ ಕಚೇರಿಯಲ್ಲಿ ಕುಳಿತಿದ್ದಾರೆ.

ನಗೆಪಾಟಲು : ಒಂದೇ ಹುದ್ದೆಗೆ ಇಬ್ಬರು ಅಧಿಕಾರಿಗಳ ಪೈಪೋಟಿಯಿಂದ ಕಂದಾಯ ಇಲಾಖೆ ನಗೆಪಾಟಲಿಗೀಡಾಗಿದೆ. ಜಿಲ್ಲಾಧಿಕಾರಿಗಳು ಮಧ್ಯ ಪ್ರವೇಶಿಸಿ ಸಮಸ್ಯೆ ಪರಿಹರಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬೆಳ್ಳಿರಥದಲ್ಲಿ ಭಗೀರಥರ ಅದ್ದೂರಿ ಮೆರವಣಿಗೆ



ಭಗೀರಥ ಜಯಂತೋತ್ಸವದ ಅಂಗವಾಗಿ ಅದ್ದೂರಿಯಾಗಿ ಬೆಳ್ಳಿರಥ ಮೆರವಣಿಗೆ ನಡೆಯಿತು

ಕೊಳ್ಳೇಗಾಲ, ಏ.29– ಭಗೀರಥ ಜಯಂತೋತ್ಸವದ ಅಂಗವಾಗಿ ಅದ್ದೂರಿಯಾಗಿ ಬೆಳ್ಳಿರಥ ಮೆರವಣಿಗೆ ಉತ್ಸವ ನಡೆಯಿತು

ಪಟ್ಟಣದ ಎಂ.ಜಿ.ಎಸ್.ವಿ ಮೈದಾನದಲ್ಲಿ ಬುಧವಾರ ಅಲಂಕೃತಗೊಂಡಿದ್ದ ರಥದ ಮೇಲಿದ್ದ ಭಗೀರಥ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಸರಗೂರು ಅಯ್ಯನ್ ಮಠ ಶ್ರೀ ಮಹದೇವ ಸ್ವಾಮಿಗಳವರು ಮೆರವಣಿಗೆಗೆ ಚಾಲನೆ ನೀಡಿದರು.

ಮಂಗಳವಾದ್ಯ, ಡೊಲ್ಲು ಕುಣಿತದೊಂದಿಗೆ ಎಂ.ಜಿ.ಎಸ್.ವಿ ಮೈದಾನದಿಂದ ಹೊರಟು ಗುರುಕಾರ್ ವೃತ್ತ, ಡಾ.ರಾಜಕುಮಾರ್ ರಸ್ತೆ, ಮಸೀದಿ ವೃತ್ತ, ಡಾ.ಅಂಬೇಡ್ಕರ್ ರಸ್ತೆಯಲ್ಲಿ ತೆರಳಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಎಡಿಬಿ ವೃತ್ತದ ಮೂಲಕ ಐ.ಬಿ ರಸ್ತೆಯಲ್ಲಿ ನ್ಯಾಷನಲ್ ಸ್ಕೂಲ್ ಆವರಣ ತಲುಪಿತು. ಮೆರವಣಿಗೆಯಲ್ಲಿ ಎಲ್ಲಾ ಗ್ರಾಮದ ಉಪ್ಪಾರ ಮುಖಂಡರು ತೆರೆದ ವಾಹನಗಳಲ್ಲಿ ಭಗೀರಥ ಫೋಟೋವನ್ನು ಇಟ್ಟು ಮೆರವಣಿಗೆ ಮಾಡಿದರು.

ಈ ಮೆರವಣಿಗೆಯಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ, ಮಾಜಿ ಸಚಿವ ಎನ್.ಮಹೇಶ್, ಹನೂರು ಮಾಜಿ ಶಾಸಕ ಆರ್.ನರೇಂದ್ರ, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜೇಂದ್ರ, ಯುವ ಉದ್ಯಮಿ ನಿಶಾಂತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಉಪ್ಪಾರ ನಿಗಮ ಮಾಜಿ ಅಧ್ಯಕ್ಷ ಶಿವಕುಮಾರ್, ಜಿ.ಪಂ ಮಾಜಿ ಸದಸ್ಯ ಕೊಪ್ಪಾಳಿ ಮಹದೇವನಾಯಕ, ನಗರಸಭೆ ಮಾಜಿ ಅಧ್ಯಕ್ಷ ರೇಖಾ, ಮಾಜಿ ಸದಸ್ಯರು, ತಾಲೂಕು ಭಗೀರಥ ಉಪ್ಪಾರ ಸಂಘದ ಅಧ್ಯಕ್ಷ ಮಧುವನಹಳ್ಳಿ ರಮೇಶ್, ಧರಣಿ ಶ, ಸಂಘದ ಪದಾಧಿಕಾರಿಗಳು, ಉಪ್ಪಾರ ಜನಾಂಗದ ಗಡಿ, ಕಟ್ಟೆ ಯಜಮಾನರು ಹಾಗೂ ಯುವಕರು, ಮುಖಂಡರು ಇದ್ದರು.

ರಾಜ್ಯದಲ್ಲಿಯೇ ಮೊದಲ ಬಾರಿಗೆ ಜಿಲ್ಲೆಯಲ್ಲಿ

ಕಾಗದರಹಿತ ನೋಂದಣಿ ವ್ಯವಸ್ಥೆಗೆ ಇಂದು ಚಾಲನೆ

ಚಾಮರಾಜನಗರ, ಏ.29–ರಾಜ್ಯ ಸರ್ಕಾರದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಕಾವೇರಿ 2.0 ಪೋರ್ಟಲ್ ಮೂಲಕ ರಾಜ್ಯದಲ್ಲಿಯೇ ಮೊದಲ ಬಾರಿಗೆ ಜಿಲ್ಲೆಯಾದ್ಯಂತ ಕಾಗದರಹಿತ ನೋಂದಣಿ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ಏ. 30ರಂದು ನೂತನ ವ್ಯವಸ್ಥೆಯನ್ನು ಆರಂಭಿಸುತ್ತಿದೆ.

ಈ ವ್ಯವಸ್ಥೆಯು ನಾಗರಿಕ ಕೇಂದ್ರಿತ, ಪಾರದರ್ಶಕ ಹಾಗೂ ಪರಿಣಾಮಕಾರಿ ನೋಂದಣಿ ಸೇವೆಗಳನ್ನು ಒದಗಿಸುವಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಸಾಂಪ್ರದಾಯಿಕ ಕಾಗದ ಆಧಾರಿತ ನೋಂದಣಿ ವ್ಯವಸ್ಥೆಯಿಂದ ಸಂಪೂರ್ಣ ಡಿಜಿಟಲ್, ಕಾಗದರಹಿತ ವ್ಯವಸ್ಥೆಗೆ ಆಗುತ್ತಿರುವ ಪರಿವರ್ತನೆ, ಆಸ್ತಿ ವ್ಯವಹಾರಗಳನ್ನು ನಿರ್ವಹಿಸುವ ವಿಧಾನದಲ್ಲಿ ಮಹತ್ತರ ಬದಲಾವಣೆಯನ್ನು ತರಲಿದೆ.

ಹೊಸ ವ್ಯವಸ್ಥೆಯ ಪ್ರಯೋಜನಗಳು ಕೇವಲ ಸುಧಾರಣೆಯಷ್ಟೇ ಅಲ್ಲ. ಹಳೆಯ ಕೈಚಾಲಿತ ವ್ಯವಸ್ಥೆಯಲ್ಲಿದ್ದ ಸಮಸ್ಯೆಗಳು ಮತ್ತು ತೊಂದರೆಗಳಿಗೆ ಸಮಗ್ರ ಪರಿಹಾರ ಒದಗಿಸಲಿವೆ. ಕಾಗದದ ವ್ಯವಸ್ಥೆಯಿಂದ ಭೌತಿಕ ದಾಖಲೆಗಳು ನಕಲಿ, ಅಕ್ಷರ ಬದಲಾವಣೆ, ಪುಟ ಬದಲಾವಣೆ ಹಾಗೂ ನಂತರದ ತಿದ್ದುಪಡಿಗಳಿಗೆ ಒಳಪಡುವ ಸಾಧ್ಯತೆ ಇರುತ್ತದೆ. ಪರಿಶೀಲನೆ ಬಹುತೇಕ ಕೈಚಾಲಿತವಾಗಿದ್ದು ದೋಷಗಳ ಸಾಧ್ಯತೆ ಹೆಚ್ಚು ಇರುತ್ತದೆ. ನೂತನ ಕಾಗದರಹಿತ ವ್ಯವಸ್ಥೆಯಿಂದ ಡಿಜಿಟಲ್ ದಾಖಲೆಗಳು ಎನ್ಕ್ರಿಪ್ಷನ್, ಆಡಿಟ್ ಟ್ರೇಲ್ ಮತ್ತು ಹ್ಯಾಶ್ ಆಧಾರಿತ ಪರಿಶೀಲನೆಯ ಮೂಲಕ ಸುರಕ್ಷಿತವಾಗಿರುತ್ತವೆ. ಡಿಜಿಟಲ್ ಸಹಿ ಮಾಡಿದ ನಂತರ ಯಾವುದೇ ಬದಲಾವಣೆ ಪತ್ತೆಯಾಗಲಿದೆ.

ಕಾಗದ ರಹಿತ ನೋಂದಣಿ ವ್ಯವಸ್ಥೆಯಿಂದ ಒಂದೇ ಡಿಜಿಟಲ್ ದಾಖಲೆ ಎಲ್ಲ ಹಂತಗಳಿಗೆ ಸಾಕಾಗುತ್ತದೆ. ಕಾಗದ ಬಳಕೆ ಕಡಿಮೆಯಾಗಿದ್ದು ಪರಿಸರ ಸಂರಕ್ಷಣೆಗೆ ಸಹಕಾರಿ. ಆಧಾರ್ ಆಧಾರಿತ ಇ–ಸೈನ್ ಮತ್ತು ಡಿಜಿಟಲ್ ಸಹಿ ಮೂಲಕ ವೇಗವಾದ ಮತ್ತು ನಿಖರ ಪರಿಶೀಲನೆ ಸಾಧ್ಯವಾಗ ಲಿದೆ. ಆನ್‌ಲೈನ್ ಮೂಲಕ ಎಲ್ಲಿಂದ ಬೇಕಾದರೂ ದಾಖಲೆಗಳನ್ನು ಪಡೆಯಬಹುದು. ಸಂಪೂರ್ಣ ಡಿಜಿಟಲ್ ಪ್ರಕ್ರಿಯೆಯಿಂದ ಸಮಯ ವಿಳಂಬಕ್ಕೆ ಅವಕಾಶವಾಗದೆ ವೇಗವಾಗಿ ಪ್ರಕ್ರಿಯೆ ನಡೆಯಲಿದೆ.

ಕಾಗದರಹಿತ ನೋಂದಣಿ ಪ್ರಕ್ರಿಯೆ ವ್ಯವಸ್ಥೆಗೆ ಏ.30ರ ಬೆಳಿಗ್ಗೆ 10 ಗಂಟೆಗೆ ನಗರದ ಮಿನಿ ವಿಧಾನಸೌಧದಲ್ಲಿರುವ (ತಹಶೀಲ್ದಾರ್ ಕಚೇರಿ) ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತ ಎಂ.ಪಿ. ಮುಲ್ಲೈ ಮುಹಿಲನ್ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾ ನೋಂದಣಾಧಿಕಾರಿ ಕಿರಣ್ ಸಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 22, ಬಸವಣ್ಣನವರ ಭಾವಚಿತ್ರದ ಅದ್ದೂರಿ ಮೆರವಣಿಗೆ



ಬಸವ ಬಳಗಗಳ ಒಕ್ಕೂಟದ ಪೂರ್ವಭಾವಿ ಸಭೆಯನ್ನು ಗಣ್ಯರು ಗಿಡಕ್ಕೆ ನೀರೆರೆದು ಉದ್ಘಾಟಿಸಿದರು.

ಚಾಮರಾಜನಗರ: ವಿಶ್ವಗುರು, ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿಯನ್ನು ಮೇ 22ರಂದು ಅದ್ದೂರಿ ಹಾಗೂ ವೈಭವಯುತವಾಗಿ ಆಚರಿಸಲು ಬಸವ ಬಳಗಗಳ ಒಕ್ಕೂಟದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಸಿದ್ಧಮಲ್ಲೇಶ್ವರ ಮಠದ ವತಿಯಿಂದ ಮೇ. 21, 22 ಗ್ರಾಮಾಂತರ ಬಸವ ಜಯಂತಿ ನಡೆಯುತ್ತಿರುವುದರಿಂದ ಶ್ರೀಗಳ ಜೊತೆಗೂಡಿ ಮೇ.22ರಂದು ಸುಮಾರು 10 ಸಾವಿರಕ್ಕೂ ಹೆಚ್ಚು ಜನರು ಸೇರಿ ಬಸವಣ್ಣನ ಭಾವಚಿತ್ರದ ಮೆರವಣಿಗೆಯು ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮುಖಾಂತರ ಪ್ರಾರಂಭಗೊಂಡು ನಗರದ ಪ್ರಮುಖ ಬೀದಿಗಳಲ್ಲಿ ನಡೆದು ಸಿದ್ದಮಲ್ಲೇಶ್ವರ ವಿರಕ್ತ ಮಠದಲ್ಲಿ ಕೊನೆಗೊಳ್ಳಲಿದೆ ನಂತರ ಶ್ರೀ ಮಠದ ವತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದರು.

ದಿವ್ಯ ಸಾನಿಧ್ಯ ವಹಿಸಿದ್ದ ಚನ್ನಬಸವ ಸ್ವಾಮೀಜಿ ಭಕ್ತರ ಹಾಗೂ ಮಠದ ವತಿಯಿಂದ ಎಲ್ಲಾ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಸಭೆ ಯಲ್ಲಿ ಮುಖಂಡರಾದ ಮೂಡ್ಲುಪುರ ನಂದೀಶ್, ಕಾಳನಹುಂಡಿ ಗುರುಸ್ವಾಮಿ, ಎನ್. ಗುರುಸ್ವಾಮಿ, ಬಿಕೆ ರವಿಕುಮಾರ್, ಎನ್‌ರಿಚ್ ಮಹದೇವ ಸ್ವಾಮಿ, ಶ್ವೇತಾ ಶಶಿಧರ್ ವಸಂತಮ್ಮ, ಸುಧಾ ಮಲ್ಲಣ್ಣ, ಬಾಲಚಂದ್ರಮೂರ್ತಿ, ಮಹದೇವಸ್ವಾಮಿ, ಮಹದೇವಪ್ಪ, ಸೋಮಶೇಖರ್, ಗುರು ಪ್ರಸಾದ್, ಆಲೂರು ಮಲ್ಲು, ಗುರು, ಕೆ. ವೀರಭದ್ರಸ್ವಾಮಿ, ಎಲ್, ಸುರೇಶ್ ಜಗದೀಶ್ ಮೊದಲಾದವರು ಪಾಲ್ಗೊಂಡಿದ್ದರು.

ವರದಕ್ಷಿಣೆ ವಿಚಾರಕ್ಕೆ ಮದುವೆ ಮನೆಯಲ್ಲಿ ಕಾದಾಟ: ಐವರಿಗೆ ತೀವ್ರ ಗಾಯ



ಕೊಳ್ಳೇಗಾಲ, ಏ.29–ವರದಕ್ಷಿಣೆ ವಿಚಾರಕ್ಕಾಗಿ ಮಾತಿನ ಚಕಮಕಿ ವಿಕೋಪಕ್ಕೆ ತಿರುಗಿ ವಧು, ವರ ಎರಡೂ ಕಡೆಯವರು ಚಾಕುವಿನಿಂದ ಪರಸ್ಪರ ಇರಿದು, ಒಬ್ಬರಿಗೊಬ್ಬರು ಬಡಿದಾಡಿಕೊಂಡ ಪರಿಣಾಮ 5 ಮಂದಿ ಗಾಯಗೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಇಲ್ಲಿನ ಮೊಹಮದ್ ಮುದಸಿರ್ ಹಾಗೂ ಗುಲ್ನಾಜ್ ಬೇಗಂ ಮೂರು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಇವರ ಪ್ರೀತಿಗೆ ಎರಡೂ ಮನೆಯವರ ಒಪ್ಪಿಗೆ ಸಿಕ್ಕಿ ವಿವಾಹವೂ ನಿಶ್ಚಯವಾಗಿತ್ತು. ಮದುವೆ ವೇಳೆ ತಮ್ಮ ಶಕ್ತ್ಯಾನುಸಾರ ಎರಡೂ ಕಡೆಯವರು ಚಿನ್ನಾಭರಣ ಕೊಡುವುದಾಗಿ ಮಾತುಕತೆ ಆಗಿತ್ತು.

ಇಂದು ಕೊಳ್ಳೇಗಾಲದ ಆರ್‌ಎಂ ಕನ್‌ವೆನ್ಷನ್ ಹಾಲ್‌ನಲ್ಲಿ ಇವರಿಬ್ಬರ ನಿಖಾ ನಿಗಧಿಯಾಗಿತ್ತು. ಆದರೆ ಕೊಟ್ಟ ಮಾತಿನಂತೆ ವಧುವಿನ ಮನೆಯವರು ಛತ್ರಕ್ಕೆ ಹೋದರಾದರೂ ರಾತ್ರಿ 10 ಗಂಟೆಯಾದರೂ ವರನ ಕಡೆಯವರು ಬಂದಿರಲಿಲ್ಲವೆನ್ನಲಾಗಿದೆ. ರಾತ್ರಿ 1 ಗಂಟೆ ಸಮಯದಲ್ಲಿ ವರ ಮೊಹಮ್ಮದ್ ಮುದಾಸೀರ್ ದೂರವಾಣಿ ಮೂಲಕ ಸಂಪರ್ಕಿಸಿ ಕಾರು, ಮದುವೆ ವೆಚ್ಚಕ್ಕೆ 3 ಲಕ್ಷ ರೂ. ಕೊಡಬೇಕೆಂದು ಇಲ್ಲದಿದ್ದರೆ ಮದುವೆ ಆಗುವುದಿಲ್ಲ ಎಂದು ಬೆದರಿಕೆ ಹಾಕಿದನೆಂದು ವಧುವಿನ ತಂದೆ ಅಬ್ದುಲ್ ವಾಹೀದ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ. ಇದನ್ನು ಕೇಳಿ ನಮ್ಮ ಮಗಳು ಆತನನ್ನು ಮದುವೆ ಆಗಲು ನಿರಾಕರಿಸಿದಳು ಇಂದು ಬೆಳಗ್ಗೆ ಛತ್ರದಲ್ಲಿ ಮದುವೆ ನಿಂತುಹೋದ ಬಗ್ಗೆ ಮಾತನಾಡುತ್ತಾ ನಿಂತಿದ್ದಾಗ ವರನ ಸ್ನೇಹಿತರು, ಸಂಬಂಧಿಕರು ಎಂದು ಹೇಳಿಕೊಂಡ ಗುಂಪೊಂದು ಬೆಳಗ್ಗೆ 7.30ರಲ್ಲಿ ಏಕಾಏಕಿ ಛತ್ರದೊಳಗೆ ನುಗ್ಗಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ನಮ್ಮ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ ಎಂದು ವಾಹೀದ್ ದೂರಿನಲ್ಲಿ ಆಪಾದಿಸಿದ್ದಾರೆ.

15 ಲಕ್ಷ ರೂಪಾಯಿ ಮೌಲ್ಯದ ಕಾರು ಹಾಗೂ 3ಲಕ್ಷ ರೂ ಕೊಡುವಂತೆ ವರನ ಕಡೆಯವರೇ ಡಿಮ್ಯಾಂಡ್ ಮಾಡಿ ಗಲಾಟೆ ಮಾಡಿದ್ರು ಅಂತ ವಧು ಗುಲ್ನಾರ್ ಭಾನು ಹಾಗೂ ಆಕೆಯ ತಮ್ಮ ಅನ್ವರ್ ಪಾಷಾ ಗಂಭೀರ ಆರೋಪ ಮಾಡಿದ್ದಾರೆ. ಈ ಘಟನೆಯಲ್ಲಿ ವರನ ಕಡೆಯ ಸಮೀರ್ ಮತ್ತು ಶೋಯೆಬ್ ಹಾಗೂ ವಧುವಿನ ಕಡೆಯ ಫೈರೋಜ್ ಪಾಷಾ, ಅಬ್ದುಲ್ ವಾಯಿದ್ ಮತ್ತು ಅಬ್ದುಲ್ ಆರೀಫ್ ಗಾಯಗೊಂಡಿದ್ದು, ಕೂಡಲೇ ಅವರನ್ನು ಚಿಕಿತ್ಸೆಗಾಗಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಎರಡೂ ಕುಟುಂಬದವರು ನೀಡಿರುವ ದೂರು–ಪ್ರತಿ ದೂರನ್ನು ಪೊಲೀಸರು ದಾಖಲಿಸಿಕೊಂಡು ವರನ ಕಡೆಯ 9 ಮಂದಿ ಮತ್ತು ವಧುವಿನ ಕಡೆಯ 6 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಉರುಳಿಗೆ ಸಿಲುಕಿ ಜಿಂಕೆ ಸಾವು; ಓರ್ವನ ಬಂಧನ

ಚಾಮರಾಜನಗರ: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಕೆ.ಗುಡಿ ವನ್ಯಜೀವಿ ವಲಯದ ಅಟ್ಟಗೂಳಿಪುರ ಗಸ್ತಿನ ಕೆಂಪಯ್ಯನಕಟ್ಟೆ ಬಳಿ ಉರುಳಿಗೆ ಸಿಲುಕಿ ಒಂದು ಹೆಣ್ಣು ಜಿಂಕೆ ಮೃತಪಟ್ಟಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವನನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ರಂಗಸಂದ್ರ (ಬೂದಿಪಡಗ) ಗ್ರಾಮದ ಸುರೇಶ್ (45) ಬಂಧಿತ ಆರೋಪಿ. ಈತ ಅರಣ್ಯ ಪ್ರದೇಶದೊಳಗೆ ಪ್ರಾಣಿಗಳನ್ನು ಅಕ್ರಮವಾಗಿ ಬೇಟೆಯಾಡಲು ಹಾಕಿದ್ದ ಉರುಳಿಗೆ ಜಿಂಕೆಯೊಂದು ಸಿಲುಕಿ ಮೃತಪಟ್ಟಿತ್ತು. ಈ ಘಟನೆ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು, ಶ್ವಾನದಳದೊಂದಿಗೆ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕ್ವಾರಿಯಲ್ಲಿ ಟಿಪ್ಪರ್ ಉರುಳಿ ಚಾಲಕ ಸಾವು

ಚಾಮರಾಜನಗರ: ಕರಿಕಲ್ಲು ಕ್ವಾರಿಯೊಂದರಲ್ಲಿ ಟಿಪ್ಪರ್ ಉರುಳಿ ಚಾಲಕ ಮೃತಪಟ್ಟ ಘಟನೆ ತಾಲೂಕಿನ ಕುರುಬರಹುಂಡಿ ಗ್ರಾಮದ ಹೊರ ವಲಯದಲ್ಲಿ ನಡೆದಿದೆ.

ತಾಲೂಕಿನ ಅಮ್ಮನಪುರ ಗ್ರಾಮದ ಶಿವಕುಮಾರ್(45) ಮೃತಪಟ್ಟ ಚಾಲಕ. ವಿಷಯ ತಿಳಿದು ಸ್ಥಳಕ್ಕೆ ಪೂರ್ವ ಠಾಣೆಯ ಪೊಲೀಸರು ಹಾಗೂ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಧಾವಿಸಿ ಪರಿಶೀಲನೆ ನಡೆಸಿದರು. ವಾಹನದ ಬ್ರೇಕ್ ವೈಫಲ್ಯದಿಂದ ಅವಘಡ ಸಂಭವಿಸಿರಬಹುದು ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತದೇಹವನ್ನು ನಗರದ ಹೊರವಲಯದಲ್ಲಿರುವ ಸಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದು, ಈ ಘಟನೆ ಸಂಬಂಧ ಪೂರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಸಂಬಂಧ ಕ್ವಾರಿಯ ಮಾಲೀಕ, ಮ್ಯಾನೇಜರ್ ಸೇರಿದಂತೆ ಐವರ ಮೇಲೆ ಪ್ರಕರಣ ದಾಖಲಿಸಲು ಸೂಚಿಸಲಾಗಿದೆ. ಅಲ್ಲದೇ ಇದೇ ರೀತಿ ಗುಂಡ್ಲುಪೇಟೆ ತಾಲೂಕಿನಲ್ಲೂ ಸಂಭವಿಸಿದ ಘಟನೆಯಲ್ಲೂ ಸಹ ಆ ಕ್ವಾರಿಯ ಮಾಲೀಕರು ಸೇರಿ ಐವರ ಮೇಲೆ ಪ್ರಕರಣ ದಾಖಲಾಗಿತ್ತು. ಈ ಎರಡು ಘಟನೆಗಳ ಸಂಬಂಧ ಕೂಲಂಕುಷವಾಗಿ ಪರಿಶೀಲನೆ ನಡೆಸುವಂತೆ ಗಣಿ ಸುರಕ್ಷತಾ ಮಹಾ ನಿರ್ದೇಶನಾಲಯಕ್ಕೆ ಪತ್ರ ಬರೆಯಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ತಿಳಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ಕೆಲಸಕ್ಕೆ ಬೇಕಾಗಿದ್ದಾರೆ
JMF Private Limited
54/A, #1, 9ನೇ ಮೇನ್, 5ನೇ ಕ್ರಾಸ್, ಜವರೇಗೌಡ ಪಾರ್ಕ್ ಹತ್ತಿರ, ಸರಸ್ವತಿಪುರಂ, ಮೈಸೂರು.
18 ವರ್ಷ ಮೇಲ್ಪಟ್ಟ ಹುಡುಗ, ಹುಡುಗಿಯರು, ಟೆಲಿಕಾಲಿಂಗ್ ಮತ್ತು ಮಾರ್ಕೆಟಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರ್ಹತೆ: 10th, 2nd PUC, any Degree.
8088647887

40x60 North facing
40 feet road, Opposite Park.
Price: Rs. 2.90 Cr.
Dattagalli.
8197707001

MUDA & DTCP
Approved Sites
Just @ Rs. 39.99 L*
Near upcoming Cricket Stadium, Bogadi Road.
Call: 9945020212

ಹುಡುಗರು ಬೇಕಾಗಿದ್ದಾರೆ
ಕೆಲಸದ ಅವಧಿ ಬೆಳಗ್ಗೆ 11 ರಿಂದ ರಾತ್ರಿ 8 ಗಂಟೆ ವರೆಗೆ
ದಿ ಗ್ಲಾಸ್ ಹೌಸ್ ಐಸ್ ಕ್ರೀಮ್ ಪಾರ್ಲರ್
ಎಸ್‌ಡಿಎಂ ಕಾಲೇಜ್ ಹತ್ತಿರ, ಲಕ್ಷ್ಮೀಪುರಂ, ಮೈಸೂರು
8970773012, 8762324501

MUDA ALLOTED SITE FOR SALE
30x40 WEST Face
Vijayanagara 4th Stage, 2nd Phase.
(BROKERS EXCUSE).
Call : 9886048471

WANTED
GRAPHIC DESIGNER (FRESHER)
TATA ACE DRIVER
CTP OPERATOR (BASIC COMPUTER KNOWLEDGE)
9448067939 | 9739569260

Nypunya School of Excellence MYSURU DATTAGALLI and R.T.NAGAR
ಬೇಕಾಗಿದ್ದಾರೆ
ಶಾಲಾ ವಾಹನ ಮತ್ತು ಚೇರ್‌ಮೆನ್ ಕಾರು ಚಲಾಯಿಸಲು ಬೆಂಗಳೂರು ಮಾರ್ಗಗಳ ಪರಿಚಯವಿರುವ, ಆಟೋಮೇಟಿಕ್ ಕಾರು ಓಡಿಸಲು ಬಲ್ಲ, ಹೆವಿ ಲೈಸೆನ್ಸ್ ಉಳ್ಳ, ನಜರ್‌ಬಾದ್, ಹೆಬ್ಬಾಳ, ಸಾಹುಕಾರ ಹುಂಡಿ, ಜೆ.ಪಿ.ನಗರ ವ್ಯಾಪ್ತಿಯ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕ ಸಂಖ್ಯೆ
96069 59451

ಬೇಕಾಗಿದ್ದಾರೆ
T.V. ಕೇಬಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯೆ: ಎಸ್‌ಎಸ್‌ಎಲ್‌ಸಿ.
ಅರ್ಹತೆ: ಮೊದಲು ಬಂದವರಿಗೆ
ಕುಂಬಾರಕೊಪ್ಪಲು, ಹೆಬ್ಬಾಳ್, ವಿಜಯನಗರ, ಹಿನಕಲ್.
Mob: 9900192137

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಪ್ಯಾಕಿಂಗ್ ಮಾಡಲು ಹುಡುಗರು ಬೇಕು (ಹುಡುಗರು ಮಾತ್ರ). ಶಿಫ್ಟ್ 1: ಬೆಳಿಗ್ಗೆ 9 ರಿಂದ 3ರವರೆಗೆ. ಶಿಫ್ಟ್ 2: 3 ರಿಂದ ರಾತ್ರಿ 9ರವರೆಗೆ ಕುವೆಂಪುನಗರ
Mob: 9535370330

FOR RENT
• 2 BHK Flats - 2 Nos &
• 2 Shops - 2 Nos (12x27 Ft)
Next to Presentation Public School, Rajivnagar 3rd Stage.
Contact: 8050056100
WhatsApp: 7897775558

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಹೆಲ್ತ್‌ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಸೆಂಟ್ ಮೇರೀಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜು ಪಕ್ಕ, ಮೈಸೂರು
9916908454

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

ಬೇಕಾಗಿದ್ದಾರೆ
ಧಾರ್ಮಿಕ ಟ್ರಸ್ಟ್‌ಗೆ 300+ ಅರೆಕಾಲಿಕ (part time) SSLC/PUC/ ಪದವೀಧರರು Work From Home ವೇತನ: ಕಾರ್ಯಕ್ಷಮತೆ ಆಧಾರಿತ ಗೆ ಅರ್ಜಿಯನ್ನು ಕಳುಹಿಸಿ
gautamatrst@gmail.com
(ವಿವರಗಳು ಇಮೇಲ್ ಮೂಲಕ)

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ (ಎಸ್‌ಎಸ್‌ಎಲ್‌ಸಿ ಪಾಸ್), 12 ಗಂಟೆ ಪಾಳಿ 16 ಸಾವಿರ (ರೂ. 16,000). ESI & PF ಸೌಲಭ್ಯ. ಮೇಟಗಳ್ಳಿ ಸುತ್ತಮುತ್ತ ಪ್ರದೇಶ. ಸಂಪರ್ಕಿಸಿ
9035367083
6361548626

ಹೋಟೆಲ್‌ಗೆ ಬೇಕಾಗಿದ್ದಾರೆ
ಅಡುಗೆ ಸಹಾಯಕರು
ಪಾರ್ಸಲ್ ಹುಡುಗರು.
Mob: 9900661620
ಬಲ್ಲಾಳ್ ಸರ್ಕಲ್

ಸಂಪ್ ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವಿಸ್
ಕೋರ್ ಕಟಿಂಗ್, ಸ್ಲಾಬ್ ವಾಲ್ ಕಟಿಂಗ್ ಗ್ಯಾಸ್ ಲೈನ್, ಪ್ಲಾಮಿಂಗ್ ವರ್ಕ್, ನಮ್ಮಲ್ಲಿ ಈ ಎಲ್ಲಾ ಕೆಲಸ ಒಂದೇ ಕಡೆ ಲಭ್ಯವಿದೆ.
6368150462

ಮಾಂಸದ ಅಂಗಡಿ ಬಾಡಿಗೆಗೆ ದೊರೆಯುತ್ತದೆ
ಹೊಸಹುಂಡಿಗೇಟ್, ಬಂಡಿಪಾಳ್ಯ ಎಪಿಎಂಸಿ ಹಿಂಭಾಗ, ಮೈಸೂರು
9900339977
9448474997

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

LENIN CONVENT - SRIRANGAPATNA
WANTED Experience TEACHERS
HM POST 5 experience (MA,M.Sc, B.Ed., D.Ed) ENGLISH (HS, With fluent English) - 1
Hindi - 1, Kannada - 1, Science - 1, Social Science - 1, Mathematics - 1, Abbacas Vedic teacher, Physical education - 1 (Male)
Attractive salary. Contact -
9844854461, 6362000950
Immediate Appointment

ಹೋಟೆಲ್ ಕೆಲಸಕ್ಕೆ
ಮಾಂಸಹಾರಿ ನಾಟಿ ಶೈಲಿಯ ಅಡುಗೆ ಮಾಡಲು ಭಟ್ಟರು, ಸಪ್ಲೈಯರ್‌ಗಳು ಹಾಗೂ ಹೋಟೆಲ್ ಮತ್ತು ಲಾಡ್ಜಿಂಗ್ ಮ್ಯಾನೇಜ್‌ಮೆಂಟ್ ನೋಡಿಕೊಳ್ಳಲು ಹುಡುಗರು ಮತ್ತು ಪುರುಷರು ಬೇಕಾಗಿದ್ದಾರೆ.
Mob: 9740279617

ಬೇಕಾಗಿದ್ದಾರೆ
ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ಆಸಕ್ತಿಯುಳ್ಳ ಯುವಕ, ಯುವತಿಯರು ತಕ್ಷಣವೇ ಸಂಪರ್ಕಿಸಿ. ಊಟ, ವಸತಿಯೊಂದಿಗೆ ಉತ್ತಮ ಸಂಬಳವನ್ನು ನೀಡಲಾಗುವುದು.
9035023777
7259306665

ತಕ್ಷಣ ಬೇಕಾಗಿದ್ದಾರೆ
Security Manager and Driver / Field Officer.
7411646663
9353046663

INDUSTRIAL SHED FOR SALE
With power
Area: 2000 sq.ft.
Location: Metagalli Indl. Area, Mysore.
Mob: 9482287937

WANTED
For Two Wheeler Service Centre Promoters, Helpers, Mechanics and Receptionist.
Mob: 8050889993

ಅಡುಗೆಯವರು ಬೇಕಾಗಿದ್ದಾರೆ
ಮಾಂಸಹಾರಿ ಹೋಟೆಲ್‌ಗೆ ನಾಟಿ ಸ್ಟೈಲ್ ಅಡುಗೆ ಮಾಡುವ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
Mob: 6364548607

ಬೆಂಗಳೂರಿನಲ್ಲಿ ಉದ್ಯೋಗದಲ್ಲಿರುವ ದಕ್ಷಿಣ ಕನ್ನಡ ಹವ್ಯಕ ಬ್ರಾಹ್ಮಣ ವರನಿಗೆ ಸ್ಮಾರ್ಥ / ಮಾಧ್ವ ವಧು ಬೇಕಾಗಿದ್ದಾರೆ. ವಯಸ್ಸು: 33. ಎತ್ತರ: 5.5" ಕಲಿಕೆ: M.Sc., Physics. ಗೋತ್ರ: ಭಾರಧ್ವಾಜ. ನಕ್ಷತ್ರ: ಅಶ್ವಿನಿ. ರಾಶಿ: ಮೇಷ.
Mob: 9448764244
Whatsapp: 8762361698

WANTED
Teaching staff for reputed institution (Experience Preferred) for all subjects. Transport facilities available. Drop your resume through WhatsApp. Contact no:
8971577685, 9980631121

ತಕ್ಷಣ ಬೇಕಾಗಿದ್ದಾರೆ
ಚೈನೀಸ್/ ನಾರ್ತ್ ಇಂಡಿಯನ್ ಕುಕ್-2, ಸೌತ್ ಇಂಡಿಯನ್ ಕುಕ್ -2, ಐಸ್ ಕ್ರೀಂ ಪಾರ್ಲರ್ (ಹುಡುಗಿಯರು) - 2, ಕ್ಲೀನಿಂಗ್ (ಮಹಿಳೆಯರು)-2 (ವಿವೇಕಾನಂದ ನಗರ ಸುತ್ತಮುತ್ತಲಿನ ವರಿಗೆ ಆದ್ಯತೆ. ಪಾರ್ಟ್ ಟೈಂ ಕೂಡ ಲಭ್ಯ. ಅನುಭವಕ್ಕೆ ತಕ್ಕಂತೆ ಸಂಬಳ). ICE SPICE CAFE VIVEKA NANDA NAGARA, MYSURU
Mob: 9731243077

ಬೇಕಾಗಿದ್ದಾರೆ
1. ಲಾರಿ ಡ್ರೈವರ್ (ವಯಸ್ಸು 25 ರಿಂದ 50) ಸಂಬಳ: 24,000/- ಲಾರಿಗೆ (ಕಾಂಕ್ರೀಟ್ ವಾಹನಕ್ಕೆ) ಮೈಸೂರು ಹಾಗೂ ಸುತ್ತಮುತ್ತ, 2. ಸೆಕ್ಯೂರಿಟಿ ಗಾರ್ಡ್, ಮಂಡ್ಯ, ಮೈಸೂರು ಹಾಗೂ ಬನ್ನೂರು ರೋಡ್, ವಿದ್ಯಾವಿಕಾಸ ಕಾಲೇಜು ಸುತ್ತಮುತ್ತ, 3. ಆಫೀಸ್ ಅಸಿಸ್ಟೆಂಟ್ (MS WORD/EXCEL, KANNADA NUDI) ಸಂಪರ್ಕಿಸಿ:
9900749104
9036745292

ಬೇಕಾಗಿದ್ದಾರೆ
OFFICE WORK AND TELECALLER
Only female. Education: Above 12th Pass.
Salary: 10 to 15.
Mob: 9008799156

Solar Water Heaters


SUNZONE SOLAR SYSTEM
VM Double Road, Kuvempunagar, Mysuru
9845175443

JOB RELATED
Qualification SSLC, PUC, CAVA artist
JOB: INTERIOR WALL TEXTURE DESIGN
Location. Mysore
Mob: 7975815951

FOR SALE
1. 20x30,20x35, 30x40 @ Bogadi,RainbowSchool
2. 20x30/40x60 Sites@ Dattagalli
3. 30x50 Sites@50ft Road, Nr Defence Apartments,Kote Rd
4. 2&3 BHK Apartments, With All Amenities @ Ramkrishna Nagar.
5. 23x35 House @ Srirampura, 20x30 Site @VRL Lyt, Kote Road
PRAKRUTHI PROPERTIES
95386 90359, 90359 90359

ಸೈಟುಗಳು ಮಾರಾಟಕ್ಕಿವೆ
30x40, 30x50, 40x60
ಐಶ್ವರ್ಯ ಗಾರ್ಡನ್, ಮೈಸೂರು-ಹುಣಸೂರು ರಸ್ತೆ.
Mob: 7338172397

ಸೈಟು /ಮನೆ ಮಾರಾಟಕ್ಕಿದೆ
1) ದಟ್ಟಗಳ್ಳಿ 20x30 Duplex (3 ಮನೆ) 30x50, 30x40, 40x60 (3 ಸೈಟುಗಳು). 2) 20x30 - ರಾಮಕೃಷ್ಣನಗರ, ಅರವಿಂದನಗರ. ಮನೆ ಮಾರಾಟಕ್ಕಿದೆ.
9480222708
9945042875
(Reasonable price)

SITE FOR SALE
Site measuring 30'x40'(1276 Sft) at Bhoomika Krishna Layout near Yelwal is for sale. Contact
9845475075

ಬಾಡಿಗೆಗೆ ದೊರೆಯುತ್ತದೆ
ಶ್ರೀ ದರ್ಶಿನಿ ಫಂಕ್ಷನ್ ಹಾಲ್ ಹೂಟಗಳ್ಳಿ, ಮೈಸೂರು.
ಸಂಪರ್ಕಿಸಿ:
Mob: 9606026489

ಖಾಸಗಿ ಶಾಲೆಯಲ್ಲಿ
ಹೌಸ್‌ಕೀಪಿಂಗ್ ಕೆಲಸಕ್ಕಾಗಿ (ಇಬ್ಬರು ಹೆಂಗಸರು). ಸೆಕ್ಯೂರಿಟಿ ಕೆಲಸಕ್ಕಾಗಿ (ಇಬ್ಬರು ಗಂಡಸರು) ಹಾಗೂ ಅಟೆಂಡರ್ ಕೆಲಸಕ್ಕಾಗಿ (ಒಬ್ಬ ಗಂಡಸು) ಬೇಕಾಗಿದ್ದಾರೆ.
ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:
Mob: 8197983888

ಸ್ಟಾಫ್ ನರ್ಸ್ ಹುದ್ದೆಗಾಗಿ ಪ್ರಕಟಣೆ
1. ರೋಗಿಗಳ ಆರೋಗ್ಯದ ಮೇಲೆ ನಿಗಾ ಇಡುವುದು ಮತ್ತು ವೈದ್ಯರ ಸೂಚನೆಯಂತೆ ಚಿಕಿತ್ಸೆ ನೀಡುವುದು.
2. ರೋಗಿಗಳ ಆರೋಗ್ಯ ವರದಿಗಳು ಮತ್ತು ಚಿಕಿತ್ಸಾ ವಿವರಗಳನ್ನು ನಿಖರವಾಗಿ ದಾಖಲಿಸುವುದು. ವಿದ್ಯಾರ್ಹತೆ: ಬಿ.ಎಸ್ಸಿ ನರ್ಸಿಂಗ್ ಅಥವಾ ಜಿ.ಎನ್.ಎಂ. ಸಂಪರ್ಕಿಸಿ:
Mob: 7349278501

ಸೈಟು ಮಾರಾಟಕ್ಕಿದೆ
30x40 W/F
JSS ಹಿರಿಯ ವಿದ್ಯಾರ್ಥಿಗಳ ಬಡಾವಣೆ, ವರುಣಾ ಕೆರೆ ಪಕ್ಕ ಟಿ.ನರಸೀಪುರ ರಸ್ತೆ.
Mob: 7338445401

ಬೇಕಾಗಿದ್ದಾರೆ
ಹೋಟೆಲ್ ಉದ್ಯಮದಲ್ಲಿ ಹೌಸ್‌ಕೀಪಿಂಗ್ ಮತ್ತು ವೇಟರ್ ಅನುಭವಿ ಮಹಿಳೆಯರು ಮತ್ತು ಪುರುಷರಿಗೆ ಅವಕಾಶ, ಹೋಟೆಲ್ ಗೋಲ್ಡನ್ ಕ್ಯಾಸಲ್, ನಂ. 3615/1 28/1 ಹಳೆಯ ಆರ್.ಎಂ. ಎದುರು, ಟಿವಿಎಸ್ ಪಕ್ಕ, ಸಯ್ಯಾಜಿ ರಾವ್ ರಸ್ತೆ, ಮೈಸೂರು-570021,
ಇ-ಮೇಲ್: gemysuru@gmail.com
9845293146
9108011851

REQUIRED
Operators Required for Reputed Company in Hootagalli, Salary up to 24K Based on Experience ESI, PF, LUNCH Available Contract Basis Only, Contact
7204912450

Nypunya School of Excellence MYSURU DATTAGALLI and R.T.NAGAR
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ನಜರ್‌ಬಾದ್, ಹೆಬ್ಬಾಳ, ಜೆ.ಪಿ.ನಗರ, ಉತ್ತನಹಳ್ಳಿ ಅಥವಾ ಹೊಸಹುಂಡಿಯ ವ್ಯಾಪ್ತಿಯಲ್ಲಿರುವ ಮಹಿಳಾ ಆಯಾ ಬೇಕಾಗಿದ್ದಾರೆ.
ಸಂಪರ್ಕ ಸಂಖ್ಯೆ
96069 59451

ಕಳೆದಿದೆ
N.S. ಲಕ್ಷ್ಮಿನಾರಾಯಣ ಇವರಿಗೆ ಸೇರಿದ ಸ್ವತ್ತು ನಿವೇಶನ ಸಂಖ್ಯೆ 213, ಕೆಸರೆ 2ನೇ ಹಂತ, ಮೈಸೂರು, ಇದರ ಮಂಜೂರಾತಿ ಪತ್ರ(ಸುಬ್ರಮಣ್ಯ ರಾಜೇ ಅರಸ್ ಇವರಿಗೆ ಮಂಜೂರಾಗಿದ್ದು) ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ.
9019841234

ಬೇಕಾಗಿದ್ದಾರೆ
Offset ಪ್ರಿಂಟಿಂಗ್ ಮಿಷಿನ್ Single Colour Double Demmy sizeಗೆ ಆಪರೇಟರ್ ಬೇಕಾಗಿದ್ದಾರೆ. Full time ಅಥವಾ Part time ಕೆಲಸಕ್ಕೆ. ಸಂಪರ್ಕಿಸಿ
9449114120
7795563237

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಏರಿಯಾ 8 ಗಂಟೆ ಪಾಳಿ(ಶಿಫ್ಟ್)ಯಲ್ಲಿ ಕೆಲಸ ಮಾಡುವ ಪುರುಷ ಹೆಡ್ ಸೆಕ್ಯೂರಿಟಿ ಗಾರ್ಡ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. SSLC ಹಾಗೂ PUC ಓದಿರಬೇಕು, ಅನುಭವವಿರಬೇಕು, ವೇತನ ತಿಂಗಳಿಗೆ 22000/- ರೂಗಳು ಸಂಪರ್ಕಿಸಿ.
9731976148

SITE FOR SALE
Residential site measuring 30'x50' near by Kadakola Industrial area is for immediate Sale.
9845475075

WANTED FOR PETROL BUNK WORKERS
PART TIME OR FULL TIME SALES BOYS OR GIRLS FOR FILLING PETROL/ DIESEL/ GAS. CASHIER PLUS HELPER, EXPERIENCE - SSLC AND ABOVE,
CONTACT:
9901120389
9844002226

airtel
WANTED PROMOTER
Salary 16500/-(ESI, PF)
Incentive, upto 8000/-
8050273519

ಕಳೆದಿದೆ
ಹೀನಾ ಬಾನು, W/o ಶಬ್ಬೀರ್ ಖಾನ್, ಇವರ ಸ್ವತ್ತು ಮನೆ ನಂ. 486, 7ನೇ ಕ್ರಾಸ್, 'ಬಿ' ಬಡಾವಣೆ, ಎಸ್‌ಎಸ್ ನಗರ, ಬನ್ನಿಮಂಟಪ, ಮೈಸೂರು ನಗರ, ಇದಕ್ಕೆ ಸಂಬಂಧಿಸಿದಂತೆ, ರತನ್ ಜೈನ್‌ರವರಿಗೆ ದಿ. 7-5-2010 ರಂದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದು, ಉಪನೋಂದಣಾಧಿಕಾರಿಗಳ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ಸಂಖ್ಯೆ MYN-1-02243-2010-11 ಸಿಡಿ ಸಂಖ್ಯೆ MYND 235 ರಲ್ಲಿ ನೋಂದಾಯಿಸಲಾಗಿದೆ. ಹಾಗೂ ದಿ. 27-1-2011ರಂದು ಸದರಿ ಸ್ವತ್ತಿನ ಕ್ರಯದ ಕರಾರು ರದ್ದು ಸಂಖ್ಯೆ MYN-1-19321-2010-11 ರ ಸದರಿ ಕ್ರಯಪತ್ರ ಹಾಗೂ ರದ್ದಿಯಾತಿ ಪತ್ರ ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ:
Mob: 9343770607

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ಸಂಬಳ : 14000 ರಿಂದ 15000
ವಯಸ್ಸು : 50 ವರ್ಷ ಒಳಗೆ
ಲೇಡಿ ಗಾರ್ಡ್ - (01)
ಸಂಬಳ : 10,000 ರಿಂದ 12,000.
ಸ್ಥಳ : ಮೈಸೂರು ನಗರ, ನಜರ್‌ಬಾದ್, ವಿದ್ಯಾರಣ್ಯಪುರ. ಸಂಪರ್ಕಿಸಿ.
9741616826

ಮೈಸೂರಿನಲ್ಲಿ ಉದ್ಯೋಗ
ಮೈಸೂರಿನ Pvt Limited A.W.G ಕಂಪನಿಗೆ Fresher + Experience ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, PUC, ITI, Diploma and Degree
ವಯೋಮಿತಿ : 18 ರಿಂದ 33 ವರೆಗೆ
ತಿಂಗಳಿಗೆ : 20000 ರಿಂದ 28000ರವರೆಗೆ, (ಉಚಿತ ಊಟ+ವಸತಿ ಇರುತ್ತದೆ.)
ತ್ರಿಶಾ 7349699460

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಪ್ರೀತಿ ಗ್ರಾನೈಟ್ ಮತ್ತು ಹೂಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು,
ಸಂಬಳ: 20500+ W/o(8 hrs)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9880727819
9620667819

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 50 ವರ್ಷದೊಳಗೆ
ಸಂಬಳ: 18000 (8 ಗಂಟೆ, 26 ದಿನಗಳು)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 48 ವರ್ಷದೊಳಗೆ
ಸಂಬಳ : ಸೂಪರ್‌ವೈಸರ್ : 25,000/-
ಸೆಕ್ಯೂರಿಟಿ ಗಾರ್ಡ್: 23,000/- ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

ವೃದ್ಧಾಶ್ರಮ
ಪಾರ್ಶ್ವವಾಯು ಪೀಡಿತರು, ಹಾಸಿಗೆ ಹಿಡಿದವರು ಮತ್ತು ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಸ್ಥಳದಲ್ಲಿ ಇರಿಸಿಕೊಂಡು ನೋಡಿಕೊಳ್ಳುತ್ತೇವೆ. ಶುದ್ಧತೆ,ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ. ಸ್ಥಳ: ಮೈಸೂರು
9916905188

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಹೆಂಗಸರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ನಜರ್‌ಬಾದ್, ಮೈಸೂರು-10
Ph: 9739816440

DOCUMENT LOST
I Peer Khan have lost original allotment Letter of House No. 321, EWS CC Block Hudco I stage, Bannimantap, Mysore-570015. Finders please Contact to Mob :
9611010309

ಖರೀದಿಗೆ ಜಮೀನು ಬೇಕಾಗಿದೆ
ಮೈಸೂರಿನಿಂದ 15 ಕಿ.ಮೀ ಒಳಗೆ 1 ರಿಂದ 3 ಎಕರೆ ಜಮೀನು ಖರೀದಿಗೆ ಬೇಕಾಗಿದೆ. ಮಾಲೀಕರು ಮಾತ್ರ ಕರೆ ಮಾಡಿ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
Ph: 6364795551

ಅಡಿಗೆ ಭಟ್ಟರು ಬೇಕಾಗಿದ್ದಾರೆ
ಮೈಸೂರಿನ ಸರಸ್ವತಿಪುರಂನಲ್ಲಿರುವ ವಸತಿ ನಿಲಯಕ್ಕೆ ನುರಿತ ಸಸ್ಯಹಾರಿ ಭಟ್ಟರು, ಅಡಿಗೆ ಭಟ್ಟರು-1 (ಪುರುಷರು), ಸಹಾಯಕರು -1 (ಮಹಿಳೆಯರು), ದಿನಾಂಕ : 02.5.2026 ಬೆಳಿಗ್ಗೆ 11.00 ಕ್ಕೆ (ಶನಿವಾರ), ಸಂದರ್ಶನಕ್ಕೆ ಹಾಜರಾಗುವುದು. ಹೆಚ್ಚಿನ ಮಾಹಿತಿಗಾಗಿ:
9945313839

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ /ESI ಕೊಡಲಾಗುವದು. ವೇಟರ್/ Supplier, ಕ್ಲೀನಿಂಗ್ / ವಾಷಿಂಗ್ (2nd Shift), Conti Commis 1 or 2 (30,000/- Salary)
93805 87027
88840 66266

ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ
ಡಿಗ್ರಿ ಅಥವಾ PUC ಮಾಡಿರುವ ಮಹಿಳೆಯರಿಗೆ ಚಿನ್ನ ಬೆಳ್ಳಿ ಅಂಗಡಿಯಲ್ಲಿ ಕೆಲಸಕ್ಕೆ ಅವಕಾಶ. ಕಂಪ್ಯೂಟರ್ ಹಾಗೂ ವಾಟ್ಸಾಪ್ ಬಳಸಲು ಬರಬೇಕು, ವಿದ್ಯಾರಣ್ಯಪುರಂ ಸುತ್ತಮುತ್ತ ಇರುವವರಿಗೆ ಮಾತ್ರ ಅವಕಾಶ, ಆಸಕ್ತಿ ಇದ್ದಲ್ಲಿ ಕೆಳಗೆ ಕೊಟ್ಟಿರುವ ನಂಬರ್‌ಗೆ ಕರೆ ನೀಡಿ.
8197393199
9900520298

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ
9844436672

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು, ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ.
9448229184
7899625268
ಕಂಪ್ಯೂಟರ್ ಜ್ಞಾನವುಳ್ಳ ಟೆಲಿಕಾಲರ್‌ಗೆ ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ವೇತನ.

WANTED
Female Candidate For Front Office Executive, Location: Vijayanagar 4th Stage, Mysuru Qualification: Any Degree with good communication skills Salary + incentive, Contact:
8105819378

PLOTS FOR SALE
at Rs 2600 per sq.ft Narayanaguru Nagara layout, Kumarabeedu, 1km from Sobha Retreat Layout, Mysore. Brokers Excuse. Contact:
7483722108

WANTED
Receptionist & Room boys for a lodge. Contact:
08212497185
08212494608

HIRING
For coffee shop/Mysuru Kaapi Male chefs & female house keeping staff salary starting from 6k to 18k Freshers/Experienced Part time /Full time, More details
8147956062

DOCUMENT LOST
I, N. Sudha R/a No. 159, A & B Block, JCS, I Stage, Chamaraja mohalla, Mysore-570023, have lost original Allotment Letter & Possession Certificate related to above mentioned property issued by MUDA. Finders Kindly Contact:
9845449403

CHANGE OF NAME
I, DIVAKAR M, S/o Mariswamy residing at Door No.864, 11th Cross, Gandhinagar, Mysore-570007, Karnataka State, have changed my name from DIVAKAR. M to "DIVAKARA. M" My own free will in front Notary C.R. Seetharam on 13.01.2026 at Mysuru
Sd/- Divakar. M

ಬೇಕಾಗಿದ್ದಾರೆ
ಮೈಸೂರಿನ ಮನೆಯಲ್ಲಿ ಅಡುಗೆ ಮತ್ತು ಮನೆ ಕೆಲಸಕ್ಕೆ ಆರೋಗ್ಯವಂತ ಮಹಿಳೆ, ಉತ್ತಮ ಸಂಬಳ, ಆಹಾರ, ಬಟ್ಟೆ, ವೈದ್ಯಕೀಯ ಆರೈಕೆ ಮತ್ತು ವಸತಿ ಒದಗಿಸಲಾಗುವುದು. ವಯಸ್ಸು, ಭಾಷೆ, ಜಾತಿ ಧರ್ಮ ವೈವಾಹಿಕ ಸ್ಥಿತಿ ಯಾವುದೇ ನಿರ್ಬಂಧವಿಲ್ಲ, ಮಾಲೀಕರನ್ನು ಸಂಪರ್ಕಿಸಿ
9449008336

ತಕ್ಷಣ ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು ಮತ್ತು ಡಿಪ್ಲೋಮಾ ಆದ ಹುಡುಗರು, ಅನುಭವವುಳ್ಳ ಅಕೌಂಟೆಂಟ್‌ಗಳು, ಸೆಕ್ಯೂರಿಟಿ ಗಾರ್ಡುಗಳು ಮತ್ತು ಟೈಲರುಗಳು ಬೇಕಾಗಿದ್ದಾರೆ. ಸಂಪರ್ಕಿಸಿ.
8105249880
7795285485

ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸಲು ಮಹಿಳೆಯರು ಗುತ್ತಿಗೆ ಆಧಾರದ (Casual Labour) ಬೇಕಾಗಿರುತ್ತಾರೆ, ವಯೋಮಿತಿ 18 ರಿಂದ 35 ವರ್ಷದೊಳಗಿನವರು, ವಿದ್ಯಾರ್ಹತೆಯ ಅವಶ್ಯಕತೆ ಇರುವುದಿಲ್ಲ. ಮೇಟಗಳ್ಳಿ ಸುತ್ತಮುತ್ತಲಿನವರಿಗೆ ಆದ್ಯತೆ, ಇಚ್ಛೆ ಉಳ್ಳವರು ಸಂಪರ್ಕಿಸಿ :
6361201110
8152855021

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು), ಇನ್ಫೋಸಿಸ್ ಹತ್ತಿರ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಕುವೆಂಪುನಗರದಲ್ಲಿ, JP Nagara, ವಿದ್ಯಾರಣ್ಯಪುರಂ, ಚಾಮುಂಡಿಪುರಂ, ನಂಜನಗೂಡು, ಕಡಕೊಳ, ಊಟಿ ರೋಡ್ ಹಾಗೂ ಮೈಸೂರು ಸುತ್ತಮುತ್ತ ಬೇಕಾಗಿದ್ದಾರೆ. 16000rs ಸಂಬಳ week off ಇರುತ್ತದೆ...
9606808975
8310098788

ಮೈಸೂರು ಮಿತ್ರ 47 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 11ನೇ ಪುಟ ನೋಡಿ

ಸಂವಿಧಾನದಡಿ ಮುನ್ನಡೆಯಬೇಕಿದ್ದ ಪ್ರಜಾಪ್ರಭುತ್ವ ದಿಕ್ಕೆಟ್ಟಿದೆ

ಐಕ್ಯತಾ ಸಮಾವೇಶದಲ್ಲಿ ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ

ಹೆಚ್.ಡಿ.ಕೋಟೆ, ಏ.29– ದೇಶದ ಸಂವಿಧಾನದ ನಿರ್ದೇಶನದಂತೆ ಮುನ್ನಡೆಯಬೇಕಿದ್ದ ಪ್ರಜಾಪ್ರಭುತ್ವ ಇಂದು ದಿಕ್ಕೆಟ್ಟು ನಿಂತಿದೆ. ಹಾಗಾಗಿ ನಮಗೆ ನಾವೇ ಅರ್ಪಿಸಿಕೊಂಡಿರುವ ಸಂವಿಧಾನಕ್ಕೆ ಅಪಮಾನಿಸುವವರನ್ನು ಕಣ್ತುಂಬಿಕೊಳ್ಳುವ ದೌರ್ಭಾಗ್ಯ ಉಂಟಾಗಿದೆ ಎಂದು ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ತಿಳಿಸಿದರು.

ಹೆಚ್.ಡಿ.ಕೋಟೆ ಮತ್ತು ಸರಗೂರು ದಸಂಸ ವತಿಯಿಂದ ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಅಂಬೇಡ್ಕರ್ ಜಯಂತಿ ಪ್ರಯುಕ್ತ ಆಯೋಜಿಸಿದ್ದ ಬಹುತ್ವದ ಭಾರತವನ್ನು ಛಿದ್ರಗೊಳಿಸುತ್ತಿರುವ ಸರ್ಕಾರಗಳ ದಮನಕಾರಿ ಹುನ್ನಾರ ಖಂಡಿಸಿ ಶೋಷಿತ ತಳ ಸಮುದಾಯಗಳ ಐಕ್ಯತಾ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ರಾಜಕೀಯ ಚಿಂತನೆಗಳು, ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ, ಭ್ರಾತೃತ್ವದ ಆಶಯಗಳು ಭಾರತದ ಸಂವಿಧಾನದಲ್ಲಿ ಅಡಕಗೊಂಡು ವಿಶ್ವ ಮಾನ್ಯತೆ ಪಡೆಯುತ್ತಿವೆ ಎಂದರು.

ವಾಸ್ತವದಲ್ಲಿ ಭಾರತವು ಒಂದು ಧರ್ಮ ಅಥವಾ ಒಂದು ಜನಾಂಗಕ್ಕೆ ಸೀಮಿತವಾದ ದೇಶವಲ್ಲ. ಭೌಗೋಳಿಕವಾಗಿ ಅತ್ಯಂತ ವಿಸ್ತಾರವಾದ ಪ್ರತಿ 40 ಕಿಮೀಗೆ ಜಾತಿ, ಮತ, ಭಾಷೆ, ಆಚರಣೆಗಳು, ಸಂಸ್ಕೃತಿ, ವಿಚಾರಗಳು, ಆಹಾರ, ಉಡುಗೆ–ತೊಡುಗೆಗಳಲ್ಲಿ ಭಿನ್ನವಾಗಿವೆ. ಆಯಾ ಪ್ರದೇಶಗಳ ಸಮಸ್ಯೆಗಳು, ಸವಾಲುಗಳು ಬೇರೆ ಬೇರೆಯೇ ಇದೆ. ಪ್ರತಿಯೊಂದು ರಾಜ್ಯಗಳ ಜನತೆಗೆ ನಾವೆಲ್ಲಾ ಭಾರತೀಯ ಪ್ರಜೆಗಳು ಎಂಬ ಸಾಂವಿಧಾನಿಕ ಭಾವನಾತ್ಮಕ ಸಂಬಂಧಗಳನ್ನು ಹೊರತು ಪಡಿಸಿದರೆ ಇನ್ನಾವುದೇ ಸಂಬಂಧಗಳಿಲ್ಲ. ಇಂತಹ ವೈವಿಧ್ಯಮಯ ಗಣರಾಜ್ಯಗಳ ಒಕ್ಕೂಟವಾಗಿರುವ ಬಹುತ್ವದ ಭಾರತವನ್ನು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಛಿದ್ರಗೊಳಿಸುತ್ತಿದೆ. ಬಂಡವಾಳಶಾಹಿಗಳ ಹಿತಾಸಕ್ತಿಗಾಗಿ ಹಿಂದೂ ರಾಷ್ಟ್ರ ನಿರ್ಮಾಣದ ಹೆಸರಿನಲ್ಲಿ ಸನಾತನ ಮೂಲಭೂತ ವಾದದ ಋಣಾತ್ಮಕ ಅಸಮಾನತೆಗಳನ್ನು ಜನರ ಮೇಲೆ ಹೇರಲು ಹುನ್ನಾರ ನಡೆಸುತ್ತಿದೆ ಎಂದು ಆರೋಪಿಸಿದರು.



ಹೆಚ್.ಡಿ.ಕೋಟೆಯಲ್ಲಿ ಶೋಷಿತ ತಳ ಸಮುದಾಯಗಳ ಐಕ್ಯತಾ ಸಮಾವೇಶ ನಡೆಯಿತು.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಆರಂಭದಲ್ಲಿ ಸಂವಿಧಾನ ಬದಲಿಸುತ್ತೇವೆ ಎನ್ನುತ್ತಿದ್ದ ಆರ್‌ಎಸ್‌ಎಸ್‌ನವರು ಅದು ಅಸಾಧ್ಯವಾದಾಗ ಸರ್ಕಾರದ ಮೂಲಕ ದಲಿತರು, ಕಾರ್ಮಿಕರು, ರೈತರು, ಆದಿವಾಸಿಗಳು, ಮಹಿಳೆಯರ ಪರ ಇದ್ದ ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ಪಿಟಿಸಿಎಲ್ ಕಾಯ್ದೆ, ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆ, ಮಹಿಳಾ ದೌರ್ಜನ್ಯ ವಿರೋಧಿ ಕಾಯ್ದೆ, ಶಿಕ್ಷಣ ಹಕ್ಕು ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ, ಕಾರ್ಮಿಕರ ಕಲ್ಯಾಣ ಕಾಯ್ದೆಗಳಂತಹ ಶೋಷಿತ ಸಮುದಾಯಗಳಿಗೆ ಸಂವಿಧಾನಬದ್ಧ ಹಕ್ಕುಗಳನ್ನು ಖಾತರಿಪಡಿಸಿ ರಕ್ಷಣೆ ಒದಗಿಸುತ್ತಿದ್ದ ಹಲವು ಕಾಯ್ದೆಗಳಿಗೆ ತಿದ್ದುಪಡಿ ತಂದು ದುರ್ಬಲಗೊಳಿಸಿ ಸಂವಿಧಾನದ ಮೂಲ ಆಶಯಗಳನ್ನೇ ಬುಡಮೇಲು ಮಾಡುತ್ತಿದೆ ಎಂದರು.

> ಮತದಾನದ ಹಕ್ಕನ್ನು ದೇಶದ ಪ್ರತಿಯೊಬ್ಬರಿಗೂ ನೀಡಿದ್ದು ಅಂಬೇಡ್ಕರ್. ಆದರೆ ಅದನ್ನು ತಂತ್ರಗಾರಿಕೆ ಮೂಲಕ ಕಿತ್ತುಕೊಳ್ಳಲು ಬಿಜೆಪಿಯವರು ಮುಂದಾಗಿದ್ದಾರೆ. ಇದರ ಬಗ್ಗೆ ಜಾಗೃತಿ ಮೂಡಿಸಲು ಸಂಘ ಸಂಸ್ಥೆಗಳು ಮುಂದಾಗಬೇಕಾಗಿದೆ. ನಾನು ಸಹ ಇದಕ್ಕೆ ಬೆಂಬಲವಾಗಿದ್ದೇನೆ. ಅಂಬೇಡ್ಕರ್ ಅವರ ಮೀಸಲಾತಿಯಿಂದ ಎಸ್ಸಿಎಸ್ಟಿ ಸಮುದಾಯ ಹುದ್ದೆ ಮತ್ತು ಉನ್ನತ ಸ್ಥಾನಮಾನ ಪಡೆಯಲು ಸಾಧ್ಯವಾಗಿದೆ. – **ಅನಿಲ್ ಚಿಕ್ಕಮಾದು, ಶಾಸಕ.**

ಮುಖ್ಯ ಭಾಷಣಕಾರ, ಜಾಗೃತ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಡಾ.ಹೆಚ್.ವಿ.ವಾಸು, ಮಾನಸ ಗಂಗೋತ್ರಿ ಉಪನ್ಯಾಸಕಿ ಡಾ.ಟಿ.ಪದ್ಮಶ್ರೀ ಮಾತನಾಡಿದರು. ದಸಂಸ ಜಿಲ್ಲಾ ಸಂಚಾಲಕ ನಿಂಗರಾಜು, ಶಂಭುಲಿಂಗಸ್ವಾಮಿ, ಜಿಲ್ಲಾ ಖಜಾಂಚಿ ಶಿವಬುದ್ಧಿ, ತಾಲೂಕು ಸಂಚಾಲಕ ಮಹೇಶ್, ಶಿವಶಂಕರ್, ದಾಸಯ್ಯ, ಸಿದ್ದರಾಜು, ಅಂಕಯ್ಯ, ನಾಗರಾಜು, ಪುಟ್ಟಸ್ವಾಮಿ, ಕಾಳಸ್ವಾಮಿ, ರಾಮಲಿಂಗಪ್ಪ, ಪುಟ್ಟಯ್ಯ, ನಾಗಣ್ಣ, ಕಲ್ಲೇಶ್, ಪ್ರಕಾಶ್, ಶಿವ, ಚನ್ನ, ಶಾಂತರಾಜು, ಲೋಕೇಶ್, ಪ್ರಭು, ದೊಡ್ಡಯ್ಯ, ಚಿಕ್ಕಯ್ಯ, ದೇವಣ್ಣ, ಸೋಮಣ್ಣ, ರಮೇಶ್, ಪುಟ್ಟರಾಜು ಸೇರಿದಂತೆ ಇತರರಿದ್ದರು.

ನಂ.ಗೂಡಲ್ಲಿ ಬೈಕ್‌ಗೆ ಲಾರಿ ಡಿಕ್ಕಿ
ಪತ್ನಿ ಸ್ಥಳದಲ್ಲೇ ಸಾವು, ಪತಿಗೆ ತೀವ್ರ ಗಾಯ

ನಂಜನಗೂಡು, ಏ.29– ಬೈಕ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಪತ್ನಿ ಸ್ಥಳದಲ್ಲೇ ಸಾವನ್ನಪ್ಪಿ, ಪತಿ ತೀವ್ರ ಗಾಯಗೊಂಡಿರುವ ಘಟನೆ ನಗರದ ರೈಲ್ವೆ ಮೇಲ್ಸೇತುವೆ ಬಳಿ ನಡೆದಿದೆ.


ರಾಣಿ

ನಂಜನಗೂಡು ತಾಲೂಕಿನ ಗೆಜ್ಜಗನಹಳ್ಳಿ ಗ್ರಾಮದ ನಿವಾಸಿ ರಾಣಿ (40) ಸ್ಥಳದಲ್ಲೇ ಸಾವನ್ನಪ್ಪಿದ್ದು, ಇವರ ಪತಿ ನಾಗೇಂದ್ರ(48) ಗಂಭೀರವಾಗಿ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ದಂಪತಿಗೆ ಓರ್ವ ಪುತ್ರ, ಪುತ್ರಿ ಇದ್ದಾರೆ.

ನಾಗೇಂದ್ರ ಮತ್ತು ರಾಣಿ ದಂಪತಿ ನಗರದ ಮೈಸೂರು–ಊಟಿ ಮುಖ್ಯ ರಸ್ತೆಯಲ್ಲಿರುವ ಎಂ.ಕೆ.ಕಲ್ಯಾಣ ಮಂಟಪದಲ್ಲಿ ನಡೆದ ಆರತಕ್ಷತೆ ಸಮಾರಂಭ ಮುಗಿಸಿಕೊಂಡು ಕಾರ್ಯ ನಿಮಿತ್ತ ಮೈಸೂರಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಕೇರಳ ಮೂಲದ ಲಾರಿ ಗುಂಡ್ಲುಪೇಟೆ ಕಡೆಯಿಂದ ಅತೀ ವೇಗವಾಗಿ ಬಂದು ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ರಸ್ತೆ ಬಲ ಭಾಗಕ್ಕೆ ಬಿದ್ದ ಗೃಹಿಣಿ ರಾಣಿ ತಲೆ ಮೇಲೆ ಲಾರಿ ಚಕ್ರ ಹರಿದು ಆಕೆ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈಕೆ ಪತಿ ನಾಗೇಂದ್ರ ರಸ್ತೆಯ ಎಡಭಾಗಕ್ಕೆ ಬಿದ್ದ ಪರಿಣಾಮ ಗಂಭೀರವಾಗಿ ಗಾಯಗೊಂಡು ಮೈಸೂರಿನ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ಬಳಿಕ ಚಾಲಕ ಪರಾರಿಯಾಗಿದ್ದಾನೆ ಎನ್ನಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಸಂಚಾರಿ ಠಾಣೆ ಪೊಲೀಸರು ಲಾರಿ ವಶಕ್ಕೆ ಪಡೆದು ಶವವನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ನಂಜನಗೂಡು ಸಂಚಾರಿ ಠಾಣೆಯಲ್ಲಿ ದೂರು ದಾಖಲಾಗಿದೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಹುಣಸೂರು, ಏ.29– ನಗರದ ಸಂತ ಜೋಸೆಫರ ಶಾಲೆ ವಿದ್ಯಾರ್ಥಿನಿ, ಸ್ಟೋರ್ ಬೀದಿ ನಿವಾಸಿ ಟಿಂಬರ್ ಮರ್ಚೆಂಟ್ ಹೆಚ್.ಎಸ್.ರವಿಕುಮಾರ್, ರಾಜೇಶ್ವರಿ ದಂಪತಿ ಪುತ್ರಿ ಹೆಚ್.ಆರ್.ಲಲನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 603(ಶೇ.96.48%) ಅಂಕದೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಶ್ರೀಬಣ್ಣಾರಿ ಮಾರಿಯಮ್ಮ ದೇವಸ್ಥಾನದ 81ನೇ ವಾರ್ಷಿಕೋತ್ಸವ
ನೋಡುಗರ ಮೈನವಿರೇಳಿಸಿದ ಬಾಯಿ ಬೀಗ ಕಾರ್ಯಕ್ರಮ

ತಿ.ನರಸೀಪುರ, ಏ.29– ಶ್ರೀಬಣ್ಣಾರಿ ಮಾರಿಯಮ್ಮ ದೇವಸ್ಥಾನದ 81ನೇ ವಾರ್ಷಿಕೋತ್ಸವದ ಅಂಗವಾಗಿ ಪಟ್ಟಣದಲ್ಲಿ ಬುಧವಾರ ನಡೆದ ಸಾಮೂಹಿಕ ಬಾಯಿ ಬೀಗ ಕಾರ್ಯಕ್ರಮ ಗಮನ ಸೆಳೆಯುವುದರ ಜೊತೆಗೆ ನೋಡುಗರ ಮೈನವಿರೇಳುವಂತೆ ಮಾಡಿತು.

ಪಟ್ಟಣದ ಕೊಳ್ಳೇಗಾಲ–ಚಾಮರಾಜನಗರ ರಸ್ತೆಯಲ್ಲಿರುವ ಬಣ್ಣಾರಿ ಮಾರಿಯಮ್ಮನವರ ದೇವಸ್ಥಾನದ ಟ್ರಸ್ಟ್ ವತಿಯಿಂದ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ, ಪೂಜಾ ಕೈಂಕರ್ಯಗಳು ನಡೆದವು. ಈ ವೇಳೆ ನಡೆದ ಸಾಮೂಹಿಕ ಬಾಯಿ ಬೀಗ ಕಾರ್ಯಕ್ರಮದಲ್ಲಿ ಮಕ್ಕಳು, ಯುವಕ–ಯುವತಿಯರು, ಗೃಹಿಣಿಯರು, ಮಂಗಳಮುಖಿಯರು ಸೇರಿದಂತೆ 600ಕ್ಕೂ ಹೆಚ್ಚು ಮಂದಿ ಬಾಯಿಗೆ ಬೀಗ ಹಾಕಿಸಿಕೊಂಡು ದೇವಿಗೆ ತಮ್ಮ ಹರಕೆ ತೀರಿಸಿದರು.

ಸುಮಾರು 1 ರಿಂದ 20 ಅಡಿ ಉದ್ದದ ಕಬ್ಬಿಣ ಹಾಗೂ ಬೆಳ್ಳಿ ಸರಳುಗಳಿಂದ ತಯಾರಿಸಲಾದ ಚೂಪಾದ ತ್ರಿಶೂಲಾಕಾರಾದ ಬಾಯಿಬೀಗವನ್ನು ಭಕ್ತರಿಗೆ ಹಾಕಲಾಯಿತು. ನಿಂಬೆಹಣ್ಣನ್ನು ಸೂಜಿಯಿಂದ ಪೋಣಿಸಿ ಮೈ ತುಂಬಾ ಹೊಲಿಗೆ ಹಾಕಿಸಿಕೊಂಡು ಹರಕೆ ತೀರಿಸಿದ ಭಕ್ತರು ಗಮನ ಸೆಳೆದರು.


ತಿ.ನರಸೀಪುರದಲ್ಲಿ ನಡೆದ ಬಾಯಿ ಬೀಗ ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು.

ಬಾಯಿ ಬೀಗ ಹಾಕಿಸಿಕೊಂಡ ಭಕ್ತರ ಮೆರವಣಿಗೆ ಪಟ್ಟಣದ ವಿವಿಧ ಬೀದಿಗಳಲ್ಲಿ ಸಂಚರಿಸಿ ಬಣ್ಣಾರಿ ಮಾರಿಯಮ್ಮನವರ ದೇವಾಲಯ ತಲುಪಿತು. ಬೆಳಗ್ಗೆ 6 ಗಂಟೆಯಿಂದಲೇ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗದ ಸಂಗಮದಲ್ಲಿ ಸ್ನಾನ ಮಾಡಿದ ಹರಕೆ ಹೊತ್ತ ಭಕ್ತರು ಸರತಿ ಸಾಲಿನಲ್ಲಿ ನಿಂತು ಬಾಯಿ ಬೀಗ ಹಾಕಿಸಿಕೊಂಡರು. ತಮಿಳುನಾಡಿನ ಯುವರಾಜ್ ಎಂಬುವರು ಬಾಯಿಬೀಗ ಹಾಕುವ ಕಾಯಕ ಕೈಗೊಂಡರು. ದೇವಸ್ಥಾನ ಟ್ರಸ್ಟ್‌ನ ಸದಸ್ಯರೂ ಕೂಡ ಬಾಯಿ ಬೀಗ ಹಾಕುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದು ವಿಶೇಷವಾಗಿತ್ತು.

ಈ ವೇಳೆ ಬಣ್ಣಾರಿ ಮಾರಿಯಮ್ಮ ಟ್ರಸ್ಟ್ ಅಧ್ಯಕ್ಷ ಮಂಜುನಾಥಸ್ವಾಮಿ, ಸುರೇಶ್, ರಾಜಶೇಖರ, ಲಿಖಿತ್, ಹರೀಶ್, ವಾಸು, ರಾಜ ಸೇರಿದಂತೆ ಕಮಿಟಿ ಸದಸ್ಯರು, ಭಕ್ತರು ಇದ್ದರು.

ನಾಳೆ ನಂ.ಗೂಡಲ್ಲಿ ಭಗವಾನ್ ಬುದ್ಧ ಜಯಂತಿ
ದಸಂಸ ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್

ನಂಜನಗೂಡು, ಏ.29– ಧಮ್ಮ ಧ್ವನಿ ಸೇವಾ ಟ್ರಸ್ಟ್ ತಥಾಗತ ಬುದ್ಧ ವಿಹಾರ ವತಿಯಿಂದ ಮೇ 1ರಂದು ಭಗವಾನ್ ಬುದ್ಧ ಜಯಂತಿ ಆಚರಿಸಲಾಗುವುದು ಎಂದು ದಸಂಸ ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಗವಾನ್ ಬುದ್ಧ ಅವರು ವೈಶಾಖ ಹುಣ್ಣಿಮೆಯಂದು ಜನಿಸಿದ್ದು, ಅದೇ ಹುಣ್ಣಿಮೆಯಂದು ಅವರು ಜ್ಞಾನೋದಯ ಪಡೆದು ಮುಂದೆ ಪರಿನಿಬ್ಬಾಣ ಹೊಂದಿದರು. ಆದ್ದರಿಂದ ಮೇ 1ರಂದು ವೈಶಾಖ ಹುಣ್ಣಿಮೆಯಂದು ಬುದ್ಧ ಪೂರ್ಣಿಮೆ ಆಚರಿಸಲಾಗುವುದು. ಅಂದು ಸಂಜೆ 6.30ಕ್ಕೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಬುದ್ಧ ನಗರದಲ್ಲಿರುವ ತಥಗತ ಬುದ್ಧ ವಿಹಾರದವರೆಗೆ ಬೌದ್ಧ ಉಪಾಸಕ ಮತ್ತು ಉಪಾಸಕೀಯರೆಲ್ಲರೂ ಶ್ವೇತ ವಸ್ತ್ರಧಾರಿಗಳಾಗಿ ಧರ್ಮ ದೀಪದೊಂದಿಗೆ ಮೌನ ಮೆರವಣಿಗೆ ನಡೆಸಲಾಗುವುದು. ನಂತರ ವೇದಿಕೆ ಕಾರ್ಯಕ್ರಮ ನಡೆಸಲಾಗುವುದು ಎಂದರು.


ಸುದ್ದಿಗೋಷ್ಠಿಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್ ಮಾತನಾಡಿದರು.

ಧಮ್ಮ ಧ್ವನಿ ಸೇವಾ ಟ್ರಸ್ಟ್ ತಥಾಗತ ಬುದ್ಧ ವಿಹಾರದ ಅಧ್ಯಕ್ಷ ಚಿನ್ನಂಬಳ್ಳಿ ಮಹದೇವು ಮಾತನಾಡಿ, ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಸಾವಿರ ಮಂದಿ ಸೇರುವ ನಿರೀಕ್ಷೆ ಇದೆ. ಎಲ್ಲರಿಗೂ ಉಪಹಾರದ ವ್ಯವಸ್ಥೆ ಮಾಡಲಾಗುವುದು. ಜಗತ್ತಿನ ಶಾಂತಿ ಮತ್ತು ಸೌಹಾರ್ದತೆ, ನೆಮ್ಮದಿಯ ಬದುಕಿಗಾಗಿ ಪ್ರಾರ್ಥನೆ ಮಾಡುತ್ತಾ ಮೌನ ಮೆರವಣಿಗೆಯಲ್ಲಿ ಸಾಗಿ ಬೆಳಕಿನ ಪೂರ್ಣಿಮೆಯನ್ನು ಆಚರಿಸಲು ಎಲ್ಲಾ ಸಾರ್ವಜನಿಕರು ಕುಟುಂಬ ಸಮೇತರಾಗಿ ಆಗಮಿಸಿ ಸಮಾರಂಭ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಟ್ರಸ್ಟ್ ನಿರ್ದೇಶಕ ಮಲ್ಲಹಳ್ಳಿ ನಾರಾಯಣ ಮಾತನಾಡಿ, ಭಗವಾನ್ ಬುದ್ಧ ಅವರ ಸಂದೇಶಗಳನ್ನು ಜನರಿಗೆ ತಿಳಿಸಿ ಜಾಗೃತಿ ಮೂಡಿಸುವ ಸಲುವಾಗಿ, ತಮ್ಮ ಧ್ವನಿ ಸೇವಾ ಟ್ರಸ್ಟ್ ತಥಗತ ಬುದ್ಧ ವಿಹಾರದಲ್ಲಿ ಪ್ರತಿ ತಿಂಗಳ ಹುಣ್ಣಿಮೆಯಂದು ಪ್ರವಚನ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸ್, ಇಮ್ಮಾವು ರಘು, ತ್ರಿನೇಶ್, ದಾಸಪ್ಪ, ವಾಸುದೇವಮೂರ್ತಿ, ಉಪಸ್ಥಿತರಿದ್ದರು.

ನಾಳೆ ಅಂಬೇಡ್ಕರ್ ಜಯಂತಿ

ನಂಜನಗೂಡು, ಏ.29– ಡಾ.ಅಂಬೇಡ್ಕರ್ ಯುವ ವೇದಿಕೆ ವತಿಯಿಂದ ತಾಲೂಕಿನ ಸಿಂಧುವಳ್ಳಿಯಲ್ಲಿ ಮೇ 1ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.



ಅಂದು ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ದರ್ಶನ್ ಧ್ರುವನಾರಾಯಣ್ ವಹಿಸಲಿದ್ದು, ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ್ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಮಾಜಿ ಶಾಸಕ ಬಿ.ಹರ್ಷವರ್ಧನ್, ಕಳಲೆ ಎಂ.ಕೇಶವಮೂರ್ತಿ, ಪಿಡಿಓ ಎಂ.ಬಿ.ಶಬನಾ, ಗ್ರಾಪಂ ಮಾಜಿ ಅಧ್ಯಕ್ಷ ಹೊಣಕಾರನಾಯಕ, ನೋಡಲ್ ಅಧಿಕಾರಿ ಸುಕನ್ಯಾ, ಉಪ ತಹಸೀಲ್ದಾರ್ ಮಹೇಶ್ ಕುಮಾರ್ ಭಾಗವಹಿಸಲಿದ್ದಾರೆ.

ಮಹದೇಶ್ವರರು ಸಮಾನತೆ ಸಾರಿದ ಪುಣ್ಯ ಪುರುಷರು
ಶಾಸಕ ಅನಿಲ್ ಚಿಕ್ಕಮಾದು ಬಣ್ಣನೆ

ಸರಗೂರು, ಏ.29– ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉತ್ತೇಜಿಸುವ ಕೆಲಸವನ್ನು ಮಠಮಾನ್ಯಗಳು ಮಾಡಿಕೊಂಡು ಬರುತ್ತಿವೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ನಂಜೀಪುರದಲ್ಲಿ ನಡೆದ ಶ್ರೀಮಹದೇಶ್ವರ ದೇವಸ್ಥಾನ ಉದ್ಘಾಟನೆ ಹಾಗೂ ಕಳಸಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಡವರ ಪಾಲಿನ ಮಹದೇಶ್ವರರು ಸರ್ವರಲ್ಲಿಯೂ ಸಮಾನತೆ ಸಾರಿದ ಪುಣ್ಯ ಪುರುಷರು. ಮಹದೇಶ್ವರರನ್ನು ಮಾನವೀಯತೆ ತತ್ವದ ಮೇಲೆ ನಂಬಿಕೆ ಇಟ್ಟು ಮಕ್ಕಳಿಂದ ಹಿರಿಯರ ತನಕ ಆರಾಧಿಸುತ್ತಾ ಬಂದಿದ್ದಾರೆ. ನಂಜೀಪುರದಲ್ಲಿ ವೈಭವಯುತವಾಗಿ ಮಹದೇಶ್ವರಸ್ವಾಮಿ ದೇವಾಲಯ ಉದ್ಘಾಟಿಸಿ, ಕಳಸಾರೋಹಣವನ್ನು ಪೂಜ್ಯ ಶ್ರೀಗಳು ನೆರವೇರಿಸಿದ್ದಾರೆ. ಗ್ರಾಮಸ್ಥರು ಒಟ್ಟಾಗಿ ದೇವಾಲಯ ನಿರ್ಮಿಸಿ, ಮಹದೇಶ್ವರರನ್ನು ಪ್ರತಿಷ್ಠಾಪಿಸಿ ಉತ್ಸವ ನಡೆಸಿದ್ದೀರಿ. ಇದಕ್ಕಾಗಿ ಎಲ್ಲರಿಗೂ ಅಭಿನಂದನೆಗಳು ಎಂದು ತಿಳಿಸಿದರು.

ಇದೇ ವೇಳೆ ದೇವಾಲಯದಿಂದ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನಾ ಶ್ರೀಮಹದೇಶ್ವರ ದೇವಸ್ಥಾನ ಉದ್ಘಾಟನೆ, ಕಳಸಾರೋಹಣವನ್ನು ಕಂತೆ ಮಾದಪ್ಪನ ಬೆಟ್ಟದ ಶ್ರೀಗಳು ನೆರವೇರಿಸಿದರು. ದೇವನೂರಿನ ಶ್ರೀಗುರುಮಲ್ಲೇಶ್ವರ ಮಹಾಸಂಸ್ಥಾನದ ತ್ರಿವಿಧ ದಾಸೋಹ ಮಠಾಧ್ಯಕ್ಷ ಶ್ರೀಮಹಾಂತ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ನಂಜೀಪುರ ವಿರಕ್ತ, ಹರವೆ, ಹುಲ್ಲಹಳ್ಳಿ, ಪಡುವಲ ಮಠ, ದಡದಹಳ್ಳಿ, ಮಾದಾಪುರ, ಹಸುವಿನಹಳ್ಳಿ ಶ್ರೀಗಳು ಹಾಗೂ ಹರಗುರುಚರ ಮೂರ್ತಿಗಳು ಉಪಸ್ಥಿತರಿದ್ದರು. ಅಲ್ಲದೇ ಗ್ರಾಮದ ಗುಡಿಗೌಡರು, ಎಲ್ಲಾ ಸಮುದಾಯದ ಯಜಮಾನರು, ಮುಖಂಡರು, ಅಕ್ಕಪಕ್ಕದ ಗ್ರಾಮಸ್ಥರು, ಆಗಮಿಸಿದ್ದರು. ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ನಂತರ ಗ್ರಾಮದ ಪ್ರಮುಖ ರಸ್ತೆಯಲ್ಲಿ ವಿವಿಧ ಕಲಾ ತಂಡಗಳೊಂದಿಗೆ ಮಹದೇಶ್ವರಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಾಯಿತು.


ನಂಜೀಪುರದಲ್ಲಿ ಮಹದೇಶ್ವರ ದೇವಾಲಯ ಉದ್ಘಾಟನೆ, ಕಳಸಾರೋಹಣ ನಡೆಯಿತು. ಮತ್ತೊಂದು ಚಿತ್ರದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಸನ್ಮಾನಿಸಲಾಯಿತು.

ನಾಳೆ ವಕೀಲರ ಸಂಘದಿಂದ ನಾಟಕ ಪ್ರದರ್ಶನ



ಸುದ್ದಿಗೋಷ್ಠಿಯಲ್ಲಿ ನಾಟಕದ ಪೋಸ್ಟರ್ ಪ್ರದರ್ಶಿಸಲಾಯಿತು.

ಪಿರಿಯಾಪಟ್ಟಣ, ಏ.29– ತಾಲೂಕಿನ ವಕೀಲರ ಸಂಘದಿಂದ ಏ.30ರಂದು ಸಂಜೆ 6 ಗಂಟೆಗೆ ಪಟ್ಟಣದ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಶಿವಭಕ್ತ ಚಂಡಸುರಾ ಅಥವಾ ಹೇಮಾವತಿಯ ಸ್ವಯಂವರ ಎಂಬ ಪೌರಾಣಿಕ ನಾಟಕ ಆಯೋಜಿಸಲಾಗಿದೆ ಎಂದು ತಾಲೂಕು ವಕೀಲ ಸಂಘದ ಅಧ್ಯಕ್ಷ ಧನಪಾಲ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಟಕವನ್ನು ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಲಿದ್ದು, ವಕೀಲ ಸಂಘದ ಅಧ್ಯಕ್ಷ ಧನಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್, ಮಾಜಿ ಶಾಸಕ ಕೆ.ಮಹದೇವ್, ಸಿವಿಲ್ ಹಿರಿಯ ಶ್ರೇಣಿ ನ್ಯಾಯಾಧೀಶ ರಾಜು, ಪ್ರಧಾನ ಸಿವಿಲ್ ನ್ಯಾಯಾಧೀಶ ಯೋಗೇಶ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ಶ್ವೇತ, ಹಿರಿಯ ವಕೀಲ ಗೋವಿಂದೇಗೌಡ, ಗ್ಯಾರಂಟಿ ಅನುದಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಮೈಮುಲ್ ಮಾಜಿ ಅಧ್ಯಕ್ಷ ಪ್ರಸನ್ನ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಕಲಾಭಿಮಾನಿಗಳು ಆಗಮಿಸಿ ನಾಟಕ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಶಂಕರ್, ಖಜಾಂಚಿ ಹರೀಶ್, ವಕೀಲರಾದ ಭಾಸ್ಕರ್, ಲೋಕೇಶ್, ದೇವರಾಜ್, ಮಾಯಿಗೌಡ, ವಿನಯ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಸವಾರ ಸಾವು

ಹುಣಸೂರು, ಏ.29– ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ರಾಷ್ಟ್ರೀಯ ಹೆದ್ದಾರಿ 275ರ ಬಿಳಿಕೆರೆ ಸಮೀಪದ ಹುಲ್ಲೇನಹಳ್ಳಿ ಗೇಟ್ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ.



ತಾಲೂಕಿನ ಬಿಳಿಕೆರೆ ಸಮೀಪದ ದೇವರಹಳ್ಳಿ ಗ್ರಾಮದ ನಿವಾಸಿ ವೆಂಕಟೇಶಗೌಡ(59) ಸಾವನ್ನಪ್ಪಿದವರು. ಈತ ಮಧ್ಯಾಹ್ನ ತನ್ನ ಬೈಕ್(ಕೆಎ–09, ಇಎಲ್–8931)ನಲ್ಲಿ ಬಿಳಿಕೆರೆಯಿಂದ ಸ್ವಗ್ರಾಮ ದೇವರಹಳ್ಳಿಗೆ ತೆರಳುವ ವೇಳೆ ಹುಲ್ಲೇನಹಳ್ಳಿ ಗೇಟ್ ಬಳಿ ತಮ್ಮ ಗ್ರಾಮಕ್ಕೆ ತೆರಳಲು ಮುಖ್ಯ ರಸ್ತೆಯಿಂದ ಬಲಕ್ಕೆ ಬೈಕ್ ತಿರುಗಿಸಿದ್ದಾರೆ. ಈ ವೇಳೆ ಮೈಸೂರಿನಿಂದ ಪಿರಿಯಾಪಟ್ಟಣಕ್ಕೆ ತೆರಳುತ್ತಿದ್ದ ಸಾರಿಗೆ ಬಸ್(ಕೆಎ–09, ಎಫ್–5374) ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ವೆಂಕಟೇಶಗೌಡ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಪುನೀತ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಬಳಿಕ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಬಳಿಕ ಎರಡೂ ವಾಹನಗಳನ್ನು ವಶಕ್ಕೆ ಪಡೆದು, ಶವವನ್ನು ಸ್ಥಳೀಯ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹದೇವಪ್ರಸಾದ್‌ಗೆ ಶೇ.92.48 ಅಂಕ



ತಿ.ನರಸೀಪುರ, ಏ.29– ಪಟ್ಟಣದ ಲಿಟಲ್ ಫ್ಲವರ್ ಶಾಲೆಯ ವಿದ್ಯಾರ್ಥಿ, ಪಟ್ಟಣದ ವಿವೇಕಾನಂದ ನಗರದ ನಿವಾಸಿ ಉಪನ್ಯಾಸಕ ವೈ.ಸೋಮಣ್ಣ, ಶಿಕ್ಷಕಿ ಎಂ.ವಿಜಯ ದಂಪತಿ ಪುತ್ರ ವೈ.ಎಸ್.ಮಹದೇವ ಪ್ರಸಾದ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 578 (92.48%) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿ ಶಾಲೆಗೆ ಕೀರ್ತಿ ತಂದಿದ್ದಾನೆ.

ಎನ್‌ಸಿಆರ್ ಇಂಟರ್ ನ್ಯಾಷನಲ್ ಶಾಲೆಗೆ ಶೇ.100ರಷ್ಟು ಫಲಿತಾಂಶ



ಬನ್ನೂರು, ಏ.29– ಇಲ್ಲಿಗೆ ಸಮೀಪದ ತುರುಗನೂರು ಗ್ರಾಮದ ಎನ್‌ಸಿಆರ್ ಇಂಟರ್‌ನ್ಯಾಷನಲ್ ಪ್ರೌಢಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದೆ.

ಶಾಲೆಯ 8 ವಿದ್ಯಾರ್ಥಿಗಳು ಅತ್ಯುನ್ನತ, 12 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಶಾಲೆಯ ವಿದ್ಯಾರ್ಥಿಗಳಾದ ಮಧುಶ್ರೀ 612, ಜೆ.ಪಿ.ರಕ್ಷಾ 605, ಪಿ.ನಿಸರ್ಗ 581, ವೈ.ಜೆ.ಅನುಷಾ 568, ಪಿ.ಪ್ರಕೃತಿ 554, ಹೆಚ್.ಟಿ.ನವ್ಯಶ್ರೀ 548, ಕೆ.ಎನ್.ರಾಜಶೇಖರ್ 546, ವೈ.ಡಿ.ಪ್ರಿಯಾ 541 ಅಂಕ ಪಡೆದಿದ್ದಾರೆ. ಉತ್ತಮ ಫಲಿತಾಂಶಕ್ಕೆ ಕಾರಣರಾದ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನು ಶಾಲೆಯ ಕಾರ್ಯದರ್ಶಿ ಡಾ.ಟಿ.ಸಿ.ರಾಜೇಶ್‌ಗೌಡ ಅಭಿನಂದಿಸಿದ್ದಾರೆ.

ದಲಿತರ ಹಕ್ಕುಗಳ ರಕ್ಷಕ ಡಾ.ಬಿ.ಆರ್.ಅಂಬೇಡ್ಕರ್

ನಳಂದ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ ಅಭಿಪ್ರಾಯ

ತಿ.ನರಸೀಪುರ, ಏ.29– ಡಾ.ಬಿ.ಆರ್.ಅಂಬೇಡ್ಕರ್ ಅವರು ಮಹಾನ್ ಸಮಾಜ ಸುಧಾರಕ ಹಾಗೂ ದಲಿತರ ಹಕ್ಕುಗಳ ರಕ್ಷಕ. ಅವರು ತಮ್ಮ ಜೀವನದ ಉದ್ದಕ್ಕೂ ಜಾತಿವಾದ, ತಾರತಮ್ಯ ಮತ್ತು ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಡಿದವರು. ಅಲ್ಲದೇ ಎಲ್ಲಾ ಸಮುದಾಯದವರಿಗೆ ಸಮಾನ ಹಕ್ಕುಗಳನ್ನು ನೀಡಲು ಸಂವಿಧಾನಕ್ಕೆ ಮಹತ್ವದ ಕೊಡುಗೆ ನೀಡಿದರು ಎಂದು ನಳಂದ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ ತಿಳಿಸಿದರು.

ಪಟ್ಟಣದ ತ್ರಿವೇಣಿ ನಗರದ ಮಹಾನಾಯಕ ವೃತ್ತದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಶಿಕ್ಷಣ, ಸಮಾನತೆ ಮತ್ತು ಮಾನವ ಹಕ್ಕುಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಡಾ.ಅಂಬೇಡ್ಕರ್ ಅವರು ಅನೇಕ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡರು. ಅಂಬೇಡ್ಕರ್ ಜಯಂತಿ ಅವರ ಆದರ್ಶ ಮತ್ತು ಆಲೋಚನೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಮಾನ ಮತ್ತು ನ್ಯಾಯಯುತ ಸಮಾಜದತ್ತ ಸಾಗಲು ನಮಗೆ ಸ್ಫೂರ್ತಿ ನೀಡುತ್ತದೆ ಎಂದರು.


ತಿ.ನರಸೀಪುರದ ತ್ರಿವೇಣಿನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಅಂಬೇಡ್ಕರ್ ಅವರು ದೇಶಕ್ಕೆ ಸಂವಿಧಾನ ರಚಿಸುವ ಮೂಲಕ ಪ್ರತಿಯೊಂದು ಸಮಾಜಕ್ಕೂ ಹಕ್ಕು ಮತ್ತು ಸ್ವಾತಂತ್ರ್ಯ ನೀಡಿ ಪ್ರಜಾಪ್ರಭುತ್ವದ ಮೂಲಕ ಸಮ ಸಮಾಜ ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದರು.

ಅಸ್ಪೃಶ್ಯತೆ ಜೊತೆಗೆ ಜಾತಿ ವ್ಯವಸ್ಥೆ ನಿರ್ಮೂಲನೆಗೂ ಬಾಬಾ ಸಾಹೇಬರು ಶ್ರಮಿಸಿದರು. ಅವರ ಸಾಟಿ ಇಲ್ಲದ ಕೆಲಸ ಮತ್ತು ದಲಿತ ಬೌದ್ಧ ಚಳವಳಿ ಪ್ರಾರಂಭಕ್ಕಾಗಿ ಇಡೀ ದೇಶ ಅವರನ್ನು ನೆನಪಿಸಿಕೊಳ್ಳುತ್ತದೆ. ಸಂವಿಧಾನ ಶಿಲ್ಪಿಯಾಗಿ ದೇಶದ ಕಾನೂನು ಸಚಿವರಾಗಿದ್ದ ಅವರ ಅತ್ಯುನ್ನತ ಸಾಧನೆಗಾಗಿ 1990ರಲ್ಲಿ ಭಾರತ ರತ್ನ ಪ್ರಶಸ್ತಿ ನೀಡಲಾಯಿತು ಎಂದರು.

ಈ ವೇಳೆ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ಅನಿಕಾ ಕನಸು, ಕೆ.ಎಸ್. ಸೂರ್ಯ ಪ್ರಕಾಶ್, ಪೂರ್ವಿಕ, ಕುಶಲ ಎಂ., ನಿತ್ಯಶ್ರೀ ಹೆಚ್., ಲಾವಣ್ಯ ಎಸ್., ಎಂ.ಪ್ರಥಮ್ ಅವರನ್ನು ಅಭಿನಂದಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಮಿತಿ ಅಧ್ಯಕ್ಷ ಎನ್.ಮಹೇಶ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಮಲ್ಲು, ಬಿಲ್ಡಿಂಗ್ ಕಂಟ್ರಾಕ್ಟರ್ ಬಿ.ಸಿದ್ದರಾಜು, ಪಿಎಸಿಎಸ್ ಮಾಜಿ ಅಧ್ಯಕ್ಷ ಸೋಸಲೆ ಪರಶಿವಮೂರ್ತಿ, ಗ್ರಾಪಂ ಮಾಜಿ ಸದಸ್ಯ ಎಂ.ಮಿಥುನ, ಶ್ರೀಧರ್ ಮತ್ತಿತರರಿದ್ದರು.

> ಅಂಬೇಡ್ಕರ್ ಅವರು ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಬಹಳಷ್ಟು ಶ್ರಮಿಸಿದ್ದಾರೆ. ಅಂಬೇಡ್ಕರ್ ಕೇವಲ ವ್ಯಕ್ತಿಯಲ್ಲ. ಪ್ರತಿಯೊಬ್ಬರಿಗೂ ಬಹುದೊಡ್ಡ ಶಕ್ತಿಯಾಗಿದ್ದಾರೆ. ವಿಶ್ವದ ಭವ್ಯ ಭವಿಷ್ಯಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ಉರಿಯುವ ಕರ್ಪೂರದಂತೆ ಬೆಳಗಿದ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಇಂದಿನ ಸಮಾಜಕ್ಕೆ ತಲುಪಿಸುವ ಕೆಲಸ ಮಾಡಬೇಕಿದೆ. ಮೂಢನಂಬಿಕೆ, ಕಂದಾಚಾರ ದೇಶದ ಪ್ರಗತಿಯನ್ನು ಹಿಂದಕ್ಕೆ ತಳ್ಳುತ್ತಿರುವುದು ವಿಪರ್ಯಾಸ. ಮಹಾತ್ಮರ ವಿಚಾರಗಳನ್ನು ಆಚರಣೆಗೆ ತರುವ ಮೂಲಕ ಅವರ ಕನಸಿನ ಭಾರತ ಕಟ್ಟಬೇಕಾಗಿದೆ.
> – **ಧನಂಜಯ, ಪೊಲೀಸ್ ಇನ್ಸ್‌ಪೆಕ್ಟರ್.**

ಮಹಮ್ಮದ್ ಅಲಿ ನಿಧನ



ಹುಣಸೂರು, ಏ.29– ನಗರದ ನಿಜಾಂ ಮೊಹಲ್ಲಾದ ನಿವಾಸಿ, ಜಾಮಿಯಾ ಮಸೀದಿ ಸದಸ್ಯ ಮಹಮ್ಮದ್ ಅಲಿ(40) ಬುಧವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನಗರದ ಶಬ್ಬೀರ್ ನಗರದ ಕಬರಸ್ತಾನದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಶೇಷಾದ್ರಿ



ಕೆ.ಆರ್.ನಗರ, ಏ.29– ಪಟ್ಟಣದ ಆಂಜನೇಯ ಬಡಾವಣೆ ನಿವಾಸಿ ಟಿ.ಶೇಷಾದ್ರಿ(80) ಬುಧವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 12 ಗಂಟೆಗೆ ಪಟ್ಟಣದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ರಾಜ್ಯ ಸರ್ಕಾರದ ಮತ್ತೊಂದು 'ಅಂಕುಶ'

ಮೈಸೂರು ಸೇರಿ ರಾಜ್ಯದ ವಿವಿಗಳಲ್ಲಿ ದೂರ ಶಿಕ್ಷಣ ಕೋರ್ಸ್ ಆರಂಭಿಸುವ ಚಿಂತನೆ

ಸರ್ಕಾರದ ಆದೇಶ ಧಿಕ್ಕರಿಸಿ ಸಂಘ ಪರಿವಾರದ ಏಕಾತ್ಮ ಮಾನವ ದರ್ಶನ ಕಾರ್ಯಕ್ರಮ ಆಯೋಜಿಸಿದ್ದರ ಫಲ!

● ಅಕೌಂಟ್ ಫ್ರೀಜ್ ಸಾಧ್ಯವಾಗದೇ ಮತ್ತೊಂದು 'ಅಸ್ತ್ರ' ಪ್ರಯೋಗ ● ಮುಕ್ತ ವಿವಿ ಏಕ ಸ್ವಾಮ್ಯತೆಗೆ ಧಕ್ಕೆ ತರುವ ಹುನ್ನಾರ



ಮೈಸೂರು, ಏ.29(ಬಿಎಲ್‌ಯು)– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬ್ಯಾಂಕ್ ಅಕೌಂಟ್ ಫ್ರೀಜ್ ಸ್ಥಗಿತ ಮಾಡುವ ಪ್ರಯತ್ನದಲ್ಲಿ ವಿಫಲವಾದ ರಾಜ್ಯ ಸರ್ಕಾರ ಈಗ ಮುಕ್ತ ವಿಶ್ವವಿದ್ಯಾನಿಲಯದ ಸ್ವಾಯತ್ತ ಅಧಿಕಾರ ಕಸಿದುಕೊಳ್ಳುವ ನಿಟ್ಟಿನಲ್ಲಿ ಮತ್ತೊಂದು 'ಅಂಕುಶ' ಪ್ರಯೋಗಿಸಲು ಮುಂದಾಗಿದೆ. ಈ ಮೂಲಕ ಸರ್ಕಾರ ಹಾಗೂ ಮುಕ್ತ ವಿಶ್ವವಿದ್ಯಾನಿಲಯದ ಸಂಘರ್ಷ ಮತ್ತೊಂದು ತಿರುವು ಪಡೆದಿದೆ.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಸಂಘ ಪರಿವಾರದವರು ಇತ್ತೀಚೆಗೆ ಏಕಾತ್ಮ ಮಾನವ ದರ್ಶನ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಆದರೆ ಇದನ್ನು ರದ್ದು ಮಾಡಬೇಕೆಂದು ಸರ್ಕಾರ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರಿಗೆ ಸೂಚನೆ ನೀಡಿತ್ತು. ಆದರೆ ಸರ್ಕಾರದ ಆದೇಶ ಧಿಕ್ಕರಿಸಿದ ಪ್ರೊ.ಶರಣಪ್ಪ ವಿ.ಹಲಸೆ ಅವರು ಏಕಾತ್ಮ ಮಾನವ ದರ್ಶನ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿದರು.

ತರುವಾಯ ಮೂರು ದಿನಗಳ ಏಕಾತ್ಮ ಮಾನವ ದರ್ಶನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಇದರಿಂದ ಕೆಂಡ ಮಂಡಲವಾದ ರಾಜ್ಯ ಸರ್ಕಾರ, ಮುಕ್ತ ವಿಶ್ವವಿದ್ಯಾನಿಲಯದ ಬ್ಯಾಂಕ್ ಅಕೌಂಟ್ ಸ್ಥಗಿತ ಮಾಡಲು ಬ್ಯಾಂಕ್‌ಗಳಿಗೆ ಪತ್ರ ಬರೆದಿತ್ತು. ಈ ಬೆಳವಣಿಗೆ ನಡುವೆ ಮಧ್ಯ ಪ್ರವೇಶಿಸಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಸರ್ಕಾರದ ಕ್ರಮಕ್ಕೆ ಚಾಟಿ ಬೀಸಿದ್ದರು. ಅಲ್ಲದೆ ಯಾವುದೇ ಸ್ಪಷ್ಟನೆ ಇಲ್ಲದೆ ಅಕೌಂಟ್ ಫ್ರೀಜ್ ಮಾಡಲು ಸಾಧ್ಯವಿಲ್ಲವೆಂದು ಬ್ಯಾಂಕ್‌ಗಳು ಸಹ ಸರ್ಕಾರಕ್ಕೆ ವಿವರಣೆ ನೀಡಿದ್ದವು. ಇದರಿಂದ ಅಕೌಂಟ್ ಫ್ರೀಜ್ ಮಾಡಿಸಲು ಸಾಧ್ಯವಾಗದೇ ತೀವ್ರ ಮುಖಭಂಗ ಅನುಭವಿಸಿದ ರಾಜ್ಯ ಸರ್ಕಾರ, ಈಗ ಮತ್ತೊಂದು ಕ್ರಮಕ್ಕೆ ಮುಂದಾಗಿದೆ.

ಸ್ವತಂತ್ರ ಹಾಗೂ ಪ್ರತ್ಯೇಕ ನಿಯಮಾವಳಿ ಮೂಲಕ ದೂರ ಶಿಕ್ಷಣ ಕೋರ್ಸ್‌ಗಳನ್ನು ನಡೆಸುತ್ತಿರುವ ಮುಕ್ತ ವಿಶ್ವವಿದ್ಯಾನಿಲಯದ ಏಕ ಸ್ವಾಮ್ಯತ್ವಕ್ಕೆ ಧಕ್ಕೆ ತರಲು ರಾಜ್ಯ ಸರ್ಕಾರ ಮುಂದಾಗಿದೆ. ಇನ್ನು ಮುಂದೆ ಮೈಸೂರು, ಮಂಗಳೂರು, ಬೆಂಗಳೂರು, ಶಿವಮೊಗ್ಗ, ಧಾರವಾಡ ಸೇರಿದಂತೆ ಎಲ್ಲಾ ವಿಶ್ವವಿದ್ಯಾನಿಲಯಗಳು ಸಾಂಪ್ರದಾಯಿಕ ಕೋರ್ಸ್‌ಗಳ ಜೊತೆಗೆ ದೂರ ಶಿಕ್ಷಣ ಕೋರ್ಸ್‌ಗಳನ್ನು ನಡೆಸುವ ಅವಕಾಶವನ್ನು ಸರ್ಕಾರ ನೀಡುತ್ತಿದೆ.

ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ದೂರ ಶಿಕ್ಷಣ ಕೋರ್ಸ್‌ಗಳನ್ನು ತೆರೆದರೆ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಇದರಿಂದ ಸಹಜವಾಗಿಯೇ ಮುಕ್ತ ವಿಶ್ವವಿದ್ಯಾನಿಲಯ ಆರ್ಥಿಕವಾಗಿ ದುರ್ಬಲಗೊಳ್ಳಲಿದೆ. ಈ ಮೂಲಕ ಇದರ ದೂರ ಶಿಕ್ಷಣ ಕೋರ್ಸ್ ನಡೆಸುವ ಏಕಸ್ವಾಮ್ಯ ಅಧಿಕಾರಕ್ಕೆ ಪೆಟ್ಟು ನೀಡುವುದು ಸರ್ಕಾರದ ಚಿಂತನೆಯಾಗಿದೆ.

ಪ್ರತ್ಯೇಕ ಕಾನೂನಿನೊಂದಿಗೆ ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಿದ್ದ ರಾಜ್ಯ ಸರ್ಕಾರ ದೂರ ಶಿಕ್ಷಣ ಕೋರ್ಸ್ ನಡೆಸುವ ಏಕ ಸ್ವಾಮ್ಯ ಅಧಿಕಾರವನ್ನು ನೀಡಿತು. ರಾಜ್ಯದ ಇತರೆ ವಿಶ್ವ ವಿದ್ಯಾನಿಲಯಗಳಲ್ಲಿ ಈ ಹಿಂದೆ ಇದ್ದ ದೂರ ಶಿಕ್ಷಣ ಕೋರ್ಸ್ ಅನ್ನು ರದ್ದು ಮಾಡಿ ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೀಡಿತ್ತು. ಆದರೆ ಈಗ ಸರ್ಕಾರ ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೀಡಿದ್ದ ವಿಶೇಷ ಅಧಿಕಾರವನ್ನು ತಾನೆ ಕಸಿದುಕೊಳ್ಳಲು ಮುಂದಾಗಿದೆ.

ಈ ವಿಚಾರದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರ ವಿವೇಚನೆ ಬಹಳ ಪ್ರಮುಖವಾಗಿದೆ ಮುಕ್ತ ವಿಶ್ವವಿದ್ಯಾನಿಲಯದ ಅಕೌಂಟ್ ಫ್ರೀಜ್ ಮಾಡಲು ಸರ್ಕಾರಕ್ಕೆ ಅವಕಾಶ ನೀಡಿಲ್ಲ. ಹೀಗಿರುವಾಗ ಈಗ ಮುಕ್ತ ವಿಶ್ವವಿದ್ಯಾನಿಲಯದ ಏಕಸ್ವಾಮ್ಯ ಅಧಿಕಾರ ಕಸಿದುಕೊಳ್ಳಲು ಬಿಡುತ್ತಾರೆಯೇ ಎಂಬ ಪ್ರಶ್ನೆ ಎದುರಾಗಿದೆ.

ಒಂದು ವೇಳೆ ರಾಜ್ಯಪಾಲರು ಇದಕ್ಕೆ ಒಪ್ಪದೇ ಇದ್ದಾಗ ಘಟಿಸುವ ಮಹತ್ವದ ಬೆಳವಣಿಗೆಯಲ್ಲಿ ಲೋಕಭವನ ಹಾಗೂ ಸರ್ಕಾರದ ನಡುವೆ ಮತ್ತೊಂದು ಹಂತದ ಸಂಘರ್ಷಕ್ಕೆ ದಾರಿ ಮಾಡಿಕೊಡುವ ಸಾಧ್ಯತೆ ಇದೆ.

ಏಕಾಏಕಿ ದೂರ ಶಿಕ್ಷಣ ಕೋರ್ಸ್‌ಗಳ ಆರಂಭ ಅಷ್ಟು ಸುಲಭವಲ್ಲ



ಪ್ರೊ.ಶರಣಪ್ಪ

ಮೈಸೂರು: ಯುಜಿಸಿ ದೂರ ಶಿಕ್ಷಣ ಬ್ಯೂರೊ ಅನುಮತಿ ಪಡೆಯುವುದು ಸೇರಿದಂತೆ ಇತರೆ ಕಾನೂನು ನಿಯಮ ಪಾಲನೆ ಮಾಡಬೇಕಾಗಿರುವುದರಿಂದ ರಾಜ್ಯ ಸರ್ಕಾರ ಏಕಾಏಕಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ದೂರ ಶಿಕ್ಷಣ ಕೋರ್ಸ್ ಆರಂಭಿಸಲು ಸಾಧ್ಯವಿಲ್ಲ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಪ್ರತಿಕ್ರಿಯಿಸಿದ್ದಾರೆ.

ಈ ಸಂಬಂಧ ಸರ್ಕಾರ ನಿರ್ಧಾರ ಕೈಗೊಂಡರೆ ಅದಕ್ಕೆ ರಾಜ್ಯಪಾಲರು ಅಂತಿಮ ಮುದ್ರೆ ಒತ್ತಬೇಕಾಗುತ್ತದೆ. ಈ ವಿಚಾರದಲ್ಲಿ ರಾಜ್ಯಪಾಲರ ವಿವೇಚನೆ ಬಹಳ ಮುಖ್ಯವಾಗಿದ್ದು, ಅವರು ಯಾವ ತೀರ್ಮಾನ ಕೈಗೊಳ್ಳುತ್ತಾರೆ ಎಂಬುದನ್ನು ನೋಡಬೇಕು ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ನಮ್ಮ ವಿಶ್ವವಿದ್ಯಾನಿಲಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದು, 80ಕ್ಕೂ ಹೆಚ್ಚು ಕೋರ್ಸ್ ಗಳಿವೆ. ನಮ್ಮಲ್ಲಿರುವ ಗುಣಮಟ್ಟದ ಲರ್ನಿಂಗ್ ಮೆಟಿರಿಯಲ್‌ಗಳನ್ನು ಯಾರೂ ತಯಾರಿಸಲು ಸಾಧ್ಯವಿಲ್ಲ. ಹೈದರಾಬಾದ್ ವಿಶ್ವವಿದ್ಯಾನಿಲಯ ಸೇರಿದಂತೆ ದೇಶದ ಹಲವು ವಿಶ್ವವಿದ್ಯಾನಿಲಯಗಳು ನಮ್ಮ ಲರ್ನಿಂಗ್ ಮೆಟಿರಿಯಲ್‌ಗಳನ್ನು ಮಾದರಿಯಾಗಿ ಅನುಸರಿಸುತ್ತಿವೆ. ಇದರಿಂದ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳಲ್ಲಿ ದೂರ ಶಿಕ್ಷಣ ಕೋರ್ಸ್ ಆರಂಭಿಸಿದರೂ ನಮಗೇನು ಇದರಿಂದ ಪರಿಣಾಮ ಬೀರುವುದಿಲ್ಲ. ಅಲ್ಲದೆ ನಮ್ಮಲ್ಲಿ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ ಕೂಡ ಕಡಿಮೆಯಾಗುವುದಿಲ್ಲ. ಇದರಿಂದ ಮುಕ್ತ ವಿವಿ ಮಹತ್ವ ಕಡಿಮೆಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಳ್ಳಿಚಟ್ಟಂಬಿ (ಕ) + ಪಳ್ಳಿಚಟ್ಟಂಬಿ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಲವ್ ಇನ್ಶೂರೆನ್ಸ್ ಕಂಪನಿ (ತೆ)	4 ಪ್ರದರ್ಶನಗಳು
ಸಂಗಂ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಹೆಬ್ಬಾಳು, ಮಂಚೇಗೌಡನಕೊಪ್ಪಲಿನ ವಿವಿಧೆಡೆಗೆ ಶಾಸಕ ಕೆ.ಹರೀಶ್‌ಗೌಡ ಭೇಟಿ ; ಕಾಮಗಾರಿಗಳ ಪರಿಶೀಲನೆ

ಜನರ ಅಹವಾಲು ಆಲಿಸಿ, ಪರಿಹರಿಸಲು ಅಧಿಕಾರಿಗಳಿಗೆ ಸೂಚನೆ



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೆಬ್ಬಾಳು ಹಾಗೂ ಮಂಚೇಗೌಡನಕೊಪ್ಪಲಿನ ವಿವಿಧ ವಾರ್ಡ್‌ಗಳಿಗೆ ಬುಧವಾರ ದಿಢೀರ್ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಮೈಸೂರು,ಏ.29(ಪಿಎಂ)– ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರು ಕ್ಷೇತ್ರ ವ್ಯಾಪ್ತಿಯ ಹೆಬ್ಬಾಳು ಹಾಗೂ ಮಂಚೇಗೌಡನಕೊಪ್ಪಲಿನ ವಿವಿಧ ವಾರ್ಡ್‌ಗಳಿಗೆ ಬುಧವಾರ ದಿಢೀರ್ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಇದೇ ವೇಳೆ ಜನತೆ ಅಹವಾಲು ಆಲಿಸಿ, ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳಿಗೆ ಖಡಕ್ ಸೂಚನೆ ಸಹ ನೀಡಿದರು. ಸ್ಕೂಟರ್‌ನಲ್ಲಿ ಆಗಮಿಸಿದ ಶಾಸಕರು, ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಗುತ್ತಿಗೆದಾರರು ಹಾಗೂ ಪಾಲಿಕೆ ಅಧಿಕಾರಿಗಳಿಗೆ ಸೂಚನೆಯನ್ನೂ ನೀಡಿದರು.

ವಾರ್ಡ್ 1ರ ಹೆಬ್ಬಾಳು, ಸುಬ್ರಮಣ್ಯನಗರ, ಲಕ್ಷ್ಮೀಕಾಂತ ನಗರ ಹಾಗೂ ವಾರ್ಡ್ 2ರ ಮಂಚೇಗೌಡನ ಕೊಪ್ಪಲು, ಕಟ್ಟೆ ಹೊಸೂರು, ಮಹಾಜನ ಬಡಾವಣೆ, ವಾಣಿವಿಲಾಸ ಬಡಾವಣೆಯಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಶಾಸಕರು ತಮ್ಮ ಕಾರನ್ನು ಬಿಟ್ಟು ಸ್ಕೂಟರ್‌ನಲ್ಲಿಯೇ ಸ್ಥಳೀಯ ಮುಖಂಡರು, ಗುತ್ತಿಗೆದಾರರು ಹಾಗೂ ಪಾಲಿಕೆ ಅಧಿಕಾರಿಗಳೊಂದಿಗೆ ಕಾಮಗಾರಿ ನಡೆಯುತ್ತಿರುವ ಸ್ಥಳಗಳಿಗೆ ತೆರಳಿ ಪರಿಶೀಲನೆ ನಡೆಸಿದರು. ರಸ್ತೆ, ಒಳಚರಂಡಿ, ಮಳೆ ನೀರು ಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುವ ಸ್ಥಳಗಳಿಗೆ ಭೇಟಿ ನೀಡಿದ ಶಾಸಕರು, ಕಾಮಗಾರಿಯ ಗುಣಮಟ್ಟ ಹಾಗೂ ವೇಗದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳನ್ನು ಭೇಟಿ ಮಾಡಿದ ಶಾಸಕ ಕೆ.ಹರೀಶ್ ಗೌಡ, ಅವರ ಕುಂದುಕೊರತೆ ಹಾಗೂ ಸಮಸ್ಯೆಗಳನ್ನು ಸಹನೆಯಿಂದ ಆಲಿಸಿದರು. ಮುಖ್ಯವಾಗಿ ಮಳೆಗಾಲದಲ್ಲಿ ಉಂಟಾಗುವ ನೀರಿನ ಸಮಸ್ಯೆ, ರಸ್ತೆ ಗುಂಡಿಗಳು ಹಾಗೂ ಬೀದಿ ದೀಪಗಳ ಕೊರತೆ ಬಗ್ಗೆ ಸಾರ್ವಜನಿಕರು ಶಾಸಕರ ಗಮನ ಸೆಳೆದರು.

ಜನರ ಸಮಸ್ಯೆಗಳನ್ನು ಆಲಿಸಿದ ಶಾಸಕರು, ತಕ್ಷಣವೇ ಸ್ಥಳದಲ್ಲಿದ್ದ ಪಾಲಿಕೆ ಎಂಜಿನಿಯರ್‌ಗಳು ಹಾಗೂ ಅಧಿಕಾರಿಗಳನ್ನು ಕರೆದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಲ್ಲ ಕಾಮಗಾರಿಗಳನ್ನು ಗುಣಮಟ್ಟದಿಂದ ನಿಗದಿತ ಸಮಯದೊಳಗೆ ಪೂರ್ಣಗೊಳಿಸಬೇಕು. ಯಾವುದೇ ಲೋಪ ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವುದೇ ನನ್ನ ಮೊದಲ ಆದ್ಯತೆ. ಅಧಿಕಾರಿಗಳು ಜನರೊಂದಿಗೆ ಸೌಹಾರ್ದಯುತವಾಗಿ ವರ್ತಿಸಿ, ಅವರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ಶಾಸಕರು ನಿರ್ದೇಶನ ನೀಡಿದರು.

ಕಳೆದ ಹಲವು ವರ್ಷಗಳಿಂದ ಬಗೆಹರಿಯದೇ ಉಳಿದಿದ್ದ ಹಲವು ಸಮಸ್ಯೆಗಳಿಗೆ ಶಾಸಕರ ಈ ಭೇಟಿಯಿಂದ ಪರಿಹಾರ ಸಿಗುವ ಭರವಸೆ ಮೂಡಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟರು. ಪಾಲಿಕೆ ವಲಯ ಕಚೇರಿ 5ರ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಿತೇಂದ್ರ, ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಶ್ವಿನ್, ಎಇಇ ಶುಶ್ರುತ್, ಎಇ ಪ್ರಭಾಮಣಿ, ಅಶ್ವಿನಿ, ಮುದ್ದು ಮಲ್ಲೇಗೌಡ ಹಾಗೂ ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಸಿಲಿಂಡರ್ ಸ್ಫೋಟದಿಂದ ಹಾನಿಗೊಳಗಾದ ಮನೆಗೆ ಶಾಸಕ ಶ್ರೀವತ್ಸ, ಡಿಸಿ ಲಕ್ಷ್ಮೀಕಾಂತರೆಡ್ಡಿ ಭೇಟಿ

ಸರ್ಕಾರದಿಂದ ಆರ್ಥಿಕ ಸಹಾಯದ ಭರವಸೆ



ಮೈಸೂರಿನ ಟಿ.ಕೆ.ಬಡಾವಣೆಯ ಮನೆಯಲ್ಲಿ ಸಿಲಿಂಡರ್ ಸ್ಫೋಟ ಸಂಭವಿಸಿ ಹಾನಿಗೊಳಗಾದ ಮನೆಗೆ ಬುಧವಾರ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೈಸೂರು, ಏ.29(ಬಿಎಲ್‌ಯು)– ಎಲ್‌ಪಿಜಿ ಸಿಲಿಂಡರ್ ಸ್ಫೋಟದಿಂದ ಹಾನಿಯಾಗಿರುವ ಮೈಸೂರಿನ ಟಿ.ಕೆ. ಬಡಾವಣೆಯ ಮನೆಗೆ ಇಂದು ಶಾಸಕ ಟಿ.ಎಸ್.ಶ್ರೀವತ್ಸ ಅವರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರೊಡನೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೈಸೂರಿನ ಕೆ.ಆರ್.ಕ್ಷೇತ್ರದ ವಾರ್ಡ್ ಸಂಖ್ಯೆ 43 ರಲ್ಲಿರುವ ಟಿ.ಕೆ.ಬಡಾವಣೆಯ ಮನೆಯಲ್ಲಿ ನಿನ್ನೆ ಎಲ್ ಪಿಜಿ ಸಿಲಿಂಡರ್ ಸ್ಫೋಟವಾಗಿತ್ತು. ಸ್ಫೋಟದಿಂದ ಇಡೀ ಮನೆಯ ವಸ್ತುಗಳು ಬೆಂಕಿಗಾಹುತಿಯಾಗಿತ್ತು.

ಇಂದು ಶ್ರೀವತ್ಸ ಹಾಗೂ ಲಕ್ಷ್ಮೀಕಾಂತರೆಡ್ಡಿ ಅವರು ಸಿಲಿಂಡರ್ ಸ್ಫೋಟವಾದ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಸರ್ಕಾರದಿಂದ ಯಾವ ರೀತಿಯ ಆರ್ಥಿಕ ಸಹಾಯ ಮಾಡಬಹುದು ಎಂಬ ಬಗ್ಗೆ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ಲಕ್ಷ್ಮೀಕಾಂತ ರೆಡ್ಡಿ ಅವರು ಈ ವೇಳೆ ಭರವಸೆ ನೀಡಿದರು.

ಅಲ್ಲದೆ ಎಲ್ ಪಿಜಿ ಸಿಲಿಂಡರ್ ಸರಬರಾಜು ಮಾಡಿರುವ ತೈಲ ಕಂಪನಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಈ ವೇಳೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಕಾರ್ಪೊರೇಟರ್‌ಗಳಾದ ಗೋಪಿ, ಜಗದೀಶ್, ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್ ರಾಜ್ ಅರಸ್, ಮುಖಂಡರಾದ ಪೂರ್ಣಿಮಾ, ಚಂದ್ರಪ್ಪ, ಬಸವರಾಜು, ಮಧು ಹಾಗೂ ಇತರರು ಹಾಜರಿದ್ದರು.

ವೈದ್ಯಾಧಿಕಾರಿ ಕರ್ತವ್ಯದ ವೇಳೆ ಮದ್ಯ ಸೇವಿಸಿ ಅನುಚಿತ ವರ್ತನೆ ಆರೋಪ

● ಮೆಲ್ಲಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಎಸ್.ಅನಿಲ್‌ಕುಮಾರ್ ವಿರುದ್ಧ ಡಿಹೆಚ್‌ಓ ಕ್ರಮ ● ಸದರಿ ಕೇಂದ್ರದಿಂದ ವರ್ಗ ● ಅಮಾನತುಗೊಳಿಸಲು ಸರ್ಕಾರಕ್ಕೆ ಶಿಫಾರಸು ● ಅನುಚಿತ ವರ್ತನೆ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್

ಮೈಸೂರು,ಏ.29(ಪಿಎಂ)– ಹಾರೋಹಳ್ಳಿ (ಮೆಲ್ಲಹಳ್ಳಿ) ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಎಸ್.ಅನಿಲ್‌ಕುಮಾರ್ ವಿರುದ್ಧ ಕರ್ತವ್ಯದ ವೇಳೆಯಲ್ಲೇ ಮದ್ಯ ಸೇವಿಸಿ, ಧೂಮಪಾನ ಮಾಡುತ್ತಾ ಅನುಚಿತವಾಗಿ ವರ್ತಿಸಿದ ಆರೋಪ ಕೇಳಿಬಂದಿದೆ.

ಈ ಆರೋಪಕ್ಕೆ ಪುಷ್ಟಿ ನೀಡುವಂತೆ ವಿಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಅದರಲ್ಲಿ ಸದರಿ ಆರೋಗ್ಯ ಕೇಂದ್ರದ ಆವರಣದಲ್ಲೇ ಮಂಗಳವಾರ ಡಾ.ಅನಿಲ್‌ಕುಮಾರ್ ಧೂಮಪಾನ ಮಾಡುವ ಹಾಗೂ ಮದ್ಯದ ನಶೆಯಲ್ಲಿ ತೂರಾಡುವ ಚಿತ್ರ ಸೆರೆಯಾಗಿದೆ. ಜೊತೆಗೆ ಡಾ.ಅನಿಲ್‌ಕುಮಾರ್ ಅವರ ಅಸಭ್ಯ ವರ್ತನೆಯನ್ನು ಸಾರ್ವಜನಿಕರು ಪ್ರಶ್ನೆ ಮಾಡುತ್ತಿರುವುದು ವಿಡಿಯೋದಲ್ಲಿದೆ.

ಈ ಸಂಬಂಧ ಮಾಧ್ಯಮಕ್ಕೆ ಪ್ರತಿಕ್ರಿಯಿಸಿರುವ ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಮಾಹಿತಿ ಬಂದ ತಕ್ಷಣ ಅವರ ವಿರುದ್ಧ ಕ್ರಮ ವಹಿಸಿದ್ದು, ಸದರಿ ಕೇಂದ್ರದ ಕರ್ತವ್ಯದಿಂದ ಬಿಡುಗಡೆಗೊಳಿಸಿ ಇಲಾಖೆಯ ಆಯುಕ್ತಾಲಯಕ್ಕೆ ವರದಿ ಮಾಡಿಕೊಳ್ಳಲು ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು.

ಅಮಾನತುಗೊಳಿಸಲು ಶಿಫಾರಸು: 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಕೌಟುಂಬಿಕ ಸಮಸ್ಯೆ ಹಿನ್ನೆಲೆಯಲ್ಲಿ ಡಾ.ಅನಿಲ್‌ಕುಮಾರ್ ಅವರನ್ನು ಮನೋವೈದ್ಯರ ಮೂಲಕ ಆಪ್ತ ಸಮಾಲೋಚನೆಗೆ ಒಳಪಡಿಸಲಾಗಿತ್ತು. ಹಾಗಾಗಿ ಕೆಲಕಾಲ ಸರಿ ಇದ್ದರು. ಆದರೆ ನಿನ್ನೆ ಸಾರ್ವಜನಿಕವಾಗಿಯೇ ಅನುಚಿತವಾಗಿ ವರ್ತಿಸಿದ್ದಾರೆ. ಅದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಕೂಡಲೇ ಅವರನ್ನು ವರ್ಗಾವಣೆ ಮಾಡಿದ್ದು, ಅಮಾನತುಗೊಳಿಸಲು ಸಹ ಸರ್ಕಾರಕ್ಕೆ ಶಿಫಾರಸು ಮಾಡಿದ್ದೇನೆ. ಸದರಿ ಆರೋಗ್ಯ ಕೇಂದ್ರಕ್ಕೆ ಬೇರೆ ವೈದ್ಯರನ್ನು ನಿಯೋಜಿಸಲಾಗಿದೆ ಎಂದರು.



ಆರೋಗ್ಯ ಕೇಂದ್ರದ ಆವರಣದಲ್ಲೇ ಧೂಮಪಾನ ಮಾಡುತ್ತಿರುವ ಡಾ.ಎಸ್.ಅನಿಲ್‌ಕುಮಾರ್

ಮಾ.27ರಂದೇ ಡಿಹೆಚ್‌ಓಗೆ ದೂರು: ಆರೋಗ್ಯ ಕೇಂದ್ರದ ಸಿಬ್ಬಂದಿಯಿಂದ ವೈದ್ಯಾಧಿಕಾರಿ ಡಾ.ಎಸ್.ಅನಿಲ್‌ಕುಮಾರ್ ಅವರ ಅನುಚಿತ ವರ್ತನೆ ಸಂಬಂಧ ತಾಲೂಕು ವೈದ್ಯಾಧಿಕಾರಿಗಳ ಕಚೇರಿ ಮೂಲಕ ಡಿಹೆಚ್‌ಓ ಅವರಿಗೆ ಮಾ.27ರಂದೇ ದೂರು ಸಲ್ಲಿಸಲಾಗಿದೆ.

ಆಸ್ಪತ್ರೆಯ ವಾಟ್ಸಪ್ ಗ್ರೂಪ್‌ನಲ್ಲಿ ಒಟ್ಟು 12 ಸಿಬ್ಬಂದಿ ಇರುತ್ತೇವೆ. ಅದರಲ್ಲಿ ಏಳು ಮಂದಿ ಮಹಿಳೆಯರು ಹಾಗೂ 5 ಮಂದಿ ಪುರುಷರು. ವೈದ್ಯಾಧಿಕಾರಿ ಡಾ.ಅನಿಲ್ ಕುಮಾರ್ ಅವರು 15 ದಿನಗಳಿಂದ ಅಶ್ಲೀಲವಾದ ಪದಗಳನ್ನು ಬಳಸಿ ಮೇಸೇಜ್ ಮಾಡುತ್ತಿದ್ದಾರೆ ಎಂದು ಸದರಿ ದೂರಿನಲ್ಲಿ ಆರೋಪಿಸಲಾಗಿದೆ.

ಅಲ್ಲದೆ, ಸಿಬ್ಬಂದಿಗೆ ವಿಡಿಯೋ ಕಾಲ್ ಮಾಡುವುದು, ರಾತ್ರಿ 12, 1 ಗಂಟೆಯಲ್ಲಿ ಪದೆ ಪದೇ ಕರೆ ಮಾಡುವುದು, ಕರೆ ಸ್ವೀಕರಿಸಲೇಬೇಕೆಂದು ಬೆದರಿಕೆ ಹಾಕುತ್ತಾರೆ. ಕರ್ತವ್ಯದ ಅವಧಿಯಲ್ಲಿ ಹೊರ ರೋಗಿ ಕೊಠಡಿಯಲ್ಲಿ ಪ್ರತಿದಿನ ಧೂಮಪಾನ ಮಾಡುವುದಲ್ಲದೆ, ಮದ್ಯಪಾನ ಸಹ ಮಾಡುತ್ತಾರೆ. ಇದರಿಂದ ಎಲ್ಲಾ ಸಿಬ್ಬಂದಿಗೆ ಕರ್ತವ್ಯ ನಿರ್ವಹಿಸಲು ತೊಂದರೆಯಾಗುತ್ತಿದೆ. ಅವರ ಜೊತೆಯಲ್ಲಿ ಆತಂಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇವೆ. ಹಾಗಾಗಿ ಸೂಕ್ತ ಕ್ರಮ ವಹಿಸಬೇಕೆಂದು ಸಿಬ್ಬಂದಿ ದೂರಿನಲ್ಲಿ ಕೋರಿದ್ದಾರೆ.

ಆಸ್ತಿ ತೆರಿಗೆ ಶೇ.5ರಷ್ಟು ರಿಯಾಯ್ತಿ ಅಭಿಯಾನಕ್ಕೆ ಇಂದು ಕೊನೆ ದಿನ

▶ ಏ.1ರಿಂದ 29ರವರೆಗೆ 86,672 ಆಸ್ತಿಯ 121.39 ಕೋಟಿ ತೆರಿಗೆ ಸಂಗ್ರಹ ▶ ಮೇ ತಿಂಗಳಿಂದ ಜೂನ್‌ವರೆಗೆ ದಂಡವಿಲ್ಲದೆ ತೆರಿಗೆ ಕಟ್ಟಲು ಅವಕಾಶ

▶ ಜುಲೈನಿಂದ ಪ್ರತಿ ತಿಂಗಳಿಗೆ ಶೇ.2ರಷ್ಟು ದಂಡ ವಸೂಲಿಗೆ ನಿರ್ಧಾರ ▶ ವಿನಾಯಿತಿ ಅವಧಿ ವಿಸ್ತರಣೆಗೆ ಸರ್ಕಾರಕ್ಕೆ ಮನವಿ ಸಲ್ಲಿಸಿರುವ ಸ್ಥಳೀಯ ಸಂಸ್ಥೆಗಳು



ಮೈಸೂರು, ಏ.29(ಎಂಟಿವೈ)– ರಾಜ್ಯ ಸರ್ಕಾರ ಆಸ್ತಿ ತೆರಿಗೆ ಪಾವತಿಗೆ ಪ್ರೋತ್ಸಾಹಕವಾಗಿ ರಾಜ್ಯದಾದ್ಯಂತ ಶೇ.5ರಷ್ಟು ವಿನಾಯಿತಿ ನೀಡಿದ್ದ ಅಭಿಯಾನಕ್ಕೆ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಏ.1ರಿಂದ 29ರವರೆಗೆ 86,672 ಆಸ್ತಿಗಳ 121,39,11,204 ರೂ. ತೆರಿಗೆ ಸಂಗ್ರಹವಾಗಿದೆ.

ಮೈಸೂರು ಮಹಾನಗರ ಪಾಲಿಕೆಯ 9 ವಲಯ ಕಚೇರಿ ವ್ಯಾಪ್ತಿ ಶೇ.5ರಷ್ಟು ವಿನಾಯಿತಿ ಸೌಲಭ್ಯ ಪಡೆಯಲು ತೆರಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರಿಂದ ಪಾಲಿಕೆ ವತಿಯಿಂದ ಹೆಚ್ಚುವರಿ ಕೌಂಟರ್ ತೆರೆದು ತೆರಿಗೆ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿತ್ತು. ಅಲ್ಲದೆ, ತೆರಿಗೆ ಪಾವತಿಸಲು ಬರುವ ತೆರಿಗೆದಾರರಿಗೆ ಪೆಂಡಾಲ್ ಹಾಕಿ ನೆರಳಿನ ವ್ಯವಸ್ಥೆ, ಕೂರಲು ಆಸನ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಪಾಲಿಕೆ ಮಾಡಿದ್ದರಿಂದ ತೆರಿಗೆದಾರರು ಸ್ವಯಂ ಪ್ರೇರಣೆಯಿಂದ ಬಂದು ತಮ್ಮ ಆಸ್ತಿಗೆ ತೆರಿಗೆ ಪಾವತಿಸಿದ್ದಾರೆ.

265 ಕೋಟಿ ರೂ. ಆಸ್ತಿ ತೆರಿಗೆ ಗುರಿ: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2,10,770 ಅಧಿಕೃತ ಖಾತೆದಾರರು, 20,966 ಅನಧಿಕೃತ ಖಾತೆದಾರರು ಸೇರಿದಂತೆ 2,31,736 ಮಂದಿ ಆಸ್ತಿ ತೆರಿಗೆದಾರರಿದ್ದಾರೆ. ಕಳೆದ ವರ್ಷ 240 ಕೋಟಿ ರೂ. ತೆರಿಗೆ ಸಂಗ್ರಹಿಸುವ ಗುರಿ ಹೊಂದಿದ್ದ ಮೈಸೂರು ಮಹಾನಗರ ಪಾಲಿಕೆ ವರ್ಷಾಂತ್ಯದ ವೇಳೆಗೆ 242 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸಿ, ಗುರಿಗಿಂತ ಎರಡು ಕೋಟಿ ಹೆಚ್ಚಾಗಿ ಸಂಗ್ರಹಿಸಿತ್ತು. ಈ ಸಾಲಿನಲ್ಲಿ 265 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಿದೆ. ಆದರೆ ತೆರಿಗೆ ರಿಯಾಯ್ತಿ ಅಭಿಯಾನದಡಿ ಇದುವರೆಗೆ 121,39,11,204 ರೂ. ತೆರಿಗೆ ಸಂಗ್ರಹವಾಗಿರುವುದರಿಂದ ಪಾಲಿಕೆ ಅಧಿಕಾರಿಗಳು ಉದ್ದೇಶಿತ ಗುರಿಯಲ್ಲೇ ಅರ್ಧದಷ್ಟು ತೆರಿಗೆ ಸಂಗ್ರಹವಾಗಿದೆ.

ಎಲ್ಲೆಲ್ಲಿ, ಎಷ್ಟೆಷ್ಟು ಸಂಗ್ರಹ: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ 9 ವಲಯ ಕಚೇರಿಗಳಲ್ಲೂ ತೆರಿಗೆದಾರರು ಸ್ವಯಂ ಪ್ರೇರಣೆಯಿಂದ ತೆರಿಗೆ ಪಾವತಿಸಿ, ಶೇ.5ರಷ್ಟು ತೆರಿಗೆ ರಿಯಾಯಿತಿಯಡಿ ತೆರಿಗೆ ಪಾವತಿಸಿದ್ದಾರೆ. ಇದರಿಂದ ಪಾಲಿಕೆಯ 3 ವಲಯದಲ್ಲಿ ಅತಿಹೆಚ್ಚು ತೆರಿಗೆ ಸಂಗ್ರಹವಾಗಿದೆ. ಪಾಲಿಕೆ ವಲಯ ಕಚೇರಿ–1ರಲ್ಲಿ 9172 ಆಸ್ತಿಗೆ ಸೇರಿದ 12,26,04,751 ರೂ. ತೆರಿಗೆ ಸಂಗ್ರಹವಾಗಿದೆ. ವಲಯ ಕಚೇರಿ–2ರಲ್ಲಿ 13,424 ಆಸ್ತಿಯ 14,20,87,992 ರೂ., ವಲಯ ಕಚೇರಿ–3ರಲ್ಲಿ 17,962 ಆಸ್ತಿಗೆ ಸೇರಿದ 21,72,80,033 ರೂ., ವಲಯ ಕಚೇರಿ–4ರಲ್ಲಿ 7991 ಆಸ್ತಿಯಿಂದ 15,21,11,135 ರೂ., ವಲಯ ಕಚೇರಿ–5ರಲ್ಲಿ 10,100 ಆಸ್ತಿಯಿಂದ 9,97,91,922 ರೂ., ವಲಯ ಕಚೇರಿ–6ರಲ್ಲಿ 6534 ಆಸ್ತಿಯಿಂದ 17,57,14,838 ರೂ., ವಲಯ ಕಚೇರಿ–7ರಲ್ಲಿ 4962 ಆಸ್ತಿಯಿಂದ 6,47,73,821 ರೂ., ವಲಯ ಕಚೇರಿ–8ರಲ್ಲಿ 7057 ಆಸ್ತಿಯಿಂದ 6,09,94,031 ರೂ., ವಲಯ ಕಚೇರಿ–9ರಲ್ಲಿ 9470 ಆಸ್ತಿಯಿಂದ 8,97,47,738 ರೂ. ತೆರಿಗೆ ಸಂಗ್ರಹವಾಗಿದೆ.

29 ದಿನಗಳಲ್ಲಿ 121,39,11,204 ರೂ. ಪಾಲಿಕೆ ಬ್ಯಾಂಕ್ ಖಾತೆಗೆ ನೇರವಾಗಿ ತೆರಿಗೆ ಪಾವತಿಸಿದ್ದರೆ, 8,88,04,942 ರೂ. ಚೆಕ್ ರೂಪದಲ್ಲಿ ತೆರಿಗೆ ಪಾವತಿಸಲಾಗಿದೆ. ಒಟ್ಟಾರೆ ಮೈಸೂರು ಮಹಾನಗರ ಪಾಲಿಕೆ 121,39,11,204 ರೂ. ತೆರಿಗೆ ಸಂಗ್ರಹಿಸಿದೆ. ಸಂಗ್ರಹವಾದ ತೆರಿಗೆ ಹಣದಲ್ಲಿ 44,88,14,997 ರೂ. ಆನ್‌ಲೈನ್ ಪೇಮೆಂಟ್ ಮೂಲಕ ಬಂದಿದೆ. 15,41,07,565 ರೂ. ಕರ್ನಾಟಕ ಒನ್ ಕಚೇರಿಯಲ್ಲಿ ಪಾವತಿಸಲಾಗಿದೆ. 51,93,62,878 ರೂ. ಬ್ಯಾಂಕ್ ಕೌಂಟರ್‌ನಲ್ಲಿ ಜಮಾ ಆಗಿದ್ದರೆ, 28,20,821 ರೂ. ತೆರಿಗೆದಾರರು ಪಾಲಿಕೆ ಕಚೇರಿ ಕೌಂಟರ್‌ನಲ್ಲಿ ತೆರಿಗೆ ಕಟ್ಟಿದ್ದಾರೆ.

ವಿನಾಯಿತಿಗೆ ಇಂದೇ ಕಡೇ ದಿನ

ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿ ಸೌಲಭ್ಯ ಪಡೆಯಲು ಗುರುವಾರ(ಏ.30) ಕಡೆ ದಿನವಾಗಿದೆ. ಆದ್ದರಿಂದ ಕೊನೆ ದಿನ ಮತ್ತಷ್ಟು ತೆರಿಗೆದಾರರು ತೆರಿಗೆ ಪಾವತಿಸಲು ಮುಂದೆ ಬರುವ ಸಾಧ್ಯತೆ ಇದೆ.

ಅವಧಿ ವಿಸ್ತರಣೆಗೆ ಮನವಿ


ರಾಜ್ಯದಾದ್ಯಂತ ತೆರಿಗೆ ರಿಯಾಯಿತಿ ಅಭಿಯಾನ ನಡೆದಿದ್ದು, ಕೆಲವು ಜಿಲ್ಲೆಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೆ, ಮತ್ತೆ ಕೆಲವು ಕಡೆ ನಿರೀಕ್ಷಿತ ಗುರಿ ಸಾಧಿಸಲು ಸಾಧ್ಯವಾಗಿಲ್ಲ. ಬೇಸಿಗೆ ಬಿರು ಬಿಸಿಲಿನಿಂದ ಜನ ತತ್ತರಿಸಿದ್ದು, ಅನೇಕರು ತೆರಿಗೆ ಪಾವತಿಸಲು ಮನೆಯಿಂದ ಹೊರಗೆ ಬರಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಶೇ.5ರಷ್ಟು ತೆರಿಗೆ ವಿನಾಯಿತಿ ಅವಧಿಯನ್ನು ವಿಸ್ತರಿಸುವಂತೆ ಕೋರಿದೆ. ಆದರೆ, ಸರ್ಕಾರ ಇನ್ನು ಅವಧಿ ವಿತರಣೆಗೆ ಯಾವುದೇ ನಿಲುವು ಪ್ರಕಟಿಸಿಲ್ಲ.

ರಿಯಾಯಿತಿ ನಂತರ ಪೂರ್ಣ ಮೊತ್ತ ಪಾವತಿಸಬೇಕು

ಆಸ್ತಿ ತೆರಿಗೆ ಮೊತ್ತದಲ್ಲಿ ಶೇ.5ರಷ್ಟು ರಿಯಾಯ್ತಿ ಸೌಲಭ್ಯಕ್ಕೆ ಏ.30 ಕೊನೆ ದಿನವಾಗಿದೆ. ಆ ನಂತರ ಜೂನ್‌ವರೆಗೆ ಎರಡು ತಿಂಗಳು ನಿಗಧಿತ ಪ್ರಮಾಣದ ತೆರಿಗೆ ಪಾವತಿಸಬೇಕಾಗುತ್ತದೆ. ಈ ಅವಧಿಯಲ್ಲೂ ತೆರಿಗೆ ಪಾವತಿಸದೇ ಇದ್ದರೆ ದಂಡಾಸ್ತ್ರ ಪ್ರಯೋಗ ಕಾದಿದೆ. ಜುಲೈ ತಿಂಗಳಿಂದ ಪ್ರತಿ ತಿಂಗಳು ಶೇ.2ರಷ್ಟು ದಂಡ ವಿಧಿಸಲು ಪಾಲಿಕೆ ನಿರ್ಧರಿಸಿದೆ.

9ನೇ ಪುಟದಿಂದ ಮುಂದುವರೆದ ವರ್ಗೀಕೃತ ಜಾಹೀರಾತು

ಕೃತಜ್ಞತೆ ಸಲ್ಲಿಕೆ



ದಿನಾಂಕ: 30-04-2026 ರಂದು ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದುತ್ತಿದ್ದು. ನನ್ನ ಸೇವಾವಧಿಯಲ್ಲಿ, ನನಗೆ ವೇತನ ಮತ್ತು ಭತ್ಯೆ ನೀಡಿ ಸಲಹಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಆರೋಗ್ಯ ಮತ್ತು ಕು.ಕ ಇಲಾಖೆಗೆ ಮತ್ತು ನನಗೆ ಎಲ್ಲಾ ರೀತಿ ಸಹಕರಿಸಿದ ಹಿರಿಯ / ಕಿರಿಯ ಅಧಿಕಾರಿ / ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು ಮತ್ತು ಅನಂತಾನಂತ ವಂದನೆಗಳು

ಪ್ರಕಾಶ.ಬಿ, ಸ|ಆ|ಅಧಿಕಾರಿ
ಡಿ.ಹೆಚ್.ಓ ಕಚೇರಿ, ಮಂಡ್ಯ

39ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಬಿ.ಸುಶೀಲ ಮತ್ತು S.C ಬಸವರಾಜು (ಆನಂದ್)

ಶುಭಕೋರುವವರು: ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಸಿಂಧುವಳ್ಳಿ, ಮೈಸೂರು ತಾಲ್ಲೂಕು

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ (1) ಬೆಂಗಳೂರು ಸಿಟಿ – 560 046, ಚಿನ್ನಪ್ಪ ಗಾರ್ಡನ್, ಬಿ.ಎಂ.ಪಿ. ಪಾರ್ಕ್, 4ನೇ ಮುಖ್ಯ ರಸ್ತೆ, ಮನೆ ನಂ. 22ರಲ್ಲಿ ವಾಸವಾಗಿರುವ ಲೇಟ್ ಮೊಹಮ್ಮದ್ ಯೂನೂಸ್ ಸೇಠ್ ರವರ ಧರ್ಮಪತ್ನಿ ಶ್ರೀಮತಿ ಆಸಿಯಾ ಯೂನೂಸ್, (2) ಮಹಾರಾಷ್ಟ್ರ – 400 011, ಅಗ್ರಿಪಾದ ಮುಂಬೈ, ಸಾನೆ ಗುರೂಜಿ ಮಾರ್ಗ, ಫಾಸ್ ಗಲ್ಲಿ, ಹುಡಾ ಹೈಟ್ಸ್, 1ನೇ ಮಹಡಿ, ಫ್ಲಾಟ್ ನಂ. 102ರಲ್ಲಿ ವಾಸವಾಗಿರುವ ಲೇಟ್ ಮೊಹಮ್ಮದ್ ಯೂನೂಸ್ ಸೇಠ್ ರವರ ಮಗಳು ಹಾಗೂ ಶ್ರೀ ಯಾಹ್ಯಾ ದಿಯಾನ್ ರವರ ಧರ್ಮಪತ್ನಿ ಶ್ರೀಮತಿ ಹಾಜಿರಾ ಯಾಹ್ಯಾ ದಿಯಾನ್, (3) ಬೆಂಗಳೂರು ಸಿಟಿ – 560 046, ಚಿನ್ನಪ್ಪ ಗಾರ್ಡನ್, ಬಿ.ಎಂ.ಪಿ. ಪಾರ್ಕ್, 4ನೇ ಮುಖ್ಯ ರಸ್ತೆ, ಮನೆ ನಂ. 22 ರಲ್ಲಿ ವಾಸವಾಗಿರುವ ಲೇಟ್ ಮೊಹಮ್ಮದ್ ಯೂನೂಸ್ ಸೇಠ್ ರವರ ಮಗನಾದ ಶ್ರೀ ಅಬೂಬಕರ್ ಸೇಠ್, (4) ಬೆಂಗಳೂರು ಸಿಟಿ – 560 045, ಬೆಂಗಳೂರು ಉತ್ತರ, ಪಿಲ್ಲಣ್ಣ ಗಾರ್ಡನ್, ಮನಹಿಲ್ ಇಂಗ್ಲೀಷ್ ಹೈಸ್ಕೂಲ್ ಎದುರು, 3ನೇ ಹಂತ, 12ನೇ ಅಡ್ಡ ರಸ್ತೆ, 1ನೇ ಮಹಡಿ, ಮನೆ ನಂ. 370 ರಲ್ಲಿ ವಾಸವಾಗಿರುವ ಲೇಟ್ ಮೊಹಮ್ಮದ್ ಯೂನೂಸ್ ಸೇಠ್ ರವರ ಮಗಳು ಹಾಗೂ ಶ್ರೀ ನದೀಮ್ ಅಹ್ಮದ್ ಸೇಠ್ ರವರ ಧರ್ಮಪತ್ನಿ ಶ್ರೀಮತಿ ಅಖಿಲಾ ನದೀಮ್, (5) ತೆಲಂಗಾಣ – 500 008, ಹೈದರಾಬಾದ್, ಗೋಲ್ಕಂಡ, ಟೋಲಿಚೌಕಿ, ಸ್ಟಾರ್ ವಾಟರ್, 3ನೇ ಗೇಟ್ ಹತ್ತಿರ, ಪ್ಯಾರಾಮೌಂಟ್ ಹಿಲ್ಸ್ ಕಾಲೋನಿ, ಸೂಟ್ಸ್ 77, ಹೌಸ್ 8-1-398/ಪಿಎಂ/264 ಮತ್ತು 235, ಫ್ಲಾಟ್ ನಂ. 103ರಲ್ಲಿ ವಾಸವಾಗಿರುವ ಲೇಟ್ ಮೊಹಮ್ಮದ್ ಯೂನೂಸ್ ಸೇಠ್ ರವರ ಮಗಳು ಶ್ರೀಮತಿ ಜೋಹ್ರಾ ಬೀ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಿಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡರವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತಿನ ವಿವರ :

ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಅಬ್ಬಾ ರಸ್ತೆ (ಹೈದರಾಲಿ ರಸ್ತೆ) ಯಲ್ಲಿರುವ ಸ್ವತ್ತಿನ ಸಂಖ್ಯೆ 5/2 ಎನ್-5/12, ಮೈಸೂರು ಮಹಾನಗರ ಪಾಲಿಕೆಯಿಂದ ನೀಡಿರುವ ನಮೂನೆ-2 ರ ಪ್ರಕಾರ ಸ್ವತ್ತಿನ ಸಂಖ್ಯೆ 50-1-223-5/2ನ್ನು ಹೊಂದಿರುವ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 26.212852 ಮೀಟರ್ ಮತ್ತು ದಕ್ಷಿಣೋತ್ತರ 61.143002 ಮೀಟರ್, ಒಟ್ಟು ವಿಸ್ತೀರ್ಣ 1602.483847 ಚದರ ಮೀಟರ್ ಈ ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ಶ್ರೀ ಇಬ್ರಾಹಿಂ ಸೇಠ್ ಅಲಿಯಾಸ್ ಇಕ್ಬಾಲ್ ಸೇಠ್ ರವರಿಗೆ ನೀಡಲಾಗಿರುವ ಹಿಸ್ಸೆಯ ಸ್ವತ್ತಿನ ಸಂಖ್ಯೆ 3 ಮತ್ತು 11, ಪಶ್ಚಿಮಕ್ಕೆ : ಶ್ರೀ ಮೊಹಮ್ಮದ್ದ ಖಾಸಿಂ ಸೇಠ್ ಅಲಿಯಾಸ್ ಬಾಷ ಸೇಠ್ ರವರ ಹಿಸ್ಸೆಯ ಸ್ವತ್ತಿನ ಸಂಖ್ಯೆ 1 ಮತ್ತು 13, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಅಬ್ಬಾ ರಸ್ತೆ.

ಸಹಿ/- ಕೆ.ಎನ್. ಮಹಾದೇವಸ್ವಾಮಿ, ಬಿ.ಎಸ್‌ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ,
ರೂಂ ನಂ. 1 & 2, ಒಂದನೇ ಮಹಡಿ,
ಅಲ್ಲಮ್ಮ ಪ್ರಭು ಕೃಪ ಕಮರ್ಷಿಯಲ್ ಕಾಂಪ್ಲೆಕ್ಸ್,
5ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು- 570004
ಮೊ.: 94482 22522, ಕಛೇರಿ : 0821-4287998.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಲೋಕೇಶ್ ಆರ್ ರವರ ಪತ್ನಿ ಶ್ರೀಮತಿ. ಶಾಂತಲಾ. ಪಿ ರವರು ನನ್ನ ಕಕ್ಷಿದಾರರಿಗೆ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 [ಏಳು] ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಸೋಮೇಶ್ವರಪುರ ಗ್ರಾಮದಲ್ಲಿರುವ ಖುಷ್ಕಿ ಜಮೀನು. **ಐಟಂ ನಂಬರ್ 1:** ಸರ್ವೆ ನಂ . 11/3, ವಿಸ್ತೀಣ 20 ಗುಂಟೆ ಜಮೀನಿಗೆ ಚಕ್ಕುಬಂದಿ; ಪೂರ್ವಕ್ಕೆ – ಸರ್ವೆ ನಂ. 11/1ರ ಜಮೀನು, ಪಶ್ಚಿಮಕ್ಕೆ – ಸರ್ವೆ ನಂ. 11/4ರ ಜಮೀನು, ಉತ್ತರಕ್ಕೆ – ಸರ್ವೆ ನಂ. 11/1ರ ಜಮೀನು ಮತ್ತು ದಕ್ಷಿಣಕ್ಕೆ – ಸರ್ವೆ ನಂ. 7ರ ಜಮೀನು. **ಐಟಂ ನಂಬರ್ 1:** ಸರ್ವೆ ನಂ . 11/4, ವಿಸ್ತೀಣ 15 ಗುಂಟೆ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ – ಸರ್ವೆ ನಂ. 11/3ರ ಜಮೀನು, ಪಶ್ಚಿಮಕ್ಕೆ – ರಸ್ತೆ, ಉತ್ತರಕ್ಕೆ – ಸರ್ವೆ ನಂ. 11/1ರ ಜಮೀನು ಮತ್ತು ದಕ್ಷಿಣಕ್ಕೆ – ಸರ್ವೆ ನಂ. 7ರ ಜಮೀನು.

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು
ನಂ. 1416, ನಾರಾಯಣಶಾಸ್ತ್ರೀ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641,
email: sldlawfirm2021@gmail.com

ಮನೆ ಮಾರಾಟಕ್ಕಿದೆ

20'X30',
ಉತ್ತರ ದಿಕ್ಕಿನ ನಿವೇಶನದಲ್ಲಿ ನಿಮಗೆ ಇಷ್ಟವಾಗುವ ಹಾಗೆ ಮನೆ ಕಟ್ಟಿ ಕೊಡಲಾಗುತ್ತದೆ. ಶ್ರೀರಾಂಪುರ 2ನೇ ಹಂತ, ಮೈಸೂರು.
ಬೆಲೆ: ರೂ. 90 ಲಕ್ಷದಿಂದ 1 ಕೋಟಿವರೆಗೆ.
ಆಸಕ್ತರು ಸಂಪರ್ಕಿಸಿ:
97410-93410 / 63641-45148

ಬೇಕಾಗಿದ್ದಾರೆ

ಎಲೆಕ್ಟ್ರಿಷಿಯನ್ (Electrician) ಮೈಸೂರಿನ ಕಟ್ಟಡದಲ್ಲಿ ವೈರಿಂಗ್ ಮಾಡಲು ಒಂದು ವರ್ಷದ ಅನುಭವ ಇರಬೇಕು
9342593199

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್
ಗಾಯತ್ರಿ ಪುರಂ
8 ಗಂಟೆ
ಸಂಪರ್ಕಿಸಿ
9741552969
8494934335

MEGAVIN Vascular Care



10,000 ಕ್ಕಿಂತ ಹೆಚ್ಚು ರೋಗಿಗಳ ವಿಶ್ವಾಸ

ನಿಮ್ಮ ವೆರಿಕೋಸ್ ವೇನ್‌ಗಳಿಗಾಗಿ ನಮ್ಮ ಬಳಿ ಸುರಕ್ಷಿತ ಮತ್ತು ವಿಶ್ವಾಸಾರ್ಹ ಚಿಕಿತ್ಸೆ!

ಕಾಲುಗಳಲ್ಲಿ ನೋವು, ಸೆಳತ, ತುರಿಕೆ, ಊತ, ಚರ್ಮದ ಬಣ್ಣ ಕಪ್ಪಾಗುವುದು ಕಾಲಿನ ಗಾಯಗಳು

ಸಂದರ್ಶನ ಪ್ರತಿ ಶುಕ್ರವಾರ
01ನೇ, 8ನೇ, 15ನೇ, 22ನೇ 29ನೇ ಮೇ 2026

ರಾಮಕೃಷ್ಣ ಆಸ್ಪತ್ರೆ
ವಿದ್ಯಾರಣ್ಯಪುರಂ, ಮೈಸೂರು
10 pm to 2 pm

ಮಾನಸ ಅರ್ಥೋಪೆಡಿಕ್ ಆಸ್ಪತ್ರೆ
ಟಿ.ಕೆ. ಬಡಾವಣೆ , ಮೈಸೂರು
ಸಂಜೆ 3 ರ ನಂತರ

9035223471 - 9880462229

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷೀದಾರರಾದ ಮೈಸೂರು ಸಿಟಿ, ಸರಸ್ವತಿಪುರಂದ 5ನೇ. ಕ್ರಾಸ್, 13 ನೇ ಮುಖ್ಯ ರಸ್ತೆ, ಮನೆ ನಂ.270 ರಲ್ಲಿ ವಾಸವಾಗಿರುವ ಶ್ರೀ ರಾಜಶೇಖರ ಕೆ.ಎಸ್. ಇವರ ಮಗಳಾದ ಶ್ರೀಮತಿ ಶೃತಿ ಕೆ.ಆರ್. ರವರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲೋಕು, ಹಿರಿಸಾವೆ ಹೋಬಳಿ, ತೂಬಿನಕೆರೆ ದಾಖಲೆ ಕಲ್ಲಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಬೋರಯ್ಯನವರ ಮಗ ಶ್ರೀ.ಕೆ.ಬಿ.ಮಂಜುನಾಥ್ ಇವರಿಂದ ಖರೀದಿಸುತ್ತಿದ್ದು/ಕ್ರಯಕ್ಕೆ ಪಡೆಯುತ್ತಿದ್ದು ಸದರಿ ಸ್ವತ್ತಿನಲ್ಲಿ ಹಾಗು ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಹಕ್ಕು, ಅಧಿಕಾರ, ಹಿತಾಸಕ್ತಿಗಳಿಗೆ ಸಂಬಂಧ ಪಟ್ಟಂತೆ ಯಾರದೆ, ಯಾವುದೇ ತರಹದ ಹಕ್ಕು, ಅಧಿಕಾರ, ಹಿತಾಸಕ್ತಿಗಳು ಇದ್ದಲ್ಲಿ ಸದರಿ ತಕರಾರು/ಆಕ್ಷೇಪಣೆಗಳ ಬಗ್ಗೆ ಖುದ್ದಾಗಿ ಅಥವಾ ವಕೀಲರ ಮೂಲಕ 7 (ಏಳು) ದಿನಗಳೊಳಗೆ ಸಲ್ಲಿಸುವುದು ಸದರಿ ದಿನಗಳಲ್ಲಿ ಹಕ್ಕು ಹಿತಾಸಕ್ತಿಗಳ ಬಗ್ಗೆ ಯಾವುದೇ ತಕರಾರು/ ಆಕ್ಷೇಪಣೆಗಳು ಬಾರದಿದ್ದ ಪಕ್ಷದಲ್ಲಿ ನಮ್ಮ ಕಕ್ಷೀದಾರರು ಕಾನೂನಿನಡಿ ಷೆಡ್ಯೂಲ್ ಸ್ವತ್ತನ್ನು ವ್ಯವಹರಿಸಲು ಮುಂದುವರಿಯುವರು. ವ್ಯವಹರಿಸಿದ ನಂತರ ಯಾವುದೇ ತಕರಾರು/ ಆಕ್ಷೇಪಣೆಗಳು ಬಂದಲ್ಲಿ ಪರಿಗಣಿಸಲಾಗುವುದಿಲ್ಲ. ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಶ್ರೀರಾಂಪುರ, 2 ನೇ ಹಂತ, ಎಸ್.ಬಿ.ಎಂ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ನಿರ್ಮಿಸಿರುವ ಬಡಾವಣೆ ಯಲ್ಲಿರುವ ಬ್ಲಾಕ್ ನಂ.22ರ ಖಾಲಿ ನಿದೇಶನ ನಂ.10 ರ ಪೂರ್ವ ಪಶ್ಚಿಮ 47+62/2 ಅಡಿಗಳು ಉತ್ತರ ದಕ್ಷಿಣ 88+91/2 ಅಡಿಗಳು ಒಟ್ಟು 4877.75 ಚದರ ಅಡಿಗಳು ಉಳ್ಳ ಖಾಲಿ ನಿವೇಶನ, ಇದಕ್ಕೆ ಚಕ್ಕುಬಂದಿ. ಪೂರ್ವಕ್ಕೆ : ಗಡಿ, ಪಶ್ಚಿಮಕ್ಕೆ : ನಿವೇಶನ ನಂ.11, ಉತ್ತರಕ್ಕೆ : ನಿವೇಶನ ನಂ.09, ದಕ್ಷಿಣಕ್ಕೆ : ರಸ್ತೆ,

ಸಹಿ/- ಗೌಡ ರಾಜಶ್ರೀ ಗೋವಿಂದ್,
ಬಿ.ಎಸ್.ಸಿ, ಎಲ್.ಎಲ್.ಬಿ, ವಕೀಲರು,
ರೋಲ್ ನಂ.1110/99, #296/3,
ಲಕ್ಷ್ಮಿ ವಿಲಾಸ ರಸ್ತೆ, ಕರೂರು ವೈಶ್ಯ ಬ್ಯಾಂಕ್ ಎದುರು,
ದೇವರಾಜ ಮೊಹಲ್ಲಾ, ಮೈಸೂರು-04.
ಮೊ : 9880479678, 9900655615.

WANTED

B.Sc./B.A. B.Ed.
Maths, Science, Social, Hindi
SUNANDHA ACADEMY SCHOOL
Whatsapp: +91 99007 72235

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

5ನೇ ವರ್ಷದ ಸವಿನೆನಪು



ರೇಣುಕಾ .ಹೆಚ್
ಜನನ: 31.07.1963 ಮರಣ: 30.04.2021
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು : ಕುಟುಂಬವರ್ಗ

69 projects — Designing your Dreams | Vee2 Developers

POORVA SHELTERS
Phase -II
NEAR TO MARVEL PU COLLEGE LALITHADRIPURA
₹ 3,800/- per sqft
20x30 | 30x40 & 20x40 | 30x50

POORVA SHELTERS
Phase - III
₹ 2,299/- per sqft
Near the upcoming JSS UNIVERSITY
8088-707-707



ಹಸಿರು ನಮ್ಮ ಉಸಿರು

Geethanjali Education Society®
GEETHANJALI INTERNATIONAL GLOBAL SCHOOL (CBSE)

WALK-IN-INTERVIEW

(Between 2pm to 4pm on 02nd May)
We are inviting applications from qualified and motivated teachers with strong academic skills. Fluency in English is compulsory.

Sl. No.	POSTS	SUBJECTS	EDUCATION QUALIFICATION
1	Pre-Primary Teachers	ALL	Graduation with Montessori training.
2	PRT	ALL	BA/ B.Sc, B.Ed
3	TGT	ALL	MA/M.Sc, B.Ed
4	Others	1. Physical Education 2. Karate 3. Dance 4. Music	As per CBSE Norms
5	Helping Staff		SSLC
6	Security Guard		SSLC

Teachers having experience in CBSE schools and also having flair for innovative teaching methods are preferred.

Venue: CA-7, BEML LAYOUT, 2nd STAGE, SRIRAMPURA, MYSORE- 570023 Ph: 9110285914, 0821-2513349

5ನೇ ವರ್ಷದ ಸವಿನೆನಪು



ಜನನ: 07-02-1974 ನಿಧನ: 30-04-2021

ಕಲ್ಪನ

ಸನ್ ಲೈಟ್ ಕ್ಲೀನರ್ಸ್ & ಡೈಯರ್ಸ್, ಕೆ.ಆರ್ ಸರ್ಕಲ್, ಮೈಸೂರು
ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತಿ: ಶಂಕರ್ ಎಂ, ಮಕ್ಕಳು: ನಿಶ್ಚಯ್ ಎಸ್, ಅಕ್ಷಯ್ ಎಸ್, ಸೊಸೆಯಂದಿರು : ಶೀತಲ್, ಅನುಷ್ಯ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿರುವ ಮಾಲೀಕರುಗಳು ತಮ್ಮ ಸ್ವಾಧೀನಾನುಭವದಲ್ಲಿರುವ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಹರವೆ ಹೋಬಳಿ, ಕೊತ್ತಲವಾಡಿ ಗ್ರಾಮಕ್ಕೆ ಸೇರಿದ ಜಮೀನುಗಳು ಹಾಗೂ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ತೆರಕಣಾಂಬಿ ಹೋಬಳಿ, ತೆರಕಣಾಂಬಿ ಗ್ರಾಮಕ್ಕೆ ಸೇರಿದ ಜಮೀನುಗಳ ಒಟ್ಟು ವಿಸ್ತೀರ್ಣ 27 ಎಕರೆ 03 ಗುಂಟೆ ಜಮೀನುಗಳ ಮಾಲೀಕರ ಹೆಸರು ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿ ಈ ಕೆಳಕಂಡಂತಿದೆ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಹರವೆ ಹೋಬಳಿ, ಕೊತ್ತಲವಾಡಿ ಗ್ರಾಮಕ್ಕೆ ಸೇರಿದ ಜಮೀನುಗಳ ವಿವರ ಈ ಕೆಳಕಂಡಂತಿದೆ.

ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ	ಗು	ಚಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಲೇಟ್ ಪರಮೇಶ್ವರಪ್ಪ. ಕೆ. ಎನ್ ರವರ ವಾರಸುದಾರರಾದ ಚಿನ್ನತಾಯಮ್ಮ ಮತ್ತು ಇತರರು	194/2	01	20	Sy. No. 193	Sy. No. 193 & Sy. No. 194/1	Sy. No. 193	Sy. No. 193
ಗುರುಸ್ವಾಮಿ ಬಿನ್ ಸಿದ್ದಪ್ಪ	199/2	01	02	Sy. No. 199/3	Sy. No. 198/4 & Sy. No. 198/3	Sy. No. 199/1	Sy. No. 193
ಲೇಟ್ ದೇವರಾಜಶೆಟ್ಟಿ, ವಾರಸುದಾರರಾದ ನಾಗರಾಜಮ್ಮ ಮತ್ತು ಇತರರು	226/3	02	30	Sy. No. 226/1	Sy. No. 225/2 & Sy. No. 226/2	Sy. No. 226/2	Sy. No. 224 & Sy. No. 227
ಕೋದಂಡಪಾಣಿ ಬಿನ್ ಸ್ವಾಮಿನಾಥನ್	231/1	00	30	Sy. No. 230	Sy. No. 231/2	Sy. No. 232/1A	Sy. No. 231/3
	231/2	00	23	Sy. No. 231/1	Sy. No. 233/1 & Sy. No. 233/2	Sy. No. 232/2	Sy. No. 231/3
	231/3	03	31	Sy. No. 230 & Sy. No. 229	Sy. No. 233/2	Sy. No. 231/1 & Sy. No. 231/2	Sy. No. 226/2
	232/2	02	09	Sy. No. 232/1A & Sy. No. 232/1B	Sy. No. 233/1	Sy. No. 235 & Sy. No. 240/2	Sy. No. 231/2
	232/3	00	29	Sy. No. 232/1A & Sy. No. 232/1B	Sy. No. 233/1	Sy. No. 235 & Sy. No. 240/2	Sy. No. 231/2
ಚಿಕ್ಕಮಾದಶೆಟ್ಟಿ ಬಿನ್ ದೇವಶೆಟ್ಟಿ	193/19	02	04	ಪಾರ್ವತಮ್ಮ ಜಮೀನು (Sy. No. 193)	ದೇವಶೆಟ್ಟಿ ಜಮೀನು (Sy. No. 193)	ಸಿದ್ದಶೆಟ್ಟಿ ಜಮೀನು (Sy. No. 193)	ಶಿವಬಸಪ್ಪ ಜಮೀನು (Sy. No. 193)
ಶಾಂತಪ್ಪ ಬಿನ್ ಲೇಟ್ ಮಾದಪ್ಪ	193/34	01	10	ದೊಡ್ಡಗಂಡು ಜಮೀನು (Sy. No. 193)	ಮಾದಶೆಟ್ಟಿ (Sy. No. 193)	ಕರಿಯ ಸೊತ್ತ ಜಮೀನು (Sy. No. 193)	ಕೆ.ಜಿ. ಗುರುಸ್ವಾಮಿ ಜಮೀನು (Sy. No. 193)
ರಂಗಸ್ವಾಮಿ ಬಿನ್ ಪುಟ್ಟಮಾದಶೆಟ್ಟಿ	193/11	02	35	ಸರ್ಕಾರಿ ರಸ್ತೆ	ಸರ್ಕಾರಿ ಗುಡ್ಡ	ಸರ್ಕಾರಿ ಜಮೀನು (ವಾಟರ್ ಟ್ಯಾಂಕ್)	ನಾಗರಾಜ ಶೆಟ್ಟಿ ಜಮೀನು (Sy. No. 193)
ದೇವಶೆಟ್ಟಿ ಬಿನ್ ದ್ಯಾವಶೆಟ್ಟಿ	193/20	04	00	ಶಿವಬಸಪ್ಪ ಜಮೀನು (Sy. No. 193)	ದೇವಶೆಟ್ಟಿ ಜಮೀನು (Sy. No. 193)	ಚಿಕ್ಕಮಾದಶೆಟ್ಟಿ ಜಮೀನು (Sy. No. 193)	ಶಂಕರ ಜಮೀನು (Sy. No. 193)
ದೇವಮ್ಮ ಕೋಂ ದೇವಶೆಟ್ಟಿ	193/5	01	26	ಚಿಕ್ಕಮಾದಶೆಟ್ಟಿ ಜಮೀನು (Sy. No. 193)	ಬಸವಣ್ಣ ಜಮೀನು (Sy. No. 193)	ಮಾದಶೆಟ್ಟಿ ಜಮೀನು (Sy. No. 193)	ಶಿವಬಸಪ್ಪ ಜಮೀನು (Sy. No. 193)
ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ತೆರಕಣಾಂಬಿ ಹೋಬಳಿ, ತೆರಕಣಾಂಬಿ ಗ್ರಾಮಕ್ಕೆ ಸೇರಿದ ಜಮೀನುಗಳ ವಿವರ ಈ ಕೆಳಕಂಡಂತಿದೆ.							
ಮರಿಶೆಟ್ಟಿ ಬಿನ್ ಗೋವಿಂದಶೆಟ್ಟಿ	396	02	20	ಚಾಮಶೆಟ್ಟಿ ಜಮೀನು (Sy. No. 396)	ಕರಿಯಯ್ಯ ಜಮೀನು (Sy. No. 396)	ಬಿಳಿಗಿರಿಶೆಟ್ಟಿ ಜಮೀನು (Sy. No. 193)	ಬಸವಣ್ಣ ಮತ್ತು ಮಾದಪ್ಪ ಜಮೀನು (Sy. No. 193)
ಮಹದೇವಶೆಟ್ಟಿ ಬಿನ್ ಕೆಂಪಶೆಟ್ಟಿ	396	01	10	ಗೋವಿಂದಶೆಟ್ಟಿ ಜಮೀನು (Sy. No. 396)	ಗೋವಿಂದಶೆಟ್ಟಿ ಜಮೀನು (Sy. No. 396)	ನವಿಲೂರು ಮಾದಪ್ಪ ಜಮೀನು (Sy. No. 396)	ಬಸವಣ್ಣ ಕಟ್ಟವಾಡಿ ಜಮೀನು (Sy. No. 396)
ಒಟ್ಟು ವಿಸ್ತೀರ್ಣ		27	03				


ಎಸ್‌ಎಲ್‌ಡಿ ಲಾ ಫರ್ಮ್
ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು, ನಂ. 1416, ನಾರಾಯಣಶಾಸ್ತ್ರೀ ರಸ್ತೆ, ಸಪ್ನ ಬುಕ್ , ಹೌಸ್ ಹತ್ತಿರ, ಮೈಸೂರು.
ಮೊ: 9844640641, email: sldlawfirm2021@gmail.com

RAM TUITION CENTER

Since - 1997
CET / NEET CLASSES : 2026-27
A UNIQUE WAY TO CRACK CET
CET / NEET DEMO CLASSES
This Sunday 03-05-2026
Venue :
Agrahara & Kuvempunagar Braches
Limited Seats, Enroll immediately
Enroll your Name to Mahendra Within this Friday
Contact : 81973 63131

ABHYUDAYA PUBLIC SCHOOL
CA-2, BSNL LAYOUT , MANASI NAGAR, MYSURU-570029

100% RESULTS IN SSLC 2025-2026



THANMAYI MAHESH 96.16% | THANU A SHINDE 94.56% | JEEVITHASHREE R 94.4% | AMITH GOWDA D 93.76% | DEEPAK PRAKASH S 93.6%
YATISH S 92.16% | SATVIK BHARADWAJ P R 92% | H R JEEVITHA 88.16% | A NAKUL NALLODE 87.04% | KUNAL RAO S 86.72%
MONISHA N 86.08% | SRUJAN S 86.08% | YASHWANTH GOWDA S R 85.92% | DEEKSHAPRIYA R 85.12% | R YASHWANTH ARADHAYA 83.52%

STUDENTS APPEARED : 34 DISTINCTION : 14
FIRST CLASS : 16 SECOND CLASS : 4

HEARTY CONGRATULATIONS & BEST WISHES FROM MANAGEMENT & STAFF

ಸಪ್ತಸ್ವರ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ

Code: 29264100832 :0821-2973030
ಸಪ್ತಸ್ವರ ಎಜುಕೇಷನ್ ಸೊಸೈಟಿ (ರಿ.)
ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ.
SAPTHASWARA HIGHER PRIMARY AND HIGH SCHOOL
Recognised by Government of Karnataka
ಬಿ.ಎಂ. ಶ್ರೀ ನಗರ, ಮೈಸೂರು – 570 016.
Date : 29/4/2026
SAPTHASWARA UN-AIDED HIGH SCHOOL:-

WANTED TEACHER'S

S.L NO.	QUALIFICATIONS	TEACHING SUBJECT	MEDIUM OF TEACHING	NO. OF TEACHING POST	REQUIRED CANDIDATES
1)	B.SC: B.ED (PCM)	SCIENCE	KANNADA	01	FEMALE
2)	B.SC: B.ED (CBZ)	SCIENCE	KANNADA	01	FEMALE
3)	B.SC: B.ED (PCM)	SCIENCE	ENGLISH	01	FEMALE
4)	B.SC: B.ED (CBZ)	SCIENCE	ENGLISH	01	FEMALE
5)	PUC ; D.ED	SCIENCE & MATHEMATICS	ENGLISH	01	FEMALE
6)	D-GROUP WORKERS (AYA)	....	....	02 (AYA POST)	FEMALE

INTERESTED CANDIDATES CONTACT THIS Phone No: 9916195956 or WHATSAPP YOUR RESUME TO THIS PHONE NO: 9916195956 SD/- HM